
# ಅಪರಂಜಿ

ತಿಳಿನಗೆಯ ಕಾರಂಜಿ

ಫೆಬ್ರವರಿ 2023




ಬಿಡಿ ಪ್ರತಿ: ರೂ. 10/-

TEMPLE OF KNOWLEDGE

## ಪುಸ್ತಕವಿಲ್ಲದ ಕೋಣೆ ಆತ್ಮವಿಲ್ಲದ ದೇಹವಿದ್ದಂತೆ

ಬೀChiಯವರ ವಿಡಂಬನೆ ಹಾಸ್ಯದ ಮೂಲಕ ಮೌಲ್ಯಗಳು ಬೆಳೆಯುತ್ತದೆ ಹಾಗೂ ಬೀChi ಅವರ ಪುಸ್ತಕಗಳು ಪ್ರೇರಣೆ, ಸ್ಫೂರ್ತಿ ಮತ್ತು ಮನರಂಜನೆಯಿಂದ ತುಂಬಿವೆ ಸಕಾರಾತ್ಮಕ ಪರಿಣಾಮ ಬೀರುತ್ತದೆ.

**50 ಪುಸ್ತಕಗಳ ಪ್ಯಾಕ್**

ನಿಮಗಾಗಿ ಮತ್ತು ಇತರರಿಗೆ ಉಡುಗೊರೆಯಾಗಿ ನೀಡಲು ಈ ಅದ್ಭುತ ಪುಸ್ತಕಗಳ ಸಂಗ್ರಹವನ್ನು ಖರೀದಿಸಿ ಆಸಕ್ತ ಓದುಗರು, ಶಾಲೆಗಳು, ಕಾಲೇಜುಗಳು, ಕಾರ್ಪೊರೇಟ್‌ಗಳು, ವಿಶ್ವವಿದ್ಯಾನಿಲಯಗಳು ಮತ್ತು ಓದಲು ಆಸಕ್ತಿ ಹೊಂದಿರುವ ಇತರ ಸಂಸ್ಥೆಗಳಿಗೆ ಇದನ್ನು ಹಂಚಿಕೊಳ್ಳಿ. ಪುಸ್ತಕಗಳು ನಿಮ್ಮ ಮನೆ ಸೇರಲಿ ಹಾಗೂ ಬಂಧುಗಳಿಗೆ, ಸ್ನೇಹಿತರಿಗೆ ಕಾಣಿಕೆಯಾಗಿ ಎಲ್ಲಾ ಸಮಾರಂಭಕ್ಕೂ ಪುಸ್ತಕಗಳು ಉಡುಗೊರೆಯಾಗಿ ಕೊಡಬಹುದು.

**ಬೆಲೆ ರೂ7592 after discount ರೂ 6799 ಪ್ರತಿಗಳನ್ನು ಪಡೆಯಲು ಸಂಪರ್ಕಿಸಿ**


Pay 9845264304

**ಆಸಕ್ತರು ಸಂಪರ್ಕಿಸಿ : 080–29731414 ಮೊ : 9035302302**

---

## BEECHI PRAKASHANA

## ಬೀchi ಪ್ರಕಾಶನ,



### BOOKS AVAILABLE

- Kannada Books
- Banking Exam Books
- Biographies
- Business & Economics
- Children & Young Adult Books
- Comics
- Competitive Exam Books
- Engineering Entrance Exam
- Fiction & Non-Fiction Books
- Office Stationery
- ಕನ್ನಡ ಪುಸ್ತಕಗಳು
- Health & Family
- Humour
- Law
- Literature
- Medical Entrance
- Politics
- Reference Books
- Religion & Spirituality
- Romance
- Other Books

Email : admin@beechi.in | www.beechi.in | 9845264304

# Ravi Graphics
OFFSET PRINTERS

*Bringing colours alive*

***What we specialize into :***

- Books
- Brochures
- Catelogues
- Boxes
- Mono Cartons



53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com

Bag is everything

# bag factory
bagfactory.co.in

## Our Promise

- 100% recyclable paper bags & pouches
- Pan-India delivery
- Premium customisation for high-street brands




Reach us for your paper bag requirements

**+91 89719 95599 | sales@bagfactory.co.in | bagfactory.co.in**

Published on 3rd of every month
Mailed on 5th of every month
Mailed at: Bangalore P.S.O. 560026

REGISTERED KA/BGW-544/2021-2023
**RNI NO. KAR-KAN/2005/15457**

Certificate No.: MC-2068

# ಮಲ್ಲಿಗೆ ಆಸ್ಪತ್ರೆ

**ವೈಯಕ್ತಿಕ ಸಂಪೂರ್ಣ ಆರೋಗ್ಯ ಆರೈಕೆ**

# MALLIGE HOSPITAL

PERSONALISED COMPLETE HEALTHCARE




**ಮಲ್ಲಿಗೆ ಮೆಡಿಕಲ್ ಸೆಂಟರ್ ಪ್ರೈವೆಟ್ ಲಿಮಿಟೆಡ್**
೩೧ ಮತ್ತು ೩೨ ಕ್ರೆಸೆಂಟ್ ರಸ್ತೆ, ಬೆಂಗಳೂರು ೫೬೦೦೦೧, ಭಾರತ
ದೂರವಾಣಿ - +೯೧.೮೦.೬೭೧೬೫೫೫೫, +೯೧.೮೦.೨೨೨೦೩೩೩೩ ಮಿಂಚಂಚು - info@ಮಲ್ಲಿಗೆ.com ಜಾಲತಾಲ - www.ಮಲ್ಲಿಗೆ.com

**MALLIGE MEDICAL CENTRE PVT. LTD.**
31 & 32 Crescent Road, Bangalore 560001, India
Phone: +91.80.67165555, +91.80.22203333 Email: info@mallige.com Web: www.mallige.com

Printed by: V.R. BHARATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.
Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor : M. SHIVAKUMAR
No. of Pages: 40+4 APARANJI KANNADA MONTHLY.

**ಸಂಪಾದಕ ಮಂಡಳಿ**

**ಸಂಪಾದಕರು**

**ಶ್ರೀ ಎಂ. ಶಿವಕುಮಾರ್**

**ಉಪ ಸಂಪಾದಕರು**

**ಶ್ರೀ ಬೇಲೂರು ರಾಮಮೂರ್ತಿ**

**ಸದಸ್ಯರು**

**ಶ್ರೀ ಎಚ್. ಎನ್. ಆನಂದ**
**ಶ್ರೀ ಎಚ್. ಗೋಪಾಲಕೃಷ್ಣ**

ಆಡಳಿತ ಮಂಡಳಿ

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/–
ವಾರ್ಷಿಕ ಚಂದಾ : ರೂ. 100/–
ಹತ್ತು ವರ್ಷದ ಚಂದಾ: ರೂ. 750/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

**ತಿಳಿನಗೆಯ ಕಾರಂಜಿ**

**ಸಂಪುಟ 40**
**ಸಂಚಿಕೆ – 5**
**ಫೆಬ್ರವರಿ–2023**

## *ಈ ಸಂಚಿಕೆಯಲ್ಲಿ...*


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಸಂಕ್ರಾಂತಿ–2013 | ಶಿವಕುಮಾರ್ | 5 |
| 360$^0$ ಶಿಕ್ಷಾಲೋಕ | ಎಸ್. ಎನ್. ಗಣನಾಥ | 8 |
| ಐ....ಸ್ಕ್ರೀಮ್......!!!!!! | ಸಿ.ಎ. ವಿಲಾಸ ಹುದ್ದಾರ | 11 |
| ಬಯಸಿದ್ದು ದಕ್ಕಿದ್ದು | ನಾಗರತ್ನ ಭಟ್ | 13 |
| ಫೋಟೋ ಶೂಟ್ | ಜಿ.ವಿ. ನಿರ್ಮಲ | 14 |
| ಪಾರ್ಕಿಂಗ್ ಪ್ರಮೇಯದ ಫಜೀತಿ | ಕೆ.ಎಸ್. ಸೋಮೇಶ್ವರ | 17 |
| ಕೆರೆಯ ನೀರನು ಕೆರೆಗೆ ಚೆಲ್ಲಿ | ಪುಷ್ಪಲತ ಟಿ.ಜಿ | 19 |
| ನೂಲಿನಂತೆ ಸೀರೆ, ತಾಯಿಯಂತಲ್ಲ ಮಗಳು | ನಳಿನಿ ಸೂರ್ಯಪ್ರಕಾಶ್ | 23 |
| ರೋಬೋಟ್ ರಗಳೆ | ಅರವಿಂದ ಜೋಶಿ | 26 |
| ತುಣಕು ಮಿಣಕು | ವಿ.ವಿಜಯೇಂದ್ರ ರಾವ್ | 29 |
| ತುಂತುರು | ದಂನಆ | 32 |
| ಕಳೆದೋಯ್ತ್ ಅಂತ ಕುಣಿದಾಡ್ತೀನಿ.....! | ಸುಮಾ ರಮೇಶ್ | 33 |
| ಕಾಫಿ ಎಂಬ ಸಖಿನ ಕುರಿತು ! | ಜೋಗಿ | 36 |
| ಪುಸ್ತಕ ಪರಿಚಯ | ವೈ. ಎನ್. ಗುಂಡೂರಾವ್ | 40 |


**ವ್ಯಂಗ್ಯ ಚಿತ್ರಗಳು:**
ಹೊರ ಪುಟ–ಸುನಿಲ್ ಅಗರ್ವಾಲ್
ಒಳ ಪುಟ–ಅಶೋಕ್ ಹೆಮ್ಮಿಗೆ

*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,*
*ಬೆಂಗಳೂರು – 560 003,* email: koravanjiaparanji@gmail.com ಮೊಬೈಲ್:9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560 068. ದೂರವಾಣಿ: 080–26688488. email:belururamamurthy@gmail.com

**For Online payment of ubscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿ) ಸಹಕಾರನಗರ*



## ಅಪರಂಜಿ ಕಿಡಿ

• ಪ್ರಕಾಶ್

ಮೌಲ್ಯಗಳ ಪುನರ್ಪ್ರತಿಷ್ಠಾಪನೆ ಆಗಲಿ ಹೇಳಿಕೆ ಎಲ್ಲಿ,
ಯಾರಿಂದ, ಹೇಗೆ, ಯಾವಾಗ ???

***

ನೈತಿಕ ಶಿಕ್ಷಣ ಭಾರವಾದ ಪುಸ್ತಕಗಳು ಟೀಕೆ
ಮಕ್ಕಳಿಗೆ ಕರುಣೆ ಬದಲು ಭಾರ ಅನೈತಿಕ ಅಲ್ಲವೇ ??

***

ರಸ್ತೆ ಕುಸಿತ ; ಕಾರಣ ನಿಗೂಢ ಪತ್ರಿಕೆ
ಹಿಂದೆ ಅರಾಸೇ ಬರೆದಿದ್ದು ––––ತಜ್ಞರ ಸಮಿತಿ ಸೇತುವೆ
ಬಿದ್ದಕಾರಣ ಅದರ ಕೆಳಗೆ ಖಾಲಿ ಜಾಗ ಇದ್ದದ್ದಕ್ಕೆ !

***

ಯಾದವರ ಸಂಜಾತ ಸೂರ್ಯ ಇನ್ನಷ್ಟು ಬೆಳಗಲಿ ಅಂತ
ಅಪರಂಜಿಹರಸಿದಳಂತೆ !

***

ಪ್ರತಿ ಮನೆಗೂ 200 ಯೂನಿಟ್ ವಿದ್ಯುತ್
ಶ್ರೀಮತಿ ಪ್ರಿಯಾಂಕಾ ವಾಡ್ರ
ಚುನಾವಣಾ ರೋದನ ಅಂದರೆ ಇದೇ !! ಇರಬೇಕು !!?

***

ಆಸ್ತಿ ವಿವರ ಸಲ್ಲಿಸದ 58 ಶಾಸಕರು ದಿನ ಪತ್ರಿಕೆ
ಹೇಳಿಕೊಳ್ಳಲು ನಾಚಿಕೆಯೇನೋ ಪಾಪ !?

***

ಕುಲಾಂತರ ಸಾಸಿವೆಗೆ ತರಾತುರಿ ಒಪ್ಪಿಗೆ ಪತ್ರಿಕೆ
ಜೇನುನೊಣಗಳು ಝೇಂಕಾರದಿಂದ ಪ್ರತಿಭಟಿಸಿದ್ದವಂತೆ !!

***

■

# "ನಮ್ಮ ನಿಮ್ಮಲ್ಲಿ"

**ಶಿವಕುಮಾರ್**

ಹಲವು ದಿನಗಳ ಹಿಂದೆ ನನ್ನ ಆಪ್ತ ಗೆಳೆಯ ಪಿ.ಆರ್ ಫೋನ್ ಮಾಡಿ " ನಿಮ್ಹಾನ್ಸ್ ಸಭಾಂಗಣದಲ್ಲಿ ಒಂದು ಇಡೀ ದಿನದ ವೈದ್ಯಕೀಯ ಕಾರ್ಯಕ್ರಮ ಇದೆ. ಶರಣ್ ಏರ್ಪಡಿಸಿರೋದು. ಮುಂದಿನ ಭಾನುವಾರ. ಖಂಡಿತ ಬರಬೇಕು " ಅಂತ ಆಹ್ವಾನಿಸಿದ್ದ. ಶರಣ್ ನನ್ನ ಗೆಳೆಯನ ಮಗ. ಚುರುಕು ಬಾಲಕ, ಉತ್ಸಾಹಿ ತರುಣ ಈ ಹಂತಗಳನ್ನು ದಾಟಿ ವೈದ್ಯ ಶಿಕ್ಷಣವನ್ನು ಯಶಸ್ವಿಯಾಗಿ ಮುಗಿಸಿ, ತದನಂತರ ಮಿದಿಳು, ನರಗಳ ಶಸ್ತ್ರ ಚಿಕಿತ್ಸೆಯಲ್ಲಿ ವಿಶೇಷ ಅನುಭವವನ್ನು ಗಳಿಸಿರುವ ಡಾ॥ ಶರಣ್ ತಮ್ಮ ಕ್ಷೇತ್ರದಲ್ಲಿ ಅಸಾಧಾರಣ ಯಶಸ್ಸನ್ನು ಗಳಿಸಿರುವುದು ಸಹಜವಾಗಿಯೇ ನಮಗೆಲ್ಲಾ ಹೆಮ್ಮೆಯ ಸಂಗತಿ. ಹಾಗಾಗಿ ವೈದ್ಯಕೀಯ ವಿಷಯಗಳನ್ನು ನಾನು ಎಷ್ಟು ಅರ್ಥಮಾಡಿಕೊಳ್ಳಬಲ್ಲೆ ಎಂಬುದರ ಬಗ್ಗೆ ನನಗೆ ಆಳವಾದ ಸಂಶಯಗಳಿದ್ದರೂ, ಹೊಸ ವಿಷಯಗಳನ್ನು ತಿಳಿದುಕೊಳ್ಳುವ ಪ್ರಯತ್ನ ಎಂದಿಗೂ ನಮ್ಮ ಜೀವನ ಪ್ರೀತಿಯನ್ನು ಕುಂದದಂತೆ ಇಟ್ಟಿರುತ್ತದೆ ಎಂಬ ನಂಬಿಕೆಯಿಂದ ಮೊನ್ನೆ ಭಾನುವಾರ ನಿಮ್ಹಾನ್ಸ್ ಸಭಾಂಗಣಕ್ಕೆ ಕಾಲಿಟ್ಟೆ. ಬಾಗಿಲಲ್ಲೇ ನನಗೆ ದೊರಕಿದ ವಾತ್ಸಲ್ಯಪೂರಿತ ಸ್ವಾಗತ ನಿಜಕ್ಕೂ ಒಂದು ಬೆಚ್ಚಗಿನ ಅನುಭವ. ಅಲ್ಲಿನ ಹೊರಾಂಗಣದಲ್ಲಿ ಇದ್ದ ಸ್ಟಾಲುಗಳನ್ನು ನೋಡಿದ ನಂತರ ಅಂದಿನ ಕಾರ್ಯಕ್ರಮದ ರೂಪುರೇಷೆಗಳ ವಿವರಗಳು ಸ್ವಲ್ಪಮಟ್ಟಿಗೆ ಅರಿವಾಯಿತು.

ಮಿದಿಳಿನ ಕಾರ್ಯವಿಧಾನದಲ್ಲಿ ಯಾವುದೇ ಕಾರಣಗಳಿಂದ ಏರುಪೇರುಗಳಾದರೆ ಕೈ, ಕಾಲುಗಳ ಚಾಲನೆ, ಮಾತುಗಾರಿಕೆ, ನುಂಗುವಿಕೆ ಇವೆಲ್ಲಾ ಕಾರ್ಯಗಳಿಗೆ ವಿವಿಧ ಮಟ್ಟಗಳಲ್ಲಿ ಧಕ್ಕೆಯಾಗಬಲ್ಲದು. ಇಂತಹ ತೊಂದರೆಯುಳ್ಳ ಸಂತ್ರಸ್ತರಿಗೆ ಅವರ ಮಿದಿಳುಗಳಲ್ಲಿನ ತೊಂದರೆಗಳನ್ನು ಶಸ್ತ್ರ ಚಿಕಿತ್ಸೆಯಿಂದ ಆದಷ್ಟುಮಟ್ಟಿಗೆ ಸರಿಪಡಿಸಿ, ಅನಂತರ ತೊಂದರೆಗೊಳಗಾದ ಅಂಗಗಳನ್ನು ಫಿಸಿಯೋ ಥೆರಪಿ ಮುಂತಾದ ಉಪಚಾರಗಳಿಂದ ಆ ಅಂಗಗಳ ಸಹಜ ಕಾರ್ಯಗಳನ್ನು ಪುನರ್ಪ್ರಾಪ್ತಿಗೊಳಿಸುವ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅಲ್ಲಿನ ಸ್ಟಾಲುಗಳು ವಿವರಗಳನ್ನು ನೀಡುತ್ತಿದ್ದವು.

ಒಂದು ಕುತೂಹಲ ಮೂಡಿಸುವ ವಿಷಯವೆಂದರೆ ಮನುಷ್ಯನ ನರವ್ಯೂಹ ಎಲ್ಲಾ ಅಂಗಾಂಗಗಳಿಂದ ಸಂದೇಶಗಳನ್ನು ಮಿದಿಳಿಗೆ ಸಾಗಿಸುವ ಕೆಲಸ ಮಾಡುತ್ತಿದ್ದರೂ, ಕೈಗಳು, ಅದರಲ್ಲೂ ಹೆಬ್ಬೆರಳು, ನಾಲಿಗೆ, ತುಟಿಗಳು ಇವುಗಳಿಂದ ಹೊರಡುವ ನರಗಳ ಸಂಖ್ಯೆ ಇತರ ಅಂಗಗಳಿಂದ ಹೊರಡುವ ನರಗಳ ಸಂಖ್ಯೆಗಿಂತ ಬಹು ಪಾಲು ಹೆಚ್ಚಾಗಿರುತ್ತದೆಂಬ ಸಂಗತಿ. ಅಂದರೆ ಹಲವು ಬಹು ಉಪಯೋಗಿ ಅಂಗಗಳಿಂದ ಮಿದಿಳಿಗೆ ಸಂಪರ್ಕ ಕಲ್ಪಿಸುವ ನರಗಳ ಸಂಖ್ಯೆ ಇತರ ನರಗಳಿಗಿಂದ ಬಹು ಹೆಚ್ಚಿನ ಪ್ರಮಾಣದಲ್ಲಿ ಇರುತ್ತದಂತೆ. ಈ ಹೆಚ್ಚಿನ ಮಟ್ಟವನ್ನು ಅಂಗಗಳ ಗಾತ್ರದಿಂದ ನಮೂದಿಸಿದರೆ ಮನುಷ್ಯನ ಆಕಾರ ಈ ಪಕ್ಕದ ಚಿತ್ರದಂತೆ ಇರುತ್ತದೆ.



ಕಾರ್ಯಕ್ರಮದ ಒಂದು ಹಂತದಲ್ಲಿ, ವೇದಿಕೆಯ ಮೇಲೆ ಇಪ್ಪತ್ತಕ್ಕೂ ಹೆಚ್ಚು ಸಂತ್ರಸ್ತರು ತಮ್ಮ ವೀಲ್ ಚೇರುಗಳ ಮೇಲೆ ಕುಳಿತಿದ್ದರು. ಒಬ್ಬೊಬ್ಬರಾಗಿ ಅವರುಗಳು ತಮ್ಮ ಮಿದಿಳಿನ ತೊಡಕುಗಳೊಂದಿಗಿನ ತಮ್ಮ ಹೋರಾಟಗಳ ಬಗ್ಗೆ ಹೃದಯ ಕಲಕುವಂತಹ ವಿವರಗಳನ್ನು ನೀಡಿದ್ದಲ್ಲದೆ ತಮ್ಮ ಚಿಕಿತ್ಸೆಗಳ ಯಶಸ್ಸನ್ನು ಎದ್ದು ನಿಂತು ಮಾತನಾಡಿವುದರ ಮೂಲಕ ಪ್ರದರ್ಶಿಸುತ್ತಿದ್ದರು. ನನಗಂತೂ ಇದೊಂದು ಅಪೂರ್ವ ಅನುಭವ. ಇದರ ನಂತರ ಡಾ॥ ಶರಣ್ ತಮ್ಮ ಅನುಭವಗಳನ್ನು ಪ್ರೇಕ್ಷಕರೊಂದಿಗೆ ಹಂಚಿಕೊಂಡರು.

"ಒಮ್ಮೆ ಒಬ್ಬ ಗಿಟಾರ್ ವಾದಕ ನನ್ನ ಬಳಿ ಬಂದಿದ್ದ. ಅವನ ಎಡಗೈನ ಕಿರುಬೆರಳು ಮತ್ತು ಉಂಗುರ ಧರಿಸುವ ಬೆರಳು ಗಿಟಾರ್ ಬಾರಿಸುವಾಗ ತಮ್ಮ ಸ್ವಾಧೀನವನ್ನು ಕಳೆದುಕೊಂಡು ಬಿಡುತ್ತಿದ್ದವು. ಅದಕ್ಕೆ ಪರಿಹಾರವೆಂದರೆ ಮಿದಿಳಿನ ಶಸ್ತ್ರ ಚಿಕಿತ್ಸೆ. ಮಿದಿಳಿನ ಯಾವ ಭಾಗ ಈ ಬೆರಳಿಗಳ ಚಲನೆಗೆ ಕಾರಣ ಎಂಬುದನ್ನು ಪತ್ತೆ ಹಚ್ಚಲು ಅವನು ಗಿಟಾರ್ ಬಾರಿಸುವುದರ ಮೂಲಕವೇ ಕಂಡುಹಿಡಿಯಬೇಕಾಗಿತ್ತು. ಹಾಗಾಗಿ ಮಿದಿಳನ್ನು ಕೊರೆದು, ವಿದ್ಯುತ್ ವಾಹಕನ್ನು ಮಿದಿಳಿನೊಳಗೆ ಆಳವಾಗಿ ಹುದುಗಿಸಿದ್ದಾಗ ಅವನು ತನ್ನ ಬೆರಳುಗಳಿಂಮದ ಗಿಟಾರ್ ಬಾರಿಸಿ ನಮಗೆ ಸೂಚನೆ ಕೊಡುವುದು ಅಗತ್ಯವಾಗಿತ್ತು. ಹಾಗಾಗಿ ಅವನಿಗೆ ಅನೆಸ್ತೀಸಿಯ ಕೊಡುವಂತಿರಲಿಲ್ಲ. ಈ ಬಗೆಯಲ್ಲಿ ಮಿದಿಳಿನ ಒಂದು ಸ್ಪಷ್ಟ ಭಾಗಕ್ಕೆ ಹಲವು ಬಾರಿ ವಿದ್ಯುತ್ತನ್ನು ಹರಿಸಿದ ನಂತರ ಬೆರಳುಗಳು ಸ್ವಾಧೀನಕ್ಕೆ ಬಂದವು. ಅದೃಷ್ಟವಶಾತ್ ವಾದಕನ ಪತ್ನಿ ನಮ್ಮೊಂದಿಗೆ ಆಪರೇಶನ್ ಥಿಯೇಟರಿನಲ್ಲಿದ್ದು ಇದನ್ನೆಲ್ಲಾ ವಿಡಿಯೋ ಕ್ಲಿಪ್ಪಿನಲ್ಲಿ ಸೆರೆ ಹಿಡಿದದ್ದರಿಂದ ಈ ಯಶಸ್ಸಿನ ಸುದ್ದಿ ಫೇಸ್‌ಬುಕ್ ಮೂಲಕ ಎಲ್ಲೆಲ್ಲಿಯೂ ಹರಡಿತು"

ತಮ್ಮ ಭಾಷಣವನ್ನು ಮುಗಿಸುವಾಗ ಡಾ॥ ಶರಣ್ ಹೇಳಿದ ಮಾಕತುಗಳಿವು.

"ನಾನು ಎಲ್ಲೇ ಭಾಷಣ ಮಾಡಿದರೂ ಈ ಮಾತುಗಳಿಂದ ಮುಗಿಸುತ್ತೇನೆ. ಹೆಲ್ಮೆಟ್ ಧರಿಸಿ. ಧರಿಸಿದ ಹೆಲ್ಮೆಟ್‌ನ ಸ್ಟ್ರಾಪ್ ಬಿಗಿಪಡಿಸಲು ಮರೆಯಬೇಡಿ. ದಯವಿಟ್ಟು ಕುಡಿದು ವಾಹನ ಚಾಲನೆ ಮಾಡಬೇಡಿ. ಒಮ್ಮೆ ಹೆಲ್ಮೆಟ್ ಧರಿಸದೇ ಇದ್ದ ವ್ಯಕ್ತಿಯೊಬ್ಬನಿಗೆ ಈ ಮಾತನ್ನು ಹೇಳಿದಾಗ ಆತ, "ನಾನು ಧರಿಸ್ತೇನೋ ಬಿಡ್ತೇನೋ ನಿಮಗೇನ್ರಿ ಆಗಬೇಕು?" ಅಂತ ನನ್ನನ್ನ ದಬಾಯಿಸಿದ. ಅಂದಿನಿಂದ ನಾನು ನನ್ನ ವರಸೆಯನ್ನು ಬದಲಾಯಿಸಿ ಬಿಟ್ಟಿದ್ದೇನೆ. ಯಾರಾದರೂ ಹೆಲ್ಮೆಟ್ ಧರಿಸದೇ ಇರುವವರು ಸಿಕ್ಕಿದರೆ ನಾನು ಅವರನ್ನು ಕುರಿತು, "ಅನೇಕ ಧನ್ಯವಾದಗಳು." ಅಂತ ಹೇಳುವೆ. ಆತ "ಯಾಕೆ?" ಅಂತ ಕೇಳಿದರೆ, ನೀವೇ ನನ್ನ ಅನ್ನದಾತರು. ಏಕೆಂದರೆ, ನಾನು ಮಿದಿಳಿನ ಶಸ್ತ್ರ ಚಿಕಿತ್ಸೆ ಮಾಡುವ ವೈದ್ಯ. ನಿಮ್ಮಂಥವರಿಂದಲೇ ನನ್ನ ಜೀವನ." ಎಂದು ಹೇಳಿದಾಗ ಆತನಿಗೆ ಜ್ಞಾನೋದಯವಾಗುತ್ತದೆ."

ಡಾ॥ ಶರಣ್ ರವರ ಉತ್ಸಾಹ, ತಮ್ಮ ಧ್ಯೇಯ ಸಾಧನೆಯಲ್ಲಿ ಯಾರೊಂದಿಗೂ ರಾಜಿಮಾಡಿಕೊಳ್ಳದ ಧೃಢ ಮನಸ್ಸು, ತಮ್ಮ ರೋಗಿಗಳ ಬಗ್ಗೆ ಅವರಿಗಿರುವ ಅಂತಃಕರಣ ಪೂರ್ವಕ ಕಾಳಜಿ ಇದನ್ನೆಲ್ಲಾ ನೋಡಿದಾಗ ಅವರಿಗೆ ಬಹು ಉತ್ತಮ ಭವಿಷ್ಯವಿದೆ ಅನ್ನಿಸುತ್ತದೆ.

ಒಟ್ಟಿನಲ್ಲಿ ಒಂದು ಸಾರ್ಥಕವಾದ ಸಮಾರಂಭದಲ್ಲಿ ಭಾಗವಹಿಸುವ ಆವಕಾಶಕ್ಕಾಗಿ ಗೆಳೆಯನಿಗೆ ನನ್ನ ನಮನಗಳು.

■

# ಸಂಕ್ರಾಂತಿ–2023

✍ ಶಿವಕುಮಾರ್

" ಶ್ರೀಧರ್, ಪೂಜೆ ಮುಗೀತು. ಮಂಗಳಾರತಿ ಮಾಡ್ತೀನಿ. ಸ್ವಲ್ಪ ಬರ್ತೀಯಾ?"

"ಬಂದೇ ಮಯೂ, ಈಗಲೇ ಬಂದೆ."

"ಏ ಶ್ರೀಧರ್, ನಮ್ಮ ಶೈಲೂಗೆ ಮಗು ಆಗಲೀ ಅಂತ ದೇವರಲ್ಲಿ ಪ್ರಾರ್ಥನೆ ಮಾಡ್ಕೊಳ್ಳೋ. ತೀರ ನಾಲ್ಕು ವರ್ಷ ಆಯ್ತು ಮದುವೆ ಆಗಿ"

"ನೀನೇ ಪ್ರಾರ್ಥನೆ ಮಾಡ್ಕೋಬೋದಲ್ಲಾ."

"ನನ್ನ ಪ್ರಾರ್ಥನೇಗೆ ಏನು ಬೆಲೆ ಇರುತ್ತೋ. ನೀನಾದ್ರೆ ಪ್ರತಿದಿನ ಶಿಸ್ತಿನಿಂದ ಜೀವನ ನಡೆಸ್ಕೊಂಡು ಬಂದಿರೋನು. ಒಂದು ದಿನ ಪೂಜೆ ತಪ್ಪಿಸಿಲ್ಲ. ಒಂದು ದಿನ ನನ್ಮೇಲಾಗ್ಲೀ ಶೈಲೂ ಮೇಲಾಗ್ಲೀ ಕೋಪಿಸ್ಕೊಂಡಿಲ್ಲ. ಪ್ರವೀಣ್‌ಗಂತೂ ನಿನ್ಮೇಲೆ ತುಂಬಾ ಗೌರವ. ನಿನ್ನಂಥೋರ ಮಾತಿಗೆ ದೇವ್ರೂ ಬೆಲೆ ಕೊಡ್ತಾನೆ"

" ಆಗ್ಲಿ.   ಶೈಲೂ ಫೋನ್ ಮಾಡಿದ್ಲೇನು?"

"ಇಲ್ಲ ಕಣೋ, ಆ ಗಾಡ್ ಫರ್ಸೇಕನ್ ಜಾಗದಲ್ಲಿ ನೆಟ್‌ವರ್ಕ್ ಇರುತ್ತೋ ಇಲ್ಲವೋ. ಅಲ್ಲಾ ಎಲ್ಲಾ ಬಿಟ್ಟು ಈ ಹಬ್ಬದ ದಿನಾನೇ ಆ ಯಾಣಕ್ಕೆ ಚಾರಣ ಹೊರಡಬೇಕಾಗಿತ್ತೇ. ಬೆಳಗ್ಗೆ ಅಪ್ಪನಿಗೆ ನಾವು ಬರ್ತೀವಿ, ಅಲ್ಲೇ ಹಬ್ಬ ಆಚರಿಸೋಣ, ಅಂತ ಹೇಳುಕ್ಕೆ ಫೋನ್ ಮಾಡಿದಾಗ ಶೈಲೂ ಪ್ರವೀಣ್ ಬರ್ತಾರೆ ತಾನೇ? ಅಂತ ಕೇಳಿದ್ರು. ಅವರುಗಳು ಬೆಟ್ಟ ಹತ್ತುಕ್ಕೆ ಹೊರಟಿದ್ದಾರೆ ಅಂತ ನಾನು ಹೇಳಿದ್ರೆ ಅವರಿಗೆ ಆತಂಕ ಕಳವಳ ಶುರು ಆಗುತ್ತೆ ಅಂತ ಹೆದರಿ, ಅವರು ಸ್ನೇಹಿತರ ಮನೇಗೆ ಹೋಗಿದ್ದಾರೆ ಅಂತ ಹೇಳಿದ್ದೀನಿ. ಸದ್ಯ ನಾವು ಅಲ್ಲಿಗೆ ಹೋದಾಗ ಅಪ್ಪನ ಹತ್ರ ನಿಜ ಹೇಳಿಬಿಡ್ಬೇಡ. "

"ಇಲ್ಲ ಕಣೇ ನಿಜ ಹೇಳುಲ್ಲ. ಆದ್ರೂ ನಿಮ್ಮಪ್ಪ ಘಾಟಿ. ಶೈಲೂ ಹತ್ರ ಯಾವಾಗ್ಲೂ ವಾಟ್ಸಪ್‌ನಲ್ಲಿ ಹರಟ್ತಿರ್ತಾನೆ. ಅವನಿಗೆ ನೇರವಾಗಿ ಅವಳಿಂದಲೇ ತಿಳಿದಿರಬಹುದು. ಇರ್ಲಿ. ಎಷ್ಟು ಹೊತ್ತಿಗೆ ಹೊರಡಬೇಕು ಬಸವನಗುಡಿಗೆ?"

"ಹನ್ನೆರಡಕ್ಕೆ ಹೊರಟರೆ ಸಾಕು. ಈಗ ನಾನು ಔಟ್‌ಹೌಸ್ ಮಗು ಸುವರ್ಣನ್ನ ಕರಕೊಂಡು ಹತ್ತಿರದ ಮೂರು ನಾಲ್ಕು ಮನೆಗಳಿಗೆ ಎಳ್ಳು ಬೀರಿಸಿ ಬಂದ್ಬಿಡ್ತೇನೆ. ಆಮೇಲೆ ಅಪ್ಪನ್ನ ನೋಡುಕ್ಕೆ ಹೋಗೋಣ. "

"ಆಯ್ತು ಮಯೂ. ನಿಧಾನವಾಗಿ ಬಾ. ಅಷ್ಟುಹೊತ್ತಿಗೆ ನಾನು ವರ್ಡ್ಲ್, ವಾಫಲ್ ಮಾಡ್ತಾ ಇರ್ತೀನಿ."

***************

"ಅಬ್ಬ ಎಷ್ಟು ಎತ್ತರವಾಗಿವೆ ಈ ಶಿಖರಗಳು ಪ್ರವೀಣ್?"

"ಹೌದು ಶೈಲು. ಹೆಚ್ಚು ಎತ್ತರ ಇರೋದು ಭೈರವೇಶ್ವರ ಶಿಖರ. ಸ್ವಲ್ಪ ಕಮ್ಮಿ ಇರೋದು ಮೋಹಿನಿ ಶಿಖರ. ಸ್ವಲ್ಪ ದೂರ ನಡೆದರೆ ಗುಹೆ ಸಿಗುತ್ತೆ . ನಡೆಯುವಾಗ ಹುಷಾರು. "

"ಇದ್ಯಾವ ದೇವ್ರು, ಈ ಕಂಚಿನ ಪ್ರತಿಮೆ?"

"ಅದು ಚಂಡಿಕಾ ದೇವಿ. ಪಾರ್ವತಿಯ ಒಂದು ಅವತಾರ. ಶೈಲು , ನೀನು ಮೋಹಿನಿ ಭಸ್ಮಾಸುರ ಕಥೆ ಕೇಳಿದ್ದೀಯ ಅಲ್ವಾ ?"

" ಹ್ಞೂ, ಕೇಳಿದ್ದೀನಿ."

"ಆ ಭಸ್ಮಾಸುರ ಈ ನೆಲದಲ್ಲೇ ರಾಜ್ಯಭಾರ ಮಾಡ್ತಾ ಇದ್ದದ್ದು. ಲೇ, ಶೈಲು, ನಾವು ಶ್ರೀನಿ ತಾತನ್ನೂ ಇಲ್ಲಿಗೆ ಕರ್ಕೊಂಡು ಬರ್ಬೇಕಾಗಿತ್ತು ಕಣೇ. ಅವರಿಗೆ ಇಂಥಾದನ್ನೆಲ್ಲಾ ನೋಡುಕ್ಕೆ ತುಂಬಾ ಖುಷಿ."

"ಅಯ್ಯೋ ರಾಮಾ, ಅಮ್ಮನಿಗೆ ಗೊತ್ತಾದ್ರೆ ಪ್ರಾಣಾನೇ ಕಳಕೊಂಡು ಬಿಡ್ತಾಳೆ. ಇಂಥಾ ಕಾಡು ಮೇಡುಗಳಲ್ಲಿ ಕರ್ಕೊಂಡು ಬಂದ್ರೆ ಅವರಪ್ಪನಿಗೆ ಸೀರಿಯಸ್ ಹೆಲ್ತ್ ಸೆಟ್‌ಬ್ಯಾಕ್ ಆಗುತ್ತೆ ಅಂತ ಅವಳ ಕನ್ವಿಕ್ಷನ್ನು. ನಾವು ಇಲ್ಲಿಗೆ ಬಂದಿರೋದನ್ನೂ ಕೂಡ ಅಮ್ಮ ಶ್ರೀನಿ ತಾತಂಗೆ ಹೇಳಿಲ್ಲ. ತಾತ ಸರ್ಯಾಗೇ ಇದ್ದಾರೆ. ಎಲ್ಲಾ ಅಮ್ಮಂದೇ ಓವರ್ ರಿಯಾಕ್ಷನ್ನು."

"ಶೈಲು, ಒಂದು ಸೆಲ್ಫಿ ತೆಗೀತೀನಿ. ಸ್ವಲ್ಪ ಹತ್ರ ಬಾ"

"ಥೂ ಬಿಡೋ ನನ್ನಾ. ಈ ಹಳ್ಳೀಲಿ ಅಷ್ಟು ಗಟ್ಟಿಯಾಗಿ ನನ್ನ ತಬ್ಬಿಕೊಂಡ್ರೆ ಸಾರ್ವಜನಿಕ ಸ್ಥಳದಲ್ಲಿ ಅಸಭ್ಯವರ್ತನೆ ಅಂತ ಜೈಲಿಗೆ ಹಾಕ್ಬಿಟ್ಟಾರು. ಹ್ಯಾಪಿ ಸಂಕ್ರಾತಿ ಪ್ರವೀಣ್. ದಿಸ್ ಈಸ್ ಒನ್ ಆಫ್ ಮೈ ಹ್ಯಾಪಿಯೆಸ್ಟ್ ಹಾಲಿಡೇಸ್. "

"ಹ್ಯಾಪಿ ಸಂಕ್ರಾಂತಿ ಮೈ ಡಾರ್ಲಿಂಗ್"

***************

"ಟ್ರೀನ್....ಟ್ರೀನ್"

"ಹಲೋ ಯಾರು?"

"ನಮಸ್ಕಾರ ಶ್ರೀಮತಿ ವೈಜಯಂತಿ ಉಪಾಧ್ಯ ಅವರಿಗೆ. ಸಂಕ್ರಾಂತಿ ಹಬ್ಬದ ಶುಭಾಶಯಗಳು."

"ಓಹೋ ನಮಸ್ಕಾರ ಶ್ರೀನಿವಾಸರಾಯರಿಗೆ. ನಿಮಗೂ ಸಹಾ ಹಬ್ಬದ ಶುಭಕಾಮನೆಗಳು. ಹೇಗಿದ್ದೀಯಾ"

"ಎಲ್ಲಾ ಮಾಮೂಲು ವೈಜು. ಮಯೂ ಫೋನ್ ಮಾಡಿದ್ಲು. ಅಡಿಗೆ ಏನೂ ಮಾಡಿಸ್ಬೇಡಿ. ಹಬ್ಬದಡಿಗೆ ಮಾಡ್ಕೊಂಡು ನಾವೇ ನಿಮ್ಮನೇಗೆ ಬಂದ್ಬಿಡ್ತೀವಿ. ಅಲ್ಲೇ ಹಬ್ಬ ಮಾಡೋಣ ಅಂತ"

"ಮಜಾ ಮಾಡು. ನನಗಿಲ್ಲಿ ಹಬ್ಬ ಶುರು ಆಗೋದು ರಾತ್ರಿ ಒಂಭತ್ತು ಗಂಟೆ ನಂತರವೇ. ಅಮೆರಿಕಾದಲ್ಲಿರೋ ಮಗನಿಂದ ಜೂಮ್ ಕಾಲ್ ಬಂದಾಗ."

"ನಮ್ಮ ಶೈಲು ಹಬ್ಬಾನ ಆಚರಿಸುಕ್ಕೆ ಯಾಣಕ್ಕೆ ಚಾರಣ ಹೋಗಿದ್ದಾಳೆ ಪ್ರವೀಣ್ ಜೊತೆ. ಈಗತಾನೇ ವಾಟ್ಸಪ್ ನಲ್ಲಿ ಅವರ ಸೆಲ್ಫಿ ಕಳಿಸಿದ್ಲು."

"ವಾಟ್ ಎ ಕೋಇನ್ಸಿಡೆನ್ಸ್. ನನ್ನ ಮೊಮ್ಮಗ ದೀಪಕ್ ಕೂಡಾ ಕ್ಯಾಲಿಫೋರ್ನಿಯಾ ಹತ್ರ ಇರೋ ಡೀಪ್ ಕ್ರೀಕ್ ಹಾಟ್‌ಸ್ಪ್ರಿಂಗ್ಸ್ ನಿಂದ ಫೋಟೋ

ಕಳಿಸಿದಾನೆ. ಬಿಸಿನೀರಿನ ಚಿಲುಮೆ ತುಂಬಾ ಚೆನ್ನಾಗಿದೆಯಂತೆ. ನಿನಗೆ ಕಳಿಸ್ತೀನಿ ನೋಡು. ಅಂದಹಾಗೆ ದೀಪಕ್‌ಗೆ ಎಂ.ಐ.ಟಿ ನಲ್ಲಿ ಅಡ್ಮಿಷನ್ ಸಿಕ್ತು ಶ್ರೀನಿ."

"ಕಂಗ್ರಾಟ್ಸ್. ಐ ಆ್ಯಮ್ ಸೋ ಹ್ಯಾಪಿ ಫಾರ್ ಯು. ದೀಪಕ್ ತಾತನ ತರಹಾನೇ. ರಘು ಕೂಡ ಕಾಲೇಜಿನಲ್ಲಿ ಯಾವಾಗ್ಲೂ ಫಸ್ಟ್. ಐ ಮಿಸ್ ಹಿಮ್. ಗುಡ್ ಓಲ್ಡ್ ರಘು. ಒಂದ್ ವಿಷ್ಯ ಹೇಳ್ಲಾ?"

"ಹೇಳು ಶ್ರೀನಿ"

"ಮೊನ್ನೆ ಒಂದು ಒಳ್ಳೇ ಮೂವಿ ನೋಡ್ದೆ ವೈಜು. ಈಥನ್ ಹಾಕ್, ಜೂಲಿ ಡೆಪ್ಲೇ ನಟಿಸಿರೋದು..."

"ಆಹಹ, ಜೂಲಿ ಡೆಪ್ಲೇ ಅಂತ ಯಾಕೆ ಹಾಗೆ ಚಪ್ಪರಿಸಿಕೊಂಡು ಹೇಳ್ತೀಯಾ,"

"ನಾರ್ಮಲ್ಲಾಗೇ ಹೇಳಿದ್ನಲ್ಲ....."

"ಹಹ್ಹಾ ಯಾಕೋ ಪೆಚ್ಚಾಗಿಬಿಟ್ಟೆ. ಸುಮ್ನೆ ನಿನ್ನ ರೇಗಿಸೋಕ್ಕೆ ಹಾಗಂದೆ ಶ್ರೀನಿ. ನಿನ್ನ ಹೆಂಗರುಳು ನನಗೆ ತಿಳೀದೇ. ಆಲ್ ವಿಮೆನ್ ಆರ್ ವಲ್ನರಬಲ್. ದೆ ಆಲ್ ನೀಡ್ ಮೈ ಪ್ರೊಟೆಕ್ಷನ್ ಅಂತ ನಿನ್ನ ಸಂಹಿತೆ. ಅದಕ್ಕೆ ವಿ ಆರ್ ಸೋ ಕ್ಲೋಸ್ ಟು ಈಚ್ ಅದರ್."

"ವೈಜು ಗೇಟ್ ಶಬ್ದ ಆಯ್ತು. ಮಯೂ ಶ್ರೀಧರ್ ಬಂದ್ರೂ ಅಂತ ಕಾಣುತ್ತೆ. ಇನ್ನು ಮುದುಕನ ಪಾತ್ರ ವಹಿಸ್ಬೇಕು. ಬಾಯ್."

"ಮಹರಾಯಾ, ಮೊದಲು ವಾಟ್ಸಾಪ್ ನಲ್ಲಿರೋ ನನ್ನ ಮೇಸೇಜ್‌ನೆಲ್ಲಾ ಡಿಲೀಟ್ ಮಾಡು. ಹದ್ದಿನ ಕಣ್ಣು ನಿನ್ನ ಮಗಳಿಗೆ. ಬಾಯ್.

**ಹ್ಯಾಪಿ ಸಂಕ್ರಾಂತಿ.**"

■



# 360⁰ ಶಿಕ್ಷಾಲೋಕ

ಎಸ್. ಎನ್. ಗಣನಾಥ

ಇದೇನಿದು 360⁰ ಎಂಬ ಕುತೂಹಲವೇ? ಹೇಳುತ್ತೇನೆ.

ನನ್ನ ಬಾಲ್ಯದ ಅನುಭವಗಳಲ್ಲಿ ಮಾಸದೆ ಉಳಿದಿರುವ ನೆನಪುಗಳಲ್ಲಿ ಶಿಕ್ಷೆಯೂ ಒಂದು. ಐವತ್ತು–ಅರವತ್ತು ವರ್ಷಗಳ ಹಿಂದೆ ನಮ್ಮ ಶಾಲೆಗಳಲ್ಲಿ ನಮಗೆ ನೀಡಲಾಗುತ್ತಿದ್ದ ಶಿಕ್ಷೆಗಳ ಬಗ್ಗೆಇಂದಿನ ಪೀಳಿಗೆಯವರಿಗೆ ಹೇಳಿದರೆ ಅವರು ನಂಬುವುದೇ ಇಲ್ಲ. ಅಲ್ಲ, ಅವರದೇನು ತಪ್ಪಿದೆ? ನೋಡದೆ, ಕೇಳದೆ ಇದ್ದುದನ್ನು ನಂಬಲು ಯಾರಿಗಾದರೂ ಹೇಗೆ ಸಾಧ್ಯ?

"ಶಿಕ್ಷೆಯಿಲ್ಲದೆ ಶಿಕ್ಷಣವಿಲ್ಲ" ಅಂತಲೂ "ಛಡಿ ಚಂ ಚಂ– ವಿದ್ಯೆ ಘಂ ಘಂ" ಅಂತಲೂ ಎಂದು ಆಲ್ಮೋಸ್ಟ್ ಅಫಿಷಿಯಲ್ ಆಗಿ ನಂಬಿದ್ದ ಕಾಲ ಅದು. ಆಗ 'ನಮ್ಮ ಮಕ್ಕಳಿಗೆ ಚೆನ್ನಾಗಿ ನಾಲ್ಕು ತದಕಿ ಸಾರ್. ಒಳ್ಳೇ ಬುದ್ಧಿ ಕಲೀತಾವೆ' ಅಂತ ಹೇಳಿ ಶಿಕ್ಷಕರಿಗೆ ಪೂರ್ವಾನುಮತಿ ನೀಡಿ ಹೊರಟುಬಿಡುವ ಪಾಲಕರಿಗೇನೂ ಕೊರತೆಯಿರಲಿಲ್ಲ. ಅಷ್ಟು ಹೇಳಿ  ಬ್ಲಾಂಕ್ ಚೆಕ್ಕನ್ನು ಕೊಟ್ಟುಬಿಟ್ಟರೆ ಇನ್ನು ಮುಂದೆ ಶಿಕ್ಷಕರುಂಟು–ಮಕ್ಕಳುಂಟು! ಶಿಕ್ಷಕರ ಉತ್ಸಾಹ ಇಮ್ಮಡಿ. ಮಕ್ಕಳಿಗಂತೂ ಬೊಮ್ಮಡಿ. ಆ ಶಿಕ್ಷಕರ ಬಗ್ಗೆ ಬೇರೆ ಏನಾದರೂ ಹೇಳಬಹುದೇನೋ. ಅವರ ಸ್ವೋಪಜ್ಞತೆಯ ಕುರಿತಾಗಿ ಎರಡು ಮಾತನಾಡುವಂತೆಯೇ ಇರಲಿಲ್ಲ. ಅದು ಎಲ್ಲೆಲ್ಲಿಂದಲೋ ಕಲಿತ 'ಶಿಕ್ಷಾ' ವಿಧಾನಗಳನ್ನು ಮಕ್ಕಳ ಮೇಲೆ ಪ್ರಯೋಗಿಸುತ್ತಿದ್ದರು. ಅದರ ಮೊದಲ ಹಂತವೇ 'ಮುಂಬೈಗಳು' (ನಾ. ಕಸ್ತೂರಿಯವರ ಕ್ಷಮೆ ಕೋರಿ). ಅಂದರೆ ತಪ್ಪು ಮಾಡುವುದಕ್ಕೂ ಮೊದಲೇ ಸಿಗುವ ಬೈಗಳು.  'ನಾಳೆ ಮಾಡುವ ಕೆಲಸ ಇಂದೇ ಮಾಡು' ಎನ್ನುವ ಹಿರಿಯರ ಮಾತನ್ನು ಸ್ವಲ್ಪ ಜಾಸ್ತೀನೇ ಸೀರಿಯಸ್ ಆಗಿ ತೆಗೆದುಕೊಂಡ ಟೀಚರುಗಳಿಂದ ಪರೀಕ್ಷೆಯ ಫಲಿತಾಂಶದ ಮುನ್ನಾದಿನವೇ ಮಕ್ಕಳಿಗೆ ಸಿಗುತ್ತಿದ್ದ ಸಹಸ್ರ ನಾಮಾರ್ಚನೆ. ಬಯೋ ಡೈವರ್ಸಿಟಿಯ ಬಗ್ಗೆ ಎಷ್ಟು ತಿಳಿವಳಿಕೆ ಇತ್ತೋ ಕಾಣೆ, ಆದರೆ ಬಯ್ಯೋಡೈವರ್ಸಿಟಿಯ ಬಗ್ಗೆ ತಿಳಿವಳಿಕೆ ಧಾರಾಳವಾಗಿತ್ತು. ಅದರ ಮೂಲಕ ನಮ್ಮ ಭಾಷೆಯ ಅದ್ಭುತ ಶಕ್ತಿಯ ಪರಿಚಯ ಮಾಡಿಕೊಡುತ್ತಿದ್ದರು ಅಂತ ಕಾಣುತ್ತೆ. ಆದರೆ ನಾವೋ, ಅಂಥ ಜ್ಞಾನವನ್ನು ಪಡೆದುಕೊಳ್ಳುತ್ತಿದ್ದೇವೆನ್ನುವ ಅರಿವೂ ಇಲ್ಲದ ಕಿರಿಯ ಅವಿವೇಕಿಗಳು! 'ಮೆತ್ತಗೆ ಬೈದರೆ ನಿಮಗೇ ಆಯ್ತು; ಜೋರಾಗಿ ಬೈದರೆ ಗಾಳಿಗೆ ಹೋಯ್ತು' ಎನ್ನುವ ಕೆಟಗರಿಗೆ ಸೇರಿದವರು.

ಇನ್ನು ಹೊಡೆತಗಳ ಕಡೆ ಬಂದರೆ ಅದೇ ಒಂದು ದೊಡ್ಡ ಲೋಕ. ಅದನ್ನೆಲ್ಲಾ ವಿವರಿಸಬೇಕೆಂದರೆ ಒಂದು ಲೇಖನ ಸಾಕಾಗುವುದೇ ಇಲ್ಲ. ಇವರಿಗೆಲ್ಲಾ ಶಿಕ್ಷಕರ ತರಬೇತಿಯ ಸಮಯದಲ್ಲಿ ಈ ಶಿಕ್ಷೆಗಳ ಬಗ್ಗೆ ಒಂದೋ ಎರಡೋ ಪೇಪರುಗಳಿರುತ್ತಿದ್ದವೇನೋ ಎಂಬ ಗುಮಾನಿ ನಮಗೆಲ್ಲರಿಗೂ ಇತ್ತು. ಅಷ್ಟು ವ್ಯಾಪಕವಾಗಿತ್ತು ಅವರ ಶಿಕ್ಷೆಗಳು. ಕೆಲವು ಒಳಾಂಗಣ ಶಿಕ್ಷೆಗಳಾದರೆ ಕೆಲವು ಹೊರಾಂಗಣಕ್ಕೆ ದಿವಿನಾಗಿ ಹೊಂದುತ್ತಿದ್ದವು. ಕೆಲವಕ್ಕೆ ಬರಲು, ರೂಲರು, ಬೆತ್ತ, ಬುಕ್ಕು,ಪೆನ್ಸಿಲ್ಲು ತರಹದ ಪ್ರಾಪರ್ಟಿಗಳು ಬೇಕಿದ್ದರೆ ಕೆಲವಕ್ಕೆ ಮಕ್ಕಳ ಬಾಡಿಯೇ ಸಾಕಾಗುತ್ತಿತ್ತು. ಕಿವಿ ಹಿಂಡುವುದು, ತಲೆಗೆ ತಲೆ ಡಿಕ್ಕಿ ಹೊಡೆಸುವುದು, ಕಪಾಳಕ್ಕೆ ಹೊಡೆಯುವುದು ಇವೆಲ್ಲಾ ಒಂದು ಲೆವೆಲ್ಲಿನದಾದರೆ ಸಮಯ – ಸಂದರ್ಭಕ್ಕೆ

ಹೊಂದಿಕೊಂಡು ಇನ್ನಷ್ಟು ಅಡ್ವಾನ್ಸ್ಡ್ ಶಿಕ್ಷೆಗಳೂ ಇರುತ್ತಿದ್ದವು. ಆದರೆ ಅವೆಲ್ಲವೂ ಕೇವಲ ಕೆಲವರಿಗೇ ಸಿಗುತ್ತಿದ್ದ 'ಸ್ಪೆಷಲ್ ಟ್ರೀಟ್ಮೆಂಟ್' ಮಾತ್ರ. ಇಂತಹ ತರಹೇವಾರಿ ಶಿಕ್ಷೆಗಳನ್ನು ಕಂಡುಹಿಡಿಯುವುದಾಗಲೀ ಅದನ್ನು ನೆನಪಿನಲ್ಲಿಟ್ಟುಕೊಂಡು 'ಸೂಕ್ತ' ಸಮಯಕ್ಕೆ ಸರಿಯಾಗಿ ತರಗತಿಯೊಳಕ್ಕೆ ತರುವುದಾಗಲೀ, ಪ್ರಾಪರ್ಟಿಗಳನ್ನು ಹೊಂದಿಸಿಕೊಳ್ಳುವುದಾಗಲೀ, ಮಗುವಿನ ಹಿನ್ನೆಲೆ ಅಧ್ಯಯನ ಮಾಡಿ ಯಾವ ಮಗುವಿಗೆ ಯಾವ ಶಿಕ್ಷೆ ಎಂದು ಮ್ಯಾಪ್ ಮಾಡುವುದಾಗಲೀ ಸಾಮಾನ್ಯ ಪ್ರತಿಭೆಯಲ್ಲ. ಅದರ ಹಿಂದಿನ ಪರಿಶ್ರಮ, ವಿಚಾರವಂತಿಕೆ, ಕೈಕರಣೆ, ಬಲು ಮುಖ್ಯವಾಗಿ ಇವೆಲ್ಲದರ ಮೂಲಸ್ರೋತವಾದ ಸೃಜನಶೀಲತೆ ಇವೆಲ್ಲಾ ನಮ್ಮ ಮಂದಬುದ್ಧಿಗೆ ನಾಟುತ್ತಿರಲಿಲ್ಲವಲ್ಲ ಎನ್ನುವುದೇ ದೊಡ್ಡ ಕೊರಗು. ಈ ನಡುವೆ ಶಿಕ್ಷಕರ ವಿಶೇಷ ಕಟಾಕ್ಷಕ್ಕೆ ತುತ್ತಾದ ಕೆಲವು ಮಕ್ಕಳು ಮುಂದಿನ ತರಗತಿಗಳಲ್ಲಿ ಬೋಧಿಸುತ್ತಿರುವ ಶಿಕ್ಷಕರ 'ಶಿಕ್ಷಾ' ವಿಧಾನಗಳ ಕುರಿತು ಮೊದಲೇ ಸಂಶೋಧನೆಗಿಳಿಯುತ್ತಿದ್ದರು. ಬೆರಳುಗಳ ಗಿಣ್ಣುಗಳ ಮೇಲೆ ಹೊಡೆಯುವ, ಬಿಸಿಲಲ್ಲಿ ನಿಲ್ಲಿಸುವ, ಟೋಪಿ ಇಟ್ಟು ತರಗತಿಯ ಹೊರಗಡೆ ನಿಲ್ಲಿಸುವ ಮೇಷ್ಟ್ರುಗಳ (ಮೇಡಂಗಳೂ ಇದ್ದರು!) ಮೋಡಸ್ ಆಪರೆಂಡಿಗಳನ್ನು ತಿಳಿದು ಅದಕ್ಕೆ ಪರಿಹಾರಾರ್ಥವಾದ ಕಾರ್ಯತಂತ್ರಗಳನ್ನು ಹೆಣೆಯುತ್ತಿದ್ದರು; ಅಥವಾ ಹಾಗೆಂದು ನಂಬಿದ್ದರು. ಕೆಲವು ಶಿಕ್ಷಕರು ಯಾವುದಾದರೂ ಹತ್ತಿರದ ಊರಿನಿಂದ ವರ್ಗಾವಣೆಯಾಗಿ ಶಾಲೆಗೆ ಬರುವ ಸುದ್ದಿ ಲೀಕಾಗುತ್ತಿದ್ದಂತೆ ಮಕ್ಕಳ ನೆಟ್ ವರ್ಕ್ ಒಮ್ಮೆಲೇ ಚುರುಕುಗೊಳ್ಳುತ್ತಿತ್ತು. ಅವರು ಯಾರು? ಅವರ ಪೂರ್ವಾನುಭವವೇನು? ಮೆಥಡಾಲಜಿ ಏನು? ಅವರ ರೇಟಿಂಗ್ ಎಷ್ಟು? ಇಂಥ ಮಹತ್ವದ ವಿವರಗಳನ್ನೆಲ್ಲಾ ಅದು ಹೇಗೋ ಪತ್ತೆ ಮಾಡಿ ಅವರನ್ನು ಸ್ವಾಗತಿಸಲು ಸಜ್ಜಾಗುತ್ತಿದ್ದರು. ಅಂಥ 'ಪ್ರತಿಭೆ' ಯುಳ್ಳ ಮಕ್ಕಳಿಗೆ ತುಂಬ ಡಿಮ್ಯಾಂಡ್ ಕೂಡ ಇತ್ತು!

ಈ ಶಿಕ್ಷೆಗಳ ಅಳವಡಿಕೆಯಲ್ಲಿ ಇತರ ದೋಷಗಳೇನೇ ಇರಬಹುದು . ಆದರೆ ಅದು ಏಕತಾನತೆಯಿಂದ ಬಳಲುತ್ತಿರಲಿಲ್ಲವೆಂದು ಖಚಿತವಾಗಿ ಹೇಳಬಹುದು. ಹಾಗಾಗಿ ಶಿಕ್ಷೆ ನೀಡುವುದು ಒಂದು ರೋಚಕ ಅನುಭವವಾಗಿರುತ್ತಿತ್ತು (ಶಿಕ್ಷಕರಿಗೆ – ಮಕ್ಕಳಿಗಲ್ಲ!). ಅಲ್ಲಿ ಸಾಗರದಂತಹ ಸ್ಥಾಯೀಭಾವವೂ ಸಾಗರದ ಅಲೆಗಳಂತಹ ಸಂಚಾರೀಭಾವವೂ ಕೈ ಕೈ ಹಿಡಿದೇ ಸಾಗುತ್ತಿದ್ದವು. ಕೆಲವು ನಿರ್ದಿಷ್ಟ ಶಿಕ್ಷೆಗಳು ಸಿಗುತ್ತಿದ್ದುದು ನಿಶ್ಚಯ. ಆದರೆ ಯಾವುದು, ಯಾವಾಗ, ಯಾರಿಗೆ ಸಿಗುವುದೋ ಆ ಅಲ್ಗಾರಿಥಂ ಮಾತ್ರ ಶಿಕ್ಷಕರ ಮೂಡನ್ನು ಅವಲಂಬಿಸಿತ್ತು. ಇಷ್ಟೇ ಅಲ್ಲ, ಇದರ ಜೊತೆಗೆ ಅಪರೂಪಕ್ಕೆ ಕೆಲವು 'ಶಿಕ್ಷಕ ವಿಶೇಷ' ಶಿಕ್ಷೆಗಳೂ ಇರುತ್ತಿದ್ದವು. ಅವುಗಳನ್ನು ಬೇಕೆಂದರೆ ನೀವು "ಮನೋಧರ್ಮ " ಶಿಕ್ಷೆ ಎಂದು ಕರೆಯಬಹುದು. (ಸಂಗೀತದಲ್ಲಿ ಮನೋಧರ್ಮ ಸಂಗೀತ ಇರುವಂತೆ). ಇಂಥವುಗಳನ್ನು ನೀವು ಯಾವುದೇ 'ಮ್ಯಾನುಯೆಲ್ ' ಗಳಲ್ಲಿಯೂ ನೋಡಲಾಗುತ್ತಿರಲಿಲ್ಲ. ಆಯಾ ಶಿಕ್ಷಕರು ವಿಶೇಷ ಪರಿಶ್ರಮದಿಂದ ಹೊಸದಾಗಿ ಕಂಡುಹಿಡಿದು ನೀಡಲಾಗುತ್ತಿದ್ದ ಶಿಕ್ಷೆಗಳು. ಒಂಥರಾ ವಿಶಿಷ್ಟ ಮತ್ತು ಔಟ್ – ಆಫ್–ಬಾಕ್ಸ್ ಥಿಂಕಿಂಗ್ ಎನ್ನಬಹುದು. ಆದರೆ ಏಕೋ ಕಾಣೆ ; ಇಷ್ಟು ಪರಿಶ್ರಮ ಬದ್ಧತೆ ಬಳಸಿ ಕಂಡುಹಿಡಿದ ಶಿಕ್ಷೆಗಳು ವಿದ್ಯಾರ್ಥಿಗಳ ಮಟ್ಟದಲ್ಲಿ ಅಂಥ "ಜನಪ್ರಿಯತೆ" ಯನ್ನೇನೂ ಗಳಿಸುತ್ತಿರಲಿಲ್ಲ. ಪಾಪ, ಅಂತಹ ಶಿಕ್ಷಕರು ಮತ್ತು ಆ ಶಿಕ್ಷೆಗಳು ನೇಪಥ್ಯಕ್ಕೆ ಸರಿದುಹೋದವು. ಎಂಥಾ ದುರಂತ !

ಇಂದು ಕಾಣುವ ವೃತ್ತಿಪರತೆ ಅಂದಿನ ಶಿಕ್ಷಕರಲ್ಲಿ ಏನಾದರೂ ಇದ್ದಿದ್ದರೆ


ಏನೇನು ಆಗುತ್ತಿತ್ತೋ ಕಂಡವರಾರು? ಶಿಕ್ಷೆಯ ಮ್ಯಾನುಯಲ್ಲುಗಳು ಪ್ರಕಟವಾಗಿ ಎಲ್ಲರ ಕೈ ತಲುಪುತ್ತಿದ್ದವು. ಶಿಕ್ಷೆ ನೀಡುವ ಶಿಕ್ಷಕರ ತಾಲೂಕುವಾರು, ಜಿಲ್ಲಾವಾರು, ರಾಜ್ಯವ್ಯಾಪಿ ಸಂಘಗಳನ್ನು ಮಾಡಿಕೊಂಡು ಹೊಸಹೊಸ ಆವಿಷ್ಕಾರಗಳನ್ನು ಪ್ರಕಟಿಸಲು ಒಂದು ನ್ಯೂಸ್ ಲೆಟರ್ ಮಾಡಬಹುದಿತ್ತು. ಅದರಲ್ಲೇ ಸರ್ಟಿಫಿಕೇಟ್ ಯಾ ಡಿಪ್ಲೋಮಾ ಕೋರ್ಸನ್ನು ಪ್ರಾರಂಭಿಸಬಹುದಿತ್ತು. (ಹಾಗೆ ಮಾಡಿದ್ದರೆ ಅದಕ್ಕೆ ಲೆಕ್ಚರರ್ ಆಗಿ ಹೋಗುವ ಸಾಮರ್ಥ್ಯವುಳ್ಳವರು ನಮ್ಮೂರಲ್ಲೇ ಕೆಲವರಿದ್ದರು!). ವರ್ಷಕ್ಕೊಮ್ಮೆ ಸಮ್ಮೇಳನ ಮಾಡಿ 'ಯಶೋಗಾಥೆ'ಗಳಿಗೆ ಅವಾರ್ಡು / ರಿವಾರ್ಡು ಕೊಟ್ಟು ನಾಲ್ಕೂ ನಿಟ್ಟಿನಲ್ಲಿ ಹರಡುವ ಅವಕಾಶವನ್ನು ಅವಕ್ಕೆ ನೀಡಬಹುದಿತ್ತು. ಈ ನಡುವೆ ಅಷ್ಟೇನೂ ಯಶಸ್ವಿಯಲ್ಲದ ಶಿಕ್ಷೆಗಳು ತಮ್ಮಷ್ಟಕ್ಕೆ ತಾವೇ ಕಣ್ಮರೆಯಾಗಿ ಹೋಗುತ್ತಿದ್ದವೆಂದು ಊಹಿಸುವುದೇನೂ ಕಷ್ಟವಲ್ಲ.

ಗಣಿತದ ತರಗತಿಯಲ್ಲಿ ಪೂರಕ ಕೋನಗಳು ಅಂತ ಬರುತ್ತದೆ. ಅದನ್ನು ಕಲಿತ ಮಕ್ಕಳಿಗೆ ಶಿಕ್ಷೆಯಲ್ಲಿಯೂ ಪೂರಕ ಶಿಕ್ಷೆಗಳಿರುವುದು ನಿಧಾನಕ್ಕೆ ಅರಿವಿಗೆ ಬರುತ್ತಿತ್ತು. ಶಾಲೆಯಲ್ಲಿ ಪಡೆದ 'ಪ್ರಸಾದ'ಕ್ಕೆ ಪೂರಕ ಪ್ರಸಾದಗಳು ಮನೆಯಲ್ಲಿ ದೊರೆತು ಒಂದು ರೀತಿಯ ಸಂಪೂರ್ಣ – ಅಂದರೆ 360ಲಿ – ಅನುಭವ ಗಳಿಸುವ ಲಕ್ ಎಷ್ಟು ಮಂದಿಗೆ ಇರಲು ಸಾಧ್ಯ? ಆದರೆ ಮನೆಯಲ್ಲಿ ಸಿಗುತ್ತಿದ್ದ ಶಿಕ್ಷೆಯ ಸ್ವರೂಪವೇ ಬೇರೆ. ಶಿಕ್ಷೆ ಕೊಡುವವರೂ ಬೇರೆ. ಪ್ರಾಪರ್ಟಿಗಳೂ ಬೇರೆ. ಅದಕ್ಕೆ ಬೇರೆಯೇ ಲೇಖನ ಬೇಕಾದೀತು.

ಈ ನೆನಪುಗಳ ನಡುವೆಯೇ ನನಗೊಂದು ಕನಸಿದೆ. ಒಂದು 'Punishments Museum' ತೆರೆಯಬೇಕು. ಅಲ್ಲಿ ಅಂದ ಕಾಲತ್ತಿಲೆ ಇದ್ದ ಶಿಕ್ಷೆಗಳನ್ನು ಪೋಸ್ಟರ್, ವಿಡಿಯೋ, 3ಡಿ ಮಾದರಿ, ಡೆಮೋಗಳ ಮೂಲಕ ಅರ್ಥವಾಗುವಂತೆ ವಿವರಿಸಿ ಹೇಳಬೇಕು. ಆಗ ಬಳಸುತ್ತಿದ್ದ ಪ್ರಾಪರ್ಟಿಗಳನ್ನೆಲ್ಲಾ ಕರ್ನಾಟಕದ ಎಲ್ಲ ಭಾಗಗಳಿಂದ ತಂದು ಅವುಗಳನ್ನು ಅರ್ಥ ಮಾಡಿಕೊಳ್ಳಲು, ದಾಖಲಿಸಲು ಅಗತ್ಯವಿರುವ ಸೌಲಭ್ಯಗಳು ಅಲ್ಲಿರಬೇಕು.

ಕೊನೆಯದಾಗಿ, ಆ ಕಟ್ಟಡದಿಂದ ಹೊರಹೋಗದಂತೆ ಆ ಶಿಕ್ಷೆಗಳೆಲ್ಲವನ್ನೂ ಅಲ್ಲಿಯೇ ಶಾಶ್ವತವಾಗಿ ಬಂಧಿಸಿಡಬೇಕು.

■



# ಐ.....ಸ್ಕ್ರೀಮ್......!!!!!!

ಸಿ.ಎ. ವಿಲಾಸ ಹುದ್ದಾರ

ವೃತ್ತಿಪರ ಕೆಲಸದ ಮ್ಯಾಲೆ ನಾನು ಹೈದರಾಬಾದ ಹೋಗಿದ್ದೆ. ನನಗ ಕೆಲಸದೊಳಗ ಸಹಾಯ ಮಾಡ್ಲಿಕ್ಕೆ ಆ ಕೆಲಸದೊಳಗ ಪರಿಣಿತರಾದ ಮತ್ತ ನನ್ನ ಗೆಳ್ಯಾರೂ ಆದ ದತ್ತಾಕುಲಕರ್ಣಿ ಮತ್ತ ವಸಂತ ಪದಕೀನೂ ಬಂದಿದ್ರು. ಸಾಧಾರಣ ಒಂದ ವಾರದ ಮುಕ್ಕಾಮ ಇತ್ತು. ನಾವು ಹೋದ ಮೂರನೇ ದಿವಸ ಇರಬೇಕ (ಬರೋಬರಿ ನೆನಪ ಇಲ್ಲಾ) ಕೆಲಸಾ ಭಾಳ ಆಗಿ ದಣದಿದ್ವಿ. ಅದಕ್ಕ ರಾತ್ರಿ ಊಟಕ್ಕ ಹೊರಗ ಎಲ್ಲ್ಯೂ ಹೋಗದ ನಾವು ಇದ್ದ ಹೋಟೆಲ್‌ನ ರೆಸ್ಟೋರೆಂಟ ಹೊಕ್ವಿ. ಅಲ್ಲೇ ಅಂಥಾದೇನಗದ್ದಲ ಇರಲಿಲ್ಲ. ವಾತಾವರಣ ಶಾಂತ ಇತ್ತು. ದೊಡ್ಡ ಸ್ಕ್ರೀನ್ ಮ್ಯಾಲೆ ಐಪಿಎಲ್ ಮ್ಯಾಚ್ ನಡದಿತ್ತು. ಈ ಬೆಟ್ಟಿಂಗ್, ಸೆಟ್ಟಿಂಗ್, ಫಿಕ್ಸಿಂಗ್ ಸುಟ್ಟಾ ಸುಡುಗಾಡು ಸುರು ಆದಮ್ಯಾಲೆ ಕ್ರಿಕೆಟ್ ಅಂದ್ರ ಹೇಸಿಗಿ ಬರ್ತದ. ಆ ಸ್ಕ್ರೀನಗೆ ಬೆನ್ನ ಮಾಡಿಕೂತ್ವಿ. ಅದಿರಲಿ...ನಮ್ದು ಮುಂದುವರೆಸೋಣ...

ಒಬ್ಬ ಅಜಾನುಬಾಹು ಬಂದು ಮೆನು ಮುಂದ ಇಟ್ಟಾ. ಅಲ್ಲಿ ಮಾತುಕತೆ ಎಲ್ಲಾ ಹಿಂದಿ ಒಳಗ ನಡೀತಿತ್ತು. ಯಾಕಂದ್ರ, ಹೈದರಾಬಾದ ಅಲಾ. ನನಗ ಅದ ಬ್ಯಾಡ, ಇದು ಬೇಕು ಅಂತಡಿಸ್ಕಸ್ ಮಾಡ್ಕೋತ ಕಡೀಕಟು ಬೈ ಥ್ರೀಕೋರೀಯಂಡರ್ ಸೂಪು, ಯಾವದೋ ಒಂದು ಸ್ಟಾರ್ಟರ್ (ಹೆಸರ ನೆನಪಿಲ್ಲಾ , ವಯಸ್ಸಾತಲಾ!!!) ಮತ್ತ ಎರಡು ಫ್ರೈಡ್‌ರೈಸ್ ಹೇಳೀದ್ವಿ. ಅಲ್ಲೆ ಅನ್ನದ ಕ್ವಾಂಟಿಟಿ ಭಾಳ ಕೊಡ್ತಿದ್ರು. ಸಹಜೀಕ ಅಲ್ಲಾ. ಭತ್ತಾ ಬೆಳ್ಯೋ ನಾಡು. ಸುಮಾರು 18 ವರ್ಷದ ಹುಡುಗಿ ಇರಬೇಕು. ಸಾಧಾರಣ ಎತ್ತರ, ಸಾಧುಗಪ್ಪು, ತೆಳ್ಳಗಿನ ಮೈಕಟ್ಟು, ಅಷ್ಟೇನು ಸ್ಥಿತಿವಂತರು ಇರಲಿಕ್ಕಿಲ್ಲಾ ಅಂತ ಅನಸ್ತು. ಪಾಪ ಏನ ಕಷ್ಟಾನೋ ಏನೋ, ಈ ಸಣ್ಣ ವಯಸ್ಸಿಗೆ ಹಿಂಗ ದುಡೀಬೇಕು, ಸೂಪು ತಂದ ಇಟ್ಲು. ನಮ್ದು 46 ವರ್ಷದ ಗೆಳೇತನಾ. ಹರಟೀ ಹೊಡೀಲಿಕ್ಕೆ ವಿಷಯಗಳ ಅಭಾವ ಇರಲಿಲ್ಲಾ. ನಕ್ಕೋತಕೆಲ್ಕೋತ ಸೂಪ್ ಹೊಟ್ಟಿಗೇ ಇಳಿಸಿದ್ವಿ. ಸ್ಟಾರ್ಟರ್ ಖಾಲಿ ಮಾಡೀದ್ವಿ. ಅಜಾನುಬಾಹು ಬಂದ," ಕ್ಷಮಿಸಿ ಸರ್, ಒಂದತಪ್ಪ ಆಗೇದ. ಫ್ರೈಡ್‌ರೈಸ್ ಬದ್ಲಿಗೇ...." ಅಂವಾ ಅಷ್ಟ ಹೇಳ್ತಿರಲಿಕ್ಕೇ ಹಿಂದಿಂದ ಆ ಹುಡುಗಿ ಒಂದ ದೊಡ್ಡ ಬೌಲನೊಳಗ ಫ್ರೈಡ್ ನೂಡಲ್ಸ್ ತೊಗೊಂಡ ಬಂದ್ಲು. ನಮಗ ಮೊದ್ಲೇಕ ನೂಡಲ್ಸ್ ಅಂದ್ರ ಆಗೂದಿಲ್ಲಾ.

"ನೋಡಪಾ, ನಾವು ಹೇಳಿದ್ದು ರೈಸ್.....ನಮಗ ಅದ ಬೇಕು..." ನಾನು ಖಂಡತುಂಡಾಗಿ ಹೇಳಿದೆ. ಅವನ ಎಷ್ಟೇ ವಿನಂತಿ ಮಾಡೀದ್ರೂ ನಾವು ಒಪ್ಪಲಿಲ್ಲಾ. ಅವನಿಗೆ ನಿರಾಶೆ ಆಗಿ ತಿರಗಿತೊಗೊಂಡ ಹೋದಾ.

ಫ್ರೈಡ್‌ರೈಸ್ ಬಂತು. ರುಚಿರುಚಿ ಆಗಿತ್ತು. ಬಾಯಿ ಚಪ್ಪರಿಸ್ಕೋತ, ಹರಟಿ ಮುಂದುವರೆಸಿ ಅದನ್ನ ಖಾಲಿ ಮಾಡೀದ್ವಿ. ನಾವು ತಿನ್ನೋದು ಮುಗದದ್ದು ನೋಡಿ ಅಜಾನುಬಾಹು ಮತ್ತೆ ಪ್ರತ್ಯಕ್ಷ ಆದ. "ಡೆಜರ್ಟ್ ಏನಾದ್ರೂ ಬೇಕಾ?".

"ಏನೇನ ಅದ..?" ನಾ ಕೇಳಿದೆ.

"ನಮ್ಮಲ್ಲೆ ಎಲ್ಲಾ ಛೊಲೊ ಇರ್ತದ... ಆದ್ರ ಬಟರ್‌ಸ್ಕೊಚ್ ಐಸ್ಕ್ರೀಮ್ ಭಾಳ ಛೊಲೊ ಅದ...".

" ಏ ನನಗ ಮಾತ್ರ ಬ್ಯಾಡ..." ವಸಂತ ಅಂದ.

ನಮ್ಮದತ್ತಪ್ಪಾ ಏನೂ ಹೇಳದ ಸುಮ್ಮಕೂತಾ ಅಂದ್ರ, ಬೇಕಂತ ಅರ್ಥ.

"ಒಂದ ಐಸ್ಕ್ರೀಮದಾಗ ಎರಡು ಸ್ಕೂಪ ಬರ್ತಾವ....". ಅಜಾನುಬಾಹು ನಮಗ ಸಮಜಾಯಿಸಿ ಹೇಳಿ ನಾವು ತೊಗೋಳಲಿಕ್ಕೆ ಪ್ರೇರೇಪಣೆಕೊಟ್ಟ. ಇದೊಂದ ನಮೂಮಿ ಮಾರ್ಕೆಟಿಂಗ್‌ಟೆಕ್ನಿಕ್. ನಾವೂ ಕೊಡು ಅಂತತಲೀ ಹಾಕಿದ್ವಿ.

ನಮ್ಮ ಹಾಳ ಹರಟಿ ಮುಂದುವರಿತು. ಒಂದ ಉದ್ದನೇ ಐಸ್ಕ್ರೀಮ ಬೌಲನೊಳಗ ಎರಡ ಸ್ಕೂಪ್ ತಂದ ಇಟ್ಲು. ನನಗ ಅನಿಸ್ತು ಇನ್ನೊಂದ ಬೌಲ್ ಇದ್ರ ಅದರೊಳಗ ಒಂದ ಸ್ಕೂಪ್ ಇಟಗೋಬಹುದು. ಆಕೀಗೆ ಹೇಳಿದೆ, "ಇನ್ನೊಂದು ಖಾಲಿ ಬೌಲ ತೊಗೊಂಡ ಬಾ...".

ಇನ್ನೊಂದು ಬೌಲ ಬರ್ತದಅಂತ ಸ್ವಲ್ಪ ಹೊತ್ತುಕಾಯ್ದು ಅದು ಬರಲಿಲ್ಲಾ. ಹೆಂಗೂ ಎರಡು ಚಮಚಾ ಇದ್ವು. ನಾವೊಂದುದತ್ತಾ ಒಂದು ತೊಗೊಂಡು ಆ ಕಡೆ ಸ್ಕೂಪ್ ಅಂವಾ ತಿನ್ಲಿಕತ್ತಾ ಈ ಕಡೆದ್ದು ನಾನು. ಇನ್ನೇನ ನಮ್ಮ ಐಸ್ಕ್ರೀಮ ತಿನ್ನೋದು ಮುಗೀಲಿಕ್ಕೆ ಬಂದಿತ್ತು ಆ ಹುಡುಗಿ ನಗು ಮಾರಿ ಮಾಡ್ಕೊಂಡ ಮತ್ತೊಂದ ಐಸ್ಕ್ರೀಮ ಸಹಿತ ಬೌಲ ತೊಗೊಂಡ ಬರಬೇಕ!!!!.

"ನಾವು ಹೇಳಿದ್ದು ಖಾಲಿ ಬೌಲು..."

"ಇಲ್ಲಾ ಸರ್, ನೀವು ಇನ್ನೊಂದು ಐಸ್ಕ್ರೀಮ ಹೇಳೀದ್ರಿ..". ಅಜಾನಬಾಹು ಬಂದೂ ಅದನ್ನ ಹೇಳಿದ.

ನಾ ಸ್ಪಷ್ಟ ಆಗಿ ಹೇಳಿದೆ," ನೋಡಪಾ, ಮೊದ್ಲೇಕ ನಾವು ಐಸ್ಕ್ರೀಮ ತಿನ್ನೋಹಂಗಿಲ್ಲ, ನೀ ಹೇಳಿದಿ ಸಣ್ಣು ಎರಡು ಸ್ಕೂಪ ಇರತಾವಂತ, ಅದಕ್ಕತೊಗೊಂಡ್ವಿ, ಅಂತಾದರೊಳಗ, ನಾವು ಮತ್ತೊಂದು ಐಸ್ಕ್ರೀಮ ಹೇಳಲಿಕ್ಕೆ ಸಾಧ್ಯನೇ ಇಲ್ಲಾ....". ಆ ಹುಡುಗಿ ಸಣ್ಣ ಮಾರಿ ಮಾಡ್ಕೊಂಡ ಐಸ್ಕ್ರೀಮ ತಿರಗಿತೊಗೊಂಡ ಹೋದ್ಲು. ಅಳು ಮಾರಿ ಆಗಿತ್ತಂದ್ರೂ ಅಡ್ಡಿ ಇಲ್ಲಾ. ನಾನು ಬಿಲ್ ತೊಗೊಂಡ ಬರ್ಲಿಕ್ಕೆ ಹೇಳಿದೆ. ಅಷ್ಟರೊಳಗ ಇನ್ನೊಬ್ಬ ವೇಟರ್ ಬಂದ, " ಸರ್, ಪ್ಲೀಜ್, ಐಸ್ಕ್ರೀಮ ತೊಗೋಳ್ರಿ, ಆ ಹುಡುಗಿ ಪಗಾರದಾಗ ಕಟ್ ಮಾಡ್ತಾರ...". ಅಂವಾ ಇಷ್ಟ ಹೇಳಬೇಕಾದ್ರ, ಅವನ ಹಿಂದ ಆ ಅಜಾನುಬಾಹೂನು ಬಂದ ನಿಂತ.

"ಸುಮ್ನ ಬಿಲ್ ಕೊಡ್ರಿ.." ನನಗ ಮೊದ್ಲೇಕ ಸುಸ್ತು ಆಗಿತ್ತು. ಸಿಟ್ಟಿನಿಂದ ಹೇಳಿದೆ.

ಹುಡುಗಿ ಬಿಲ್ ತೊಗೊಂಡ ಬಂದಕೊಟ್ಲು. ಮತ್ತ ವಿನಂತಿ ಮಾಡ್ಕೊಂಡ್ಲು. ಎರಡ ಹನಿ ಕಣ್ಣೀರ ಬಂದ ಬಿಟ್ವು. ನಾನು ಮೊದ್ಲೇಕ ಹೇಳಿದ್ಹಂಗ 18 ವರ್ಷ ಇರಬೇಕು. ರಾತ್ರಿ 9.30 ಆಗಿತ್ತು. ಯಾಕೋಕೆಟ್ಟ ಅನಿಸಿತು. ಪಾಪ...ಈ ಸಣ್ಣ ವಯಸ್ಸಿನಾಗ ಇಷ್ಟ ರಾತ್ರಿ ಆದ್ರೂ ಕೆಲಸಾ ಮಾಡ್ತಿರಬೇಕಂದ್ರ ಮನಿಯೊಳಗ ಭಾಳ ತ್ರಾಸ ಇರಬೇಕ. ಆಕಿ ಅಳು ಮಾರಿ ನೋಡಿ ," ನಮಗ ಐಸ್ಕ್ರೀಮ ಏನ ಬ್ಯಾಡಾ... ಅದರ ಬಿಲ್ ತೊಗೊಂಡ ಬಾ.....ಅದರ ಬಿಲ್ ನಾ ಕೊಡ್ತೇನಿ...". ಆಕಿ ಮಾರಿ ಮ್ಯಾಲೆ ನಸು ನಗು ಮೂಡಿತು, ಬಿಲ್ ತಂದಕೊಟ್ಲು. ಬಿಲ್ ಚುಕ್ತಾ ಮಾಡಿ ಕೈ ತೊಳ್ಕೋಳಲಿಕ್ಕೆ ವಾಶ್ ರೂಮಗೆ ಹೋದೆ. ವಾಶ್ ರೂಮ ಬಾಜೂಕ ಅಡಿಗಿ ಮನಿ ಬಾಗಲಾ ಇತ್ತು. ನಾ ಕೈ ತೊಳ್ಕೊಂಡ ಬರೋದಕ್ಕ ಅಡಿಗೀ ಮನೀ ಒಳಗಿಂದ ಜೋರಾಗಿ ನಗೋದು ಕೇಳಿಸ್ತು. ಅದರೊಳಗ ಆ ಹುಡುಗಿ ಧ್ವನೀನೂ ಇತ್ತು. ಹಂಗ ಸುಮ್ನ ನೋಡೋಣಂತ ಅಡಿಗಿ ಮನೀಯೊಳಗ ಹಣಿಕಿ ಹಾಕಿದೆ. ಅಲ್ಲಿ ದೃಷ್ಯ

ನೋಡಿ ಸಿಟ್ಟ ಬಂದು ಮೈ ಉರದ ಹೋತು, ಚೀರ ಬೇಕೆನಿಸಿತು. ಆದರ ಮರುಕ್ಷಣಕ್ಕ ಆ ಹುಡುಗಿ ಮಾರಿ ಮ್ಯಾಲೀನ ಸಂತೋಷ ನೋಡಿ, ಅದಕ್ಕ ವಿಘ್ನ ಮಾಡಬಾರದು ಅನಿಸ್ತು. ಬಡ ಹುಡುಗಿ, ಎನ್ಜೊಯ್ ಮಾಡ್ಲಿ ಅಂತ ಮನಸ್ಸಿನಾಗ ಅನ್ಕೋತ ಮುಂದಿಟ್ಟ ಹೆಜ್ಜಿ ಹಿಂದತೊಗೊಂಡೆ. ನಾ ಹಣಿಕಿ ಹಾಕೋದಕ್ಕ ಆ ಹುಡುಗಿ ಐಸ್ಕ್ರೀಮ ತಿನ್ಕೋತ ನಕ್ಕೋತ ಎಲ್ಲರಿಗೂ ಏನ ಹೇಳ್ತಿದ್ಲಪಾ ಅಂದ್ರ,

"ದೇಖೋ, ಉನ್ಕೊ ಕೈಸಾ ಬುದ್ಧು ಬನಾಯಾ....". (ನೋಡ್ರಿ, ಹೆಂಗ ಅವರ್ನ ಮೂರ್ಖ ಮಾಡಿದೆ....").

"ಶ್ರೀ ಕೃಷ್ಣಾರ್ಪಣಮಸ್ತು"

■

## ಬಯಸಿದ್ದು ದಕ್ಕಿದ್ದು

**ಸಂಗ್ರಹ : ನಾಗರತ್ನ ಭಟ್, ಮೈಸೂರು**

ಗಂಡ ಹೆಂಡತಿ ಇಬ್ಬರೂ ಅನ್ಯೋನ್ಯವಾಗಿ ಬಾಳುತ್ತಿದ್ದರು. ಕೆಲವು ವರ್ಷಗಳ ನಂತರ ಹೆಂಡತಿಗೆ ಅದೇಕೋ ಗಂಡನ ಪ್ರೀತಿಯ ಬಗ್ಗೆಯೇ ಅನುಮಾನ ಶುರುವಾಯಿತು. ಸದಾಕಾಲ ಗಂಡನ ಪ್ರೀತಿ ನನ್ನ ಮೇಲೆಯೇ ಇರಬೇಕು ಎಂಬ ಆಸೆಯಿಂದ ಭಗವಂತನಲ್ಲಿ ವರವನ್ನು ಬೇಡಲು ತಪಸ್ಸಿಗೆ ಕುಳಿತಳು. ಹೆಂಡತಿಯ ತಪಸ್ಸಿಗೆ ಮೆಚ್ಚಿದ ದೇವರು ಪ್ರತ್ಯಕ್ಷನಾದನು. ಅವಳು ದೇವರಲ್ಲಿ ಐದು ವರಗಳನ್ನು ನೀಡುವಂತೆ ಕೇಳಿದಳು.

1) ನನ್ನ ಗಂಡ ನನ್ನ ಬಿಟ್ಟು ಎಲ್ಲಿಗೂ ಹೋಗಬಾರದು.
2) ನನ್ನ ಗಂಡನ ಜೀವನದಲ್ಲಿ ನಾನೇ ಮಹತ್ವಪೂರ್ಣವಾಗಿರಬೇಕು.
3) ಅವನಿಗೆ ನಿದ್ದೆ ಬಂದಾಗ ನಾನು ಪಕ್ಕದಲ್ಲೇ ಇರಬೇಕು.
4) ಬೆಳಿಗ್ಗೆ ಅವನು ಕಣ್ಣು ಬಿಟ್ಟಾಗ ಮೊದಲು ನನ್ನನ್ನೇ ನೋಡಬೇಕು.
5) ನನಗೆ ಏನಾದ್ರೂ ತೊಂದರೆಯಾದರೂ ಅವನ ಜೀವವೇ ಹೋದಂತೆ ಅನಿಸಬೇಕು.

*ದೇವರು: ನೋಡಮ್ಮ, ಈ ಕಲಿಗಾಲದಲ್ಲಿ ಗಂಡನನ್ನು ಶ್ರೀರಾಮನಾಗಿ ಮತ್ತು ಹೆಂಡತಿಯನ್ನು ಸೀತೆಯಾಗಿ ಊಹಿಸಿಕೊಳ್ಳುವುದು ಕಷ್ಟ. ಮತ್ತೊಮ್ಮೆ ಯೋಚಿಸಿ ವರವನ್ನು ಕೇಳು.*

*ಹೆಂಡತಿ: ಇಲ್ಲ, ನನಗೆ ಆ ಐದು ವರಗಳೇ ಬೇಕು.*

*ದೇವರು: ತಥಾಸ್ತು! ಏನಾಶ್ಚರ್ಯ? ಹೆಂಡತಿಯು ತಕ್ಷಣವೇ ಒಂದು * ಮೊಬೈಲ್ ಫೋನ್* ಆಗಿ ಬದಲಾದಳು !!

■

# ಫೋಟೋ ಶೂಟ್

✍ ಜಿ.ವಿ. ನಿರ್ಮಲ

ವಿಶ್ವನಾಥ ಬೆಳಗಿನ ಸುದ್ದಿ ಪತ್ರಿಕೆಯಲ್ಲಿ ಮುಖ ಹುದುಗಿಸಿಕೊಂಡು ಓದುತ್ತಿದ್ದ, ಹಾಗೆಂದು ಅದು ಬೆಳಬೆಳಗ್ಗೆಯೇ? ಖಂಡಿತ ಅಲ್ಲ. ನಿವೃತ್ತಿಯ ನಂತರ ದಿನಪೂರ್ತಿ ನಡೆಯುವ ಕ್ರಿಯೆ–ಪ್ರಕ್ರಿಯೆ ಎಲ್ಲವೂ ಅದೇ. ಇದು ನೀರಜನಿಗೆ ಗೊತ್ತಿರುವ ವಿಷಯವೂ ಹೌದು. ಆದರೂ ತನ್ನ ದುಗುಡ ದುಮ್ಮಾನಗಳನ್ನು ಎಳೆ ಎಳೆಯಾಗಿ ಬಿಡಿಸಿ ಹೇಳಲು ಪತಿ ವಿಶ್ವನಲ್ಲದೆ ಬೇರೆ ಯಾರು ಸಿಕ್ಕಾರು? ಅದಕ್ಕೆ ಹಾಗೇ ಬಂದು ಸ್ವಲ್ಪ ಸಪ್ಪೆ ಸ್ವರದಲ್ಲಿ

'ರೀ........,' ಎಂದು ಕರದೇ ಬಿಟ್ಟು.

ಮೊದಲ ಬಾರಿ ಈ ಕರೆ ಕೇಳಿದರೂ ವಿಶ್ವನಾಥ ಓದುತ್ತಿದ್ದ ಪತ್ರಿಕೆಯಿಂದ ಕಣ್ತೆಗೆಯಲಿಲ್ಲ. ಪತ್ನಿಯ ಕರೆಗೆ ಕಿವಿ ತೆರೆದುಕೊಳ್ಳಲಿಲ್ಲ. ಉಕ್ರೇನ್–ರಷ್ಯಾ ನಡುವಿನ ಯುದ್ಧ ನಿಲ್ಲುವುದೇ? ಮತ್ತೆಷ್ಟು ದಿನಗಳು ಮುಂದುವರಿಯುವುದು ಎನ್ನುವ ಗಹನವಾದ ವಿಷಯ ಓದುವುದರಲ್ಲಿ ತಲ್ಲೀನನಾಗಿದ್ದ. ನೀರಜ ಸೋಲುವ ಮಹಿಳೆಯೇ? ನಲವತ್ತು ವರ್ಷಗಳ ಹಿಂದೆಯೇ ವಿಶ್ವನ ಮನ ಗೆದ್ದು ಬೀಗಿದ್ದವಳು. ಸಂಸಾರದಲ್ಲಿ ಹೆಜ್ಜೆ ಹೆಜ್ಜೆಗೂ ಗೆದ್ದು ಗಟ್ಟಿಯಾಗಿ ಬೇರು ಬಿಟ್ಟಿದ್ದವಳು. ವಿಶ್ವನ ಸಕಲ ಗುಣಗಳನ್ನು ಕಂಡು ಪಳಗಿದ್ದವಳು. ಮತ್ತೊಮ್ಮೆ ಗಂಟಲು ಸರಿ ಮಾಡಿಕೊಂಡು ಗಟ್ಟಿಯಾಗಿ,

'ರೀ..., ರೀ...' ಎಂದು ಜೋಡಿಸಿ ಮತ್ತಷ್ಟು ಜೋರು ಕೂಗು ಹಾಕಿದಳು

ಓದುತ್ತಿದ್ದ ಪೇಪರ್ ಪಕ್ಕದಲ್ಲಿಟ್ಟು 'ಏನು ನೀರಜಾ?' ಎಂದು ನಯವಾಗಿ ಪ್ರಶ್ನಿಸಿದ ವಿಶ್ವನಾಥ.

ಸಾಕಷ್ಟು ಹೊತ್ತು ಸುದ್ದಿಗಳನ್ನು ಓದಿ ತಣಿದ ಸಮಾಧಾನ ಅವನ ಧ್ವನಿಯಲ್ಲಿ ತುಂಬಿತ್ತು. ಅಲ್ಲದೆ ತಾನು ಸಮಾಧಾನದಿಂದಿದ್ದರೆ ನೀರಜಳೂ ಸಮಾಧಾನದಿಂದ ಮಾತು ಮುಂದುವರಿಸುವಳೆಂದು ಅವನಿಗೆ ಗೊತ್ತಿದ್ದ ವಿಷಯ. ನಿವೃತ್ತಿಯ ನಂತರ ಇಂತಹ ಉಪಾಯಗಳನ್ನು ಬಳಸುವುದರಲ್ಲಿ ವಿಶ್ವನಾಥನೂ ನಿಸ್ಸೀಮನೇ ಆಗಿದ್ದ. ನಲವತ್ತು ವರ್ಷದ ದಾಂಪತ್ಯದ ಫಲ. ಹಾಗಿಲ್ಲದಿದ್ದರೆ ದಿನಕ್ಕೆ ಐದಾರು ಬಾರಿ ಕಾಫಿ ಸಿಕ್ಕುವುದಿಲ್ಲವೆನ್ನುವ ಗುಟ್ಟು ರಟ್ಟಾಗಿದ್ದೂ ಕಾರಣವಾಗಿತ್ತು.

'ಮತ್ತೆ, ಮತ್ತೆ ನನಗೆ ಬಹಳ ಬೇಜಾರಾಗಿದೆ'

'ಬೇಜಾರಿಗೆ ಕಾರಣ?'

'ಹುಂ, ಈಗ ಹೇಳಿ ಏನು ಪ್ರಯೋಜನ ಬಿಡಿ'

'ಪ್ರಯೋಜನವಿಲ್ಲದ ಮಾತು ನೀನೆಂದೂ ಆಡುವುದಿಲ್ಲ. ಇರಲಿ ಹೇಳು ನೀರಜ. ನಮ್ಮಿಬ್ಬರ ನಡುವೆ ಬಿಗುಮಾನವೇಕೆ?'

'ನೋಡಿ, ನಮ್ಮ ಮದುವೇಲಿ ಫೋಟೋಗಳನ್ನು ತೆಗೆಸಿಕೊಂಡಿದ್ವಿ ಅಲ್ವಾ?'

'ಇದ್ಯಾಕೆ ಇಂಥ ಪ್ರಶ್ನೆ. ನಮ್ಮ ಮದುವೆ ಫೋಟೋಗಳನ್ನು ಮೊಮ್ಮಕ್ಕಳಿಗೂ ತೋರ್ಸಿ ಸಂತೋಷಪಟ್ಟಿದ್ದೀವಲ್ವಾ?'

'ಅಯ್ಯೋ, ಏನು ಫೋಟೋನೋ ಏನೋ. ಎಲ್ಲಾ ಬ್ಲಾಕ್ ಅ್ಯಂಡ್ ವೈಟ್. ಸ್ಟುಡಿಯೋಗೆ ಹೋಗಿ ಒಂದೇ ಒಂದು ಕಲರ್ ಫೋಟೋ ತೆಗ್ಸಿಕೊಂಡ್ವಿ. ಅದೂ

ಅಂಥಾ ಚೆನ್ನಾಗಿಲ್ಲ.'

'ನೋಡು ನೀರಜ, ಅದಕ್ಕೆ ಈಗ ಬೇಜಾರುಪಟ್ಕೊಂಡ್ರೆ ಏನು ಪ್ರಯೋಜನ? ನಲವತ್ತು ವರ್ಷಗಳ ಹಿಂದೆ ನೀನು ಸಾರಿಗೆ ಎರಡು ಬಾರಿ ಉಪ್ಪು ಹಾಕಿರ್ಲಿಲ್ವಾ? ಅದನ್ನ ಮತ್ತೆ ನೆನಪು ಮಾಡ್ಕೋಬಾರ್ದು ಅಂತ ನೀನೇ ಹೇಳ್ತಿರ್ತಿಯಾ.'

'ನಾನು ಎಷ್ಟು ಹೇಳಿದ್ರೂ ನೀವು ನೆನಪು ಮಾಡ್ತಾನೇ ಇರ್ತೀರಲ್ಲಾ? ಇದೂ ಹಾಗೆ'

'ಸರಿ ಒಪ್ಕೋತೀನಿ. ಅದಕ್ಕೆ ಪರಿಹಾರ ಏನೂ ಇಲ್ವಾ? ಈಗೇನು ಮಾಡೋಣ? ಅಂದ್ಹಾಗೆ ನನ್ನ ಅರವತ್ತು ವರ್ಷದ ಶಾಂತಿ ಸಮಾರಂಭದಲ್ಲಿ ಸಾಕಷ್ಟು ಕಲರ್ ಫೋಟೋ ತೆಗೆಸಿದ್ದೀವಲ್ವಾ? ಮದುವೆ ಕಾಲ ಹಾಗಿದ್ರೂ, ಕಾಲ ಬದಲಾದ ಮೇಲೆ ನಾವೂ ಬದಲಾದ್ವಲ್ಲಾ?'

'ನಿಜ, ನಿಜ. ಇಬ್ರಿಗೂ ವಯಸ್ಸೇ ಕಾಣಲ್ಲ ಅಂದಾಗ ನೀವು ನನ್ನ ಓರೆಗಣ್ಣಿನಲ್ಲಿ ನೋಡಿದ್ದು ನನಗೆ ಮರೆಯಕ್ಕೇ ಆಗಲ್ಲ.' ಎಂದಾಗ ನೀರಜಳ ಕೆನ್ನೆ ಇಳಿ ವಯಸ್ಸಿನಲ್ಲಿಯೂ ನಾಚಿಗೆಯಿಂದ ಕೆಂಪಾಯ್ತು.

'ಸರಿ ಮಾರಾಯ್ತಿ. ಈಗ ನಿನ್ನ ಬೇಜಾರಿಗೆ ಕಾರಣ ಹೇಳು. ನಮ್ಮ ಕಾಲ ನಮ್ಗೆ, ನಮ್ಮ ಬದುಕು ನಮ್ದು. ಅಲ್ವಾ?'

'ಅದು ನಂಗೂ ಗೊತ್ತು. ಆದ್ರೆ ಈಗ ನೋಡಿ ಅದೇನೋ ಪ್ರಿ ವೆಡ್ಡಿಂಗ್ ಫೋಟೋ ಶೂಟ್ ಮಾಡಿಸ್ಕೋತಾರಂತೆ. ಅದೆಲ್ಲಾ ನೋಡಿದ್ರೆ ನಾವೂ ಈಗ ಹುಟ್ಟಿದ್ರೆ ಎಷ್ಟು ಚೆನ್ನಾಗಿರ್ತಿತ್ತು ಅನ್ಸಿ ಬೇಜಾರಾಯ್ತು.'

'ಅಬ್ಬಾ! ನೀರಜ ಹೀಗೆ ಆಗ್ಲಾರದ್ದನ್ನ ಊಹೆ ಮಾಡ್ಕೊಂಡು ಬೇಜಾರಾದ್ರೆ ಹೇಗೆ? ಈಗಿನ ಕಾಲ್ದಲ್ಲಿ ಮೆಹಂದಿ, ಡಾನ್ಸ್ ಅಂತ ಮದುವೆ ಸಂಭ್ರಮಗಳು ಹೆಚ್ಚಿವೆ. ಇತ್ತೀಚಿಗೆ ಒಂದು ಮದುವೆ ಮನೇಲೀ ಎಲ್ರೂ ಕುಣೀತಾ ಇದ್ದಾಗ ವೇದಿಕೆ ಮುರಿದು ಪಾತಾಳಕ್ಕೆ ಬಿದ್ದೇ ಹೋಯ್ತಂತೆ.'

'ಮುಂಚಿನ ಕಾಲ್ದಲ್ಲಿ ಐದು ದಿನಗಳ ಮದ್ವೆ ನಡೀತಾ ಇತ್ತಂತೆರೀ. ನೆಂಟರೆಲ್ಲಾ ಸೇರಿ ಶಾಸ್ತ್ರ, ಪದ್ಧತಿಗಳನ್ನೂ ಮಾಡ್ತಿದ್ರು; ಉಂಡು-ತಿಂದು, ಜೊತೆಜೊತೆಗೆ ಸಂತೋಷವಾಗಿ ಕಾಲ ಕಳೀತಿದ್ರು. ಈಗ ಎಲ್ಲಾ ತೋರಿಕೆ, ದೊಡ್ಡಸ್ಥಿಕೆ ಮಾತ್ರ. ಆಗಿನ ಕಾಲದಲ್ಲಿ ಐದು ದಿನಗಳ ಮದುವೆ ಮಾಡ್ತಿದ್ರು ಅಂತ ಮೂಗು ಮುರಿದ್ರೂ ಈಗಿನ ಖರ್ಚು-ವೆಚ್ಚ ನೋಡಿದ್ರೆ ಅದೇನೂ ದೊಡ್ಡ ಖರ್ಚಿನ ಬಾಬ್ತಲ್ಲ.'

'ಕಾಲ ಬದಲಾಗಿದೆ ನೀರಜಾ. ನಮ್ಮ ಹಿಂದಿನ ಕಾಲದವ್ರು ಲೀಲಾಜಾಲವಾಗಿ ಎಂಟು-ಹತ್ತು ಮಕ್ಳನ್ನ ಹೆತ್ತು, ಸಾಕ್ತಾ ಇದ್ರು. ನಾವು ಹಾಗೆ ಮಾಡ್ಲಿಲ್ಲವಲ್ಲಾ? ಈಗ ಹಾಗೆ ಮಾಡಕ್ಕೆ ಸಾಧ್ಯವಾ ಹೇಳು.'

'ಅಯ್ಯೋ ನೀವು ವಿಷ್ಯನಾ ಎಲ್ಲಿಂದ ಎಲ್ಲೋ ತೊಗೊಂಡು ಹೋದ್ರೆ ನಂಗೆ ಕೋಪ ಬರತ್ತೆ. ಅಷ್ಟೆ.'

'ನಿಂಗೆ ಕೋಪ ಬರಲಿ ಅಂತ ನಾನು ಈ ವಿಷ್ಯ ಹೇಳ್ಲಿಲ್ಲ. ಇರೋ ವಿಷ್ಯ ಹೇಳ್ದೆ ಅಷ್ಟೆ.'

'ಹುಂ, ಅದೂ ನಿಜ ಅನ್ನಿ. ನಮ್ಮಮ್ಮ, ನಮ್ಮಪ್ಪನ್ನ ಹಸೆ ಮಣೇಲಿ ಅಂತಃಪಟ ತೆಗ್ದಮೇಲೇ ನೋಡಿದ್ರಂತೆ. ಆ ಕಾಲ್ದಲ್ಲಿ ಅದೇ ಸರಿ ಇತ್ತು. ಅದ್ಸರಿರೀ. ಈಗ್ನಂತೆ ಪ್ರೀ

ವೆಡ್ಡಿಂಗ್ ಫೋಟೋ ತೆಗ್ಸಿಕೊಂಡು, ಅಲ್ಲಿ–ಇಲ್ಲಿ ಸುತ್ತಾಡಿದ್ಮೇಲೆ ಮದುವೆ ಆದ್ರೆ, ಮಧುರವಾದ ಭಾವನೆಗಳು ಇರತ್ವಾ? ಸಪ್ಪೆ ಆಗಿಬಿಡಲ್ವಾ?'

'ಅಯ್ಯೋ ನೀರಜ. ನಂಗೇನು ಗೊತ್ತು? ಈ ಪ್ರಶ್ನೆಗೆ ನಾನು ಹೇಗೆ ಉತ್ತರ ಹೇಳ್ಲಿ? ನಾನು ಮದುವೆಯಾಗಕ್ಕೆ ಮುಂಚೆ ನಿನ್ನ ಒಂದೆರಡು ಸಾರಿ ನೋಡಿದ್ದೆ. ಅಷ್ಟೆ. ನಿಂಗೆಷ್ಟು ಗೊತ್ತೋ ನಂಗೂ ಅಷ್ಟೇ ಗೊತ್ತು.'

'ಹೌದಲ್ವಾ? ಅದ್ರೂ ಈಗಿನ ಕಾಲದವ್ರಿಗೆ ಎಷ್ಟೊಂದು ಅನುಕೂಲತೆಗಳು; ಅವಕಾಶಗಳು.'

'ಅಬ್ಬಬ್ಬಾ! ಇದೇನಾ ನಿಂಗೆ ಬೇಜಾರಿಗೆ ಕಾರಣ? ಏನೋ ಈಗೆಲ್ಲಾ ಸೆಕೆಂಡ್ ಹನಿಮೂನ್ ಅಂತ ಹೋಗ್ತಾರಂತೆ. ಹೋಗೋಣ್ವಾ? ಅದಕ್ಕಿನ್ನೂ ಸಮಯ ಇದೆ. ಕೈಕಾಲು ಸ್ವಾಧೀನ ಇರೋವಾಗ ಹೋಗಿಬಂದ್ಬಿಡೋಣ. ಸರೀನಾ?'

'ಅಯ್ಯೋ ನಾನೆಲ್ಲಿ ಹಾಗಂದೆ. ವಯಸ್ಸಾದ ಕಾಲ್ದಲ್ಲಿ ಕಾಶಿ, ಬದರಿ, ರಾಮೇಶ್ವರಕ್ಕೆ ಹೋದ್ರೆ ದೇವರ ದರ್ಶನ ಮಾಡಿ ಪುಣ್ಯ ಸಂಪಾದಿಸ್ಬೇಕು. ಈಗ ಅಯೋಧ್ಯಾ, ಕಾಶಿ ಎಲ್ಲಾ ಸಾಕಷ್ಟು ಬದಲಾಗಿವೆ. ಬದರಿ ರಸ್ತೆಗಳೂ ಈಗ ಚೆನ್ನಾಗಿ ಮಾಡಿದ್ದಾರಂತೆ. ಮತ್ತೊಮ್ಮೆ ಹೋಗೋಣ. ಅದು ಬಿಟ್ಟು ಇಂತಹ ಆಲೋಚನೆಗಳಾ?'

'ಅಬ್ಬಾ, ನಿನ್ನ ಆಲೋಚನೆಗಳೇ! ಪ್ರೀ ವೆಡ್ಡಿಂಗ್ ಫೋಟೋ ಶೂಟಿಂಗ್ನಿಂದ ಪುಣ್ಯ ಸಂಪಾದನೆ ಕಡೇಗೆ ವಾಲಿ ಬಿಟ್ಯಲ್ಲಾ?'

'ಹಾಂ. ಈಗ ನನಗೊಂದು ಆಲೋಚನೆ ಬಂತು. ಬದರಿ, ಕಾಶೀ ಅಂತ ಹೊರಡೋಣ. ಅಲ್ಲಿನ ಸುಂದರವಾದ ಸ್ಥಳಗಳಲ್ಲಿ ಫೋಟೋ ತೊಗೋಳೋಣ. ಈಗಂತೂ ಮೊಬೈಲ್ನಲ್ಲೇ ಚೆನ್ನಾಗಿ ಕಲರ್ ಫೋಟೋ ತೊಗೋಬಹ್ದು. ಊರಿಗೆ ಬಂದ್ಮೇಲೆ ಪ್ರಿಂಟ್ ಹಾಕ್ಸಿ ಆಲ್ಬಮ್ ಮಾಡೋಣ. ಸೆಕೆಂಡ್ ಹನಿಮೂನು ಅಂತ ಬೇಕಾದ್ರೂ ಹೇಳಿ.'

'ಸರಿ ಹೋಯ್ತು. ಪ್ರೀ ವೆಡ್ಡಿಂಗ್ ಫೋಟೋ ಶೂಟ್ ಅನ್ನೋ ಬದ್ಲು 'ಎಪ್ಪತ್ತು ವರ್ಷದ ಶಾಂತಿಗೆ ಮುನ್ನ' 'ಶಾಂತಿಗೆ ಮುನ್ನ ಮನಃಶಾಂತಿಗೆ' ಹೀಗೆ ಏನಾದ್ರೂ ಹೆಸರು ಕೊಡೋಣ. ಏನಂತಿಯಾ? ನಮ್ಮನ್ನ ನೋಡಿ ಬೇರೆಯವ್ರೂ ಶುರು ಹಚ್ಕೋಬಹ್ದು'

'ಓ ಒಳ್ಳೆ ಐಡಿಯಾ ರೀ. ಯಾವಾಗ ಹೋಗೋಣ? ಎಲ್ಲಾ ಸರ್ಯಾಗಿ ಪ್ಲಾನ್ ಮಾಡೋಣ. ಇದೇ ಖುಷೀಲಿ ಈಗ ಇಬ್ರಿಗೂ ಅರ್ಧರ್ಧ ಲೋಟ ಬಿಸಿಬಿಸಿ ಕಾಫಿ ಮಾಡ್ಕೊಂಡು ಬರ್ತೀನ್ರೀ' ಎಂದು ಯಾವುದೋ ಹಳೆಯ ಚಿತ್ರಗೀತೆಯನ್ನು ಗುನುಗುತ್ತಾ ನೀರಜ ಅಡುಗೆ ಮನೆ ಕಡೆ ನಡೆದಳು. ಅವಳ ಬೇಜಾರು ಎಲ್ಲೋ ತಲೆ ಮರೆಸಿಕೊಂಡಿತ್ತು.

ವಿಶ್ವನಾಥ ಸುದ್ದಿಪತ್ರಿಕೆ ಓದುವುದನ್ನು ಅರ್ಧದಲ್ಲೇ ನಿಲ್ಲಿಸಿದ್ದನ್ನ ಮರೆತು 'ಎಪ್ಪತ್ತು ವರ್ಷದ ಶಾಂತಿಗೆ ಮುನ್ನ' ಎನ್ನುವ ಕನಸಿನ ಲೋಕಕ್ಕೆ ಜಾರಿದ.

■

# ಪಾರ್ಕಿಂಗ್ ಪ್ರಮೇಯದ ಫಜೀತಿ

ಕೆ.ಎಸ್. ಸೋಮೇಶ್ವರ

ಪಾರ್ಕಿಂಗ್ ಅಂದರೆ ನಾವೆಲ್ಲ ತಿಳಿದಿರುವಂತೆ ನಮ್ಮ ವಾಹನಗಳ ನಿಲುಗಡೆ ಮಾಡುವುದು. ಬರಿಯ ಅದಕ್ಕೇ ಏಕೆ, ನಾವೆಲ್ಲೋ ನಡೆದು ಹೋಗುತ್ತಿರುವಾಗ ಸ್ವಲ್ಪ ವಿರಾಮ ಬೇಕೆನಿಸಿದರೆ ಒಂದೆಡೆ ನಿಲ್ಲುತ್ತೇವೆ ಅಥವಾ ಅಲ್ಲಿ ಕುಳಿತುಕೊಳ್ಳಲು ಕಲ್ಲು ಹಾಸುಗಳಿದ್ದರೆ ಕುಳಿತು ಉಸ್ಸಪ್ಪಾ ಅನ್ನಬಹುದು. ಈ ರೀತಿ, ರಸ್ತೆ ಬದಿಯಲ್ಲಿ ಕೂರಲು ನನಗೆ ನೆನಪಿರುವ ಹಾಗೆ ಬೆಂಗಳೂರಿನಲ್ಲಿ ಒಂದೇ ಕಡೆ. ಅದು ನಮ್ಮ ಮಹಾತ್ಮ ಗಾಂಧಿ ರಸ್ತೆಯ ಒಂದು ಬದಿಯಲ್ಲಿ ಸ್ವಲ್ಪ ಎತ್ತರದಲ್ಲಿದ್ದ ನಡಿಗೆಯ ದಾರಿ. ಅಲ್ಲಿ ಕುಳಿತರೆ ಇಡೀ ರಸ್ತೆಯ ವಿಹಂಗಮ ನೋಟ ನೋಡ ಸಿಗುತ್ತಿತ್ತು. ಈಗ ಬಿಡಿ 'ಕೋಡಗನ ಕೋಳಿ ನುಂಗಿತ್ತಾ ತಂಗಿ....... ಎಂಬ ಷರೀಫ ರ ಪದದಂತೆ ಹೆಬ್ಬಾವಿನಂತೆ ಆವರಿಸಿರುವ ಮೆಟ್ರೋ ಎಂಬ ದೈತ್ಯ ಉರಗ ಅದನ್ನು ಕಬಳಿಸಿದೆ.

ಈಗ ಮತ್ತೆ ಪಾರ್ಕಿಂಗಿಗೇ ಬರೋಣ. ಬೆಂಗಳೂರಿನಲ್ಲಿ ಲಾಗಾಯ್ತಿನಿಂದಲೂ ವಾಹನ ಸವಾರರಿಗೆ ರಸ್ತೆಗೆ ಇಳಿದ ಮೇಲೆ ತಮ್ಮ ವಾಹನಗಳನ್ನು ಜೋಪಾನವಾಗಿ ನಿಲುಗಡೆ ಮಾಡುವುದೇ ಜೀವನದ ಒಂದು ಮಹತ್ತರ ಪರೀಕ್ಷೆ. ಒಂದಾನೊಂದು ಕಾಲದಲ್ಲಿ ದ್ವಿಚಕ್ರಿಗಳದೇ ದರಬಾರು. ಆಗಲೂ ಪ್ರಮುಖ ಸ್ಥಳಗಳಲ್ಲಿ ಅವರ ನಿಲುಗಡೆಯ ಪಾಡು ಹೇಳ ತೀರದು. ಮೊದ ಮೊದಲಿಗೆ ಸಿಟಿ ಮಾರ್ಕೆಟ್ ಮುಂಭಾಗ, ನಗರ ರೈಲು ನಿಲ್ದಾಣ ಇಂತಹ ಎಡೆಗಳಲ್ಲಿ ದೊಡ್ಡ ನಿಲುಗಡೆ ಪ್ರದೇಶವಿರುತ್ತಿತ್ತು. ಅದಕ್ಕೆ ಸೂಕ್ತ ರೊಕ್ಕ ಪಡೆಯಲು ಒಬ್ಬ ಕರ್ಮಚಾರಿಯೂ ಇರುತ್ತಿದ್ದ. ಅಲ್ಲಿ ನಿಲುಗಡೆ ಮಾಡಿ ಸ್ವಲ್ಪ ಸಮಯದ ನಂತರ ಅದನ್ನು ನೀವು ಹಿಂದಿರುಗಿ ಪಡೆಯುವಾಗ ನಿಮಗೆ ಆಶ್ಚರ್ಯಕರ ಗಿಫ್ಟ್ ಸಾಮಾನ್ಯವಾಗಿತ್ತು. ಅಂದರೆ, ನಿಮ್ಮ ವಾಹನದ ಒಂದೆರಡು ಅಂಗಗಳು ವಿಹೀನವಾಗಿರುತ್ತಿದ್ದವು. ಕಡಿಮೆ ಎಂದರೆ ಟೈರುಗಳುನ ತಾಳಲಾರೆ ಎಂಬಂತೆ ನಿಟ್ಟುಸಿರು ಬಿಟ್ಟು ಠುಸ್ ಆಗಿರುತ್ತಿದ್ದವು. ಅಲ್ಲಿ ನಿಲ್ಲಿಸಿ ಹೋದ ಮೇಲೆ ಅದು ನಿಮದೆ ಜವಾಬುದಾರಿಯೇ ಹೊರತು ಬೇರಾರದು ಅಲ್ಲ.

ಈಗ ಬಿಡಿ, ಇಲ್ಲಿ ಮಾಲ್ ಗಳ ಮಾಲಾ ಮಾಲೇ ನಿಮ್ಮ ಕಣ್ತುಂಬಿ ಕೊಳ್ಳುತ್ತದೆ. ಇಲ್ಲಂತೂ ನಿಮ್ಮ ವಾಹನಗಳಿಗೆ ಏರುತ ದೂರ ದೂರ.......... ಮೇಲೇರುವ ಬಾರಾ ಬಾರ ಎನ್ನುತ ನಿಮ್ಮನ್ನು ಗಗನಮುಖಿಯಾಗಿ ಕರೆದೊಯ್ಯುತ್ತದೆ. ನಮ್ಮ ನಗರ ಸಂಸ್ಥೆಗಳು ಕೆಲವು ಇಂತಹ ಪ್ರಯತ್ನ ಮಾಡಿವೆ. ಮೊದಲಿಗೆ ಜಯನಗರ 4 ನೇ ಬ್ಲಾಕ್ ಬಸ್ ನಿಲ್ದಾಣ. ಇಲ್ಲಿ ಬಸ್ ನೆಲದ ಮೇಲೆ ಓಡಾಡಿದರೆ ನಿಮ್ಮ ಸ್ವಂತ ವಾಹನಗಳು ಅದರ ತಲೆಯ ಮೇಲೆ ಹಾವು ಏಣಿ ಆಟ ಆಡುತ್ತವೆ. ಇದೇ ರೀತಿ ಜೆ.ಸಿ ರಸ್ತೆಯಲ್ಲಿ ಅಂದಿನ ಮಿನರ್ವ ಚಿತ್ರಮಂದಿರದ ಪಕ್ಕದಲ್ಲಿ ಒಂದು ತಲೆಯೆತ್ತಿದೆ. ನಿಮ್ಮ ವಾಹನಗಳನ್ನು ನೋಡಬೇಕಾದರೆ ನೀವು ತಲೆಯೆತ್ತಿ ನಿಲ್ಲಬೇಕು. ಇದೇ ರೀತಿ, ಕೆಂಪೇಗೌಡ ರಸ್ತೆ ಮತ್ತು ಬಿವಿಕೆ ಅಯ್ಯಂಗಾರ್ ರಸ್ತೆ ಸೇರುವ ವೃತ್ತದೆ ಬಳಿ ಒಂದಿದೆ. ಇಲ್ಲಿ ಮೊದಲಿಗೆ ಕ್ಷಯ ರೋಗ ತಪಾಸಣೆ– ಚಿಕಿತ್ಸೆ ದೊರೆಯುತ್ತಿತ್ತು. ಈಗ ಅದು ಸಂಪೂರ್ಣ ಗುಣಮುಖವಾಗಿ ನೂರಾರು ವಾಹನಗಳಿಗೆ ಆಶ್ರಯದಾಣವಾಗಿದೆ. ಇಂತಹವು ನಗರದ ಹಲವೆಡೆಗಳಲ್ಲಿ ಇರಬಹುದು ಅಲ್ಲ ಇರುತ್ತದೆ. ಇಷ್ಟೆಲ್ಲ ಆದರೂ ಇವೆಲ್ಲ ಇಲ್ಲಿನ ಖಾಸಗಿ ವಾಹನಗಳ ಸಂಖ್ಯೆಗೆ ಅರೆಕಾಸಿನ ಮಜ್ಜಿಗೆ ಎಂಬಂತಾಗಿದೆ. ಇದಕ್ಕೆ ಪರಿಹಾರ ಇಲ್ಲವೇ ? ಖಂಡಿತಾ ಇದೆ ರಸ್ತೆ ಬದಿಯಲ್ಲಿ,

ಫುಟ್ ಪಾತ್ ಪಕ್ಕದಲ್ಲಿ ಇರುವ ಸ್ಥಳ ಯಾಕೆ ಖಾಲಿ ಇರಬೇಕು. ಅಲ್ಲೆಲ್ಲ ಒಂದಿಷ್ಟು ದ್ವಿಚಕ್ರ ವಾಹನಗಳಿಗಾದರೆ ಇನ್ನೊಂದಿಷ್ಟು ನಾಲ್ಕು ಚಕ್ರದವುಗಳಿಗೆ. ಸಮಪಾಲು ಸಹಬಾಳ್ವೆ ಇರಲೇ ಬೇಕಲ್ಲವೇ. ಇನ್ನು ಕೆಲವೆಡೆ  ಸಮ ಮತ್ತು ಬೆಸ ದಿನಾಂಕಗಳಿಗನುಗುಣವಾಗಿ ರಸ್ತೆಗಳ ಎರಡೂ ಬದಿಯ ಉಪಯೋಗ ಆಗುತ್ತದೆ. ಆದರೇನು? ಪಾಪ ವಾಹನಗಳು ನಿಲ್ಲಲು ಹುಡುಕಲೇ ಬೇಕು. ಕೆಲವೊಮ್ಮೆ ನೀವು ಹೋಗುವ ನಿಗದಿತ ಸ್ಥಳಕ್ಕಿಂತ ಸುಮಾರು ಒಂದು ಕಿಲೋ ಮೀಟರ್ ಮೊದಲೇ ನಿಮ್ಮ ವಾಹನ ನಿಂತು ಬಿಡತ್ತೆ. ಅಲ್ಲಿಂದ ಮುಂದೆ ನಿಮ್ಮ ಕಾಲೇ ಕಂಭ ಅಲ್ಲ ನಡೆದಾಡುವ ಕಂಭ ಆಗತ್ತೆ.

ಇನ್ನು ಕೆಲವೆಡೆ ಸವಾರರ ಜಾಣ್ಮೆಯೂ ಒರೆ ಹಚ್ಚಲ್ಪಡುತ್ತದೆ. ಕೆಲವೊಮ್ಮೆ ವಾಹನಗಳ ಮಧ್ಯದಲ್ಲಿ "ಉಸಿರಾಟದ ಸ್ಥಳ" ಅಂದರೆ ಬ್ರೀದಿಂಗ್ ಸ್ಪೇಸ್ ಇರತ್ತೆ. ಅದರ ಉಪಯೋಗ ಈ ಜಾಣ ಸವಾರರಿಗೆ. ಅಕ್ಕ ಪಕ್ಕದವನ್ನು ಒಂದಿಷ್ಟು ಸರಿಸಿ ಅವೆರಡರ ದೃಷ್ಟಿ ಪ್ರಣಯಕ್ಕೆ ಇದು ಮೂಗು ತೂರಿಸಿ ನಿಂತು ಸವಾರನಿಗೆ ಟಾ ಟಾ ಹೇಳಿ ಬಿಡುತ್ತದೆ. ಈ ಸೌಲಭ್ಯ ನಾಲ್ಕು ಕಾಲಿನವಕ್ಕೆ ಇರಲ್ಲ. ಅಂದರೆ ಅವು ಪ್ರಾಣಿಗಳಲ್ಲ!  ಕಾರುಗಳು. ಅಯ್ಯೋ ಪಾಪ ಅಲ್ಲವೇ.

ನಾಲ್ಕು ಚಕ್ರದ ವಾಹನ ಎಂದರೆ  ಕಣ್ಣಾರೆ ಕಂಡ ಒಂದು ಸಂಗತಿ ಆಗಾಗ್ಗೆ ಮನದಾಳದಿಂದ ಎದ್ದು ಬರುತ್ತದೆ. ಸುಮಾರು ತೊಂಭತ್ತರ ದಶಕ. ನಾನು ಮತ್ತು ನನ್ನ ಸಹೋದ್ಯೋಗಿ ಮಂಜುನಾಥ್  ಎಂಬುವರು ನಮ್ಮ ಕಛೇರಿ ಕೆಲಸಕ್ಕೆ ಬೇಕಾದ ಕೆಲವು ವಸ್ತುಗಳ ಖರೀದಿಗೆ ಸಿಟಿ ಮಾರುಕಟ್ಟೆ ಪ್ರದೇಶಕ್ಕೆ ಬಂದಿದ್ದೆವು. ಅಲ್ಲಿ ಚಿಕ್ಕಪೇಟೆಯಲ್ಲಿ ಕೆಲಸ ಮುಗಿಸಿ ಮುಂದೆ ಬಿವಿಕೆ ಅಯ್ಯಂಗಾರ್ ರಸ್ತೆ ಕಡೆಗೆ ತಿರುಗಿದೆವು. ಅಲ್ಲಿ ನಮ್ಮ ಇದಿರಿಗೆ ನಡೆದ ಸಂಗತಿ ಇದು. ಒಂದು ಮೋಟಾರ್ ಸೈಕಲ್‌ನಲ್ಲಿ ರೈಡರ್ ಮತ್ತು ಪಿಲ್ಯನ್ ರೈಡರ್ ಇಬ್ಬರೂ ಬಂದು ತಮ್ಮ ರಥದ ನಿಲುಗಡೆಯ  ಬಗ್ಗೆ ತೀವ್ರ ಲುಕ್ ಔಟ್ ಮಾಡುತ್ತಿದ್ದರು. ಅವರ ದೃಷ್ಟಿಯಲ್ಲಿ ಅದು ಆಗಲೇ  ನಮ್ಮ ಈಗಿನ ಬೈಕ್ ಟ್ಯಾಕ್ಸಿ ಎನ್ನುವ ಮನೋಭಾವ ಇದ್ದಿತೇನೋ. ಅಲ್ಲಿ ಒಂದೆಡೆ ಒಂದು ಸ್ಕೂಟರ್ ಅದರ ಪಕ್ಕದಲ್ಲಿ ಒಂದು ಮಾರುತಿ –800 ಕಾರು, ಅದರ ಇನ್ನೊಂದು ಬದಿಯುಲ್ಲಿ ಮತ್ತೊಂದು ಸ್ಕೂಟರ್. ಈ ಎರಡೂ ಬಜಾಜ್ ಸ್ಕೂಟರ್‌ಗಳು ಮಾರುತಿ ಏನು ನಿನ್ನ ಕೀರುತಿ ಅಂತ  ಯುಗಳ ಗೀತೆ ಹಾಡುತ್ತಿರುವಂತಿತ್ತು. ಈ ಸವಾರರಿಗೆ ಅವೆರಡೂ ವಾಹನಗಳಿಗೇ  ಏಕೆ ಈ ರೀತಿಯ ಲೀಲಾ ವಿನೋದ ಎನಿಸಿ. ಬೈಕ್ ನಿಂದ ಇಳಿದು ಒಂದೆಡೆ ನಿಲ್ಲಿಸಿ (ಟೆಂಪರ್‍ವರಿ) ಆ ಕಾರಿನ ಮುಂದೊಬ್ಬ ಹಿಂದೊಬ್ಬ ಸಮರವೀರರಾಗಿ ನಿಂತರು. ಇಬ್ಬರೂ ಅದನ್ನು ಎರಡೂ ಬದಿಯಲ್ಲಿ ಎತ್ತಿ ಜೈ ಮಾರುತಿ ಎನ್ನುತ್ತಾ ಅದನ್ನು ಸ್ವಲ್ಪ ಪಕ್ಕದಲ್ಲಿ ಇಳಿಸಿದರು. ಇದೊಂದು ರೀತಿಯಲ್ಲಿ ನಮ್ಮ ರಾಮಾಯಣದ ಮಾರುತಿ ಸಂಜೀವಿನಿ ಪರ್ವತ ಎತ್ತಿದ ಪುನರಾವರ್ತನೆ ಎಂಬಂತಿತ್ತು.  ಅಲ್ಲಿ ದೊರೆತ ಜಾಗದಲ್ಲಿ ಇವರ ಬೈಕ್ ಪ್ರತಿಷ್ಠಾಪನೆ ಆಯಿತು.  ಮಾರುತಿಗೋ  ಒಂದು ರೀತಿಯ ರೋಮಾಂಚನ. ನೀ ಬಂದು ನಿಂತಾಗ, ನಿಂತು ನೀ ನಕ್ಕಾಗ ........ ಅಂತ ಗಾನ ಬಜಾನ ಮಾಡುತ್ತ ಮೂವರು ಗೆಳತಿಯರೊಡನೆ  ಸವಿ ಸವಿ ನೆನಪು........... ಸಾವಿರ ನೆನಪು........ ಹಾಡಿಕೊಂಡಿತ್ತು.

■

# ಕೆರೆಯ ನೀರನು ಕೆರೆಗೆ ಚೆಲ್ಲಿ

✍ ಪುಷ್ಪಲತ ಟಿ.ಜಿ

ಅವನೋ ಮಹಾ ಜಿಪುಣ.ಅದೇ ಹೇಳುತ್ತಾರಲ್ಲ ಎಂಜಲು ಕೈಲಿ ಕಾಗೆ ಓಡಿಸಲಾರ ಎಂದು ಅದಕ್ಕೆ ಸರಿಯಾದ ರೂಪಕ ಅವನು .

ಯಾರ ಬಗ್ಗೆ ಮಾತು ಎನ್ನುವಿರಾ ....

ಸಾಧಾರಣ ಹಳ್ಳಿಯ ಮಣ್ಣಿನ ಮನೆಯ ಮಾಲೀಕ.

ಮಣ್ಣಿನ ಮನೆ ಎಂದ ಮಾತ್ರಕ್ಕೆ ಪಾಪ ಬಡವ ಎಂದುಕೊಂಡರೆ ತಪ್ಪಾಗುತ್ತದೆ. ಲಕ್ಷ ಲಕ್ಷವನ್ನು ಖಾತೆಯಲ್ಲಿ ಜೋಡಿಸಿಟ್ಟು ಅದಕ್ಕೆ ಇನ್ನಷ್ಟು ಸೇರಿಸುವ ಕನಸು ಕಾಣುತ್ತಾ ನೆಲದ ಮೇಲೆ ಮಲಗುವ ಇವನ ಹೆಸರೋ ದಾನಪ್ಪ..

ಹೆಸರು ಕೇಳಿ ನಾನೊಮ್ಮೆ ನಕ್ಕು ನಕ್ಕು ಸುಸ್ತಾಗಿ ಹೋಗಿದ್ದೆ.

ಇವನೋ ದಾನಕ್ಕೆ ಅಪ್ಪ ನಂತೆ......

ಕೃತಿ ಒಂದೇ ಸಮನೆ ಅಡುಗೆ ಮನೆಯ ಟಿಪಾಯಿ ಮೇಲೆ ಹತ್ತಿ ಕುಳಿತು ಮೈಕ್ ಹಿಡಿವಂತೆ ಸೌಟು ಹಿಡಿದು ನಾಟಕೀಯವಾಗಿ ಹೇಳುತ್ತಿದ್ದರೆ ತಿಂಡಿ ತಿನ್ನುತ್ತಾ ಕುಳಿತಿದ್ದ ಶಂಕರನಿಗೆ ನಗು ತಡೆಯಲಾಗಲಿಲ್ಲ.

ಅವಳು ತಮಾಷೆ ಯಾಗಿ ಹೇಳುತಿದ್ದದ್ದೇನೋ ಹೌದು....

ಆದರೆ ಅದು ಸತ್ಯ..

ಅಂತಹ ಜಿಪುಣನಿಗೆ ಆ  ಹೆಸರು ವ್ಯಂಗ್ಯವೆ ಸರಿ.

ಇಂತಹ ವ್ಯಂಗ್ಯ ಇದು ಮೊದಲೇನಲ್ಲ.

ಏಷ್ಟೋ ಬಾರಿ ಕೇಳಿರುತ್ತೇವೆ .ರೂಪವೇ ಇಲ್ಲದವರಿಗೆ ಸುಂದರ,ಚೆಲುವ ಇಂತಹ ಹೆಸರು ಕೇಳಿ ಮನಸಲ್ಲೇ ಒಮ್ಮೆ ನಕ್ಕು ಆನಂತರ ಅದನ್ನು ಒಪ್ಪಿಕೊಂಡು ಬಿಡುತ್ತೇವೆ.

ಯೋಚಿಸುತ್ತಲೇ ಹರಿದ ದೋಸೆ ಬಾಯಿಗಿಟ್ಟ.

ಕೃತಿ ದೋಸೆ ಹಾಕುತ್ತಿರುವ ಅಮ್ಮನನ್ನೆ ನೋಡುತ್ತ ...

ಅಲ್ಲಾ ಅಮ್ಮಾ...ಅವ ಜೀವನದಲ್ಲಿ ಒಮ್ಮೆಯೂ ಒಂದು ದೋಸೆಯನ್ನು ದಾನ ಮಾಡಿಲ್ಲ.ಮಾಡುವುದು ಇಲ್ಲ.

ಇವನ ಗುಣ ಹುಟ್ಟುವಾಗಲೇ ಗೊತ್ತಾಗಿ ಹೆಸರಲ್ಲದರೂ ದಾನ ಇರಲಿ ಎಂದು ಹೆಸರಿಟ್ಟದ್ದೇನೋ ....ಅಲ್ಲವಾ...

ನೀನು ಈಗ ಇಲ್ಲೇ ಇದ್ದರೆ ಖಂಡಿತ ಇದೇ ಸೌಟಲ್ಲೆ

ಬರೆ ಹಾಕುತ್ತೇನೆ ನೋಡು...ಬೇರೆಯವರ ಸುದ್ದಿ ನಮಗೇಕೆ....ಅಲ್ಲದೆ ಓದುವ ಹುಡುಗಿ ನೀನು ನಿನಗೆ ಇದೆಲ್ಲ ಬೇಡದ ವಿಷಯ...

ನಿನ್ನ ಹೆಸರೇ ನೋಡು ಕೃತಿ...

ನೀನೇನು ಕೃತಿ, ಗ್ರಂಥ ಬರೆದು ರಾಶಿ ಹಾಕಿದ್ದೆಯ...

ತಲೆಹರಟೆ ಬಿಟ್ಟು ತಟ್ಟೆ ತಗೋ ದೋಸೆ ಹಾಕ್ತೆ...

ಎನ್ನುತ್ತ ಅವಳ ಕೈಲಿದ್ದ ಸೌಟು ಕಸಿದು ಕೊಂಡರು.

ಅಷ್ಟರಲ್ಲಿ ಒಳ ಬಂದ ಸೀತಮ್ಮ ಮೊಮ್ಮಗಳ ಊದಿಕೊಂಡ ಮುಖ ನೋಡಿ

ಯಾಕೆ ಶಾರದಾ....ಅವಳನ್ನ ಬೈದಿಲ್ಲ ಅಂದ್ರೆ ನಿಂಗೆ ದಿನವೇ ಕಳಿಯಲ್ಲ.

ಅವಳು ಹೇಳಿದ್ರಲ್ಲಿ ತಪ್ಪೇನಿದೆ.

ಅವ ಇರೋದೇ ಅವಳು ಹೇಳಿದ್ದು.

ಅವನ ಹುಟ್ಟಿದಾಗಿನಿಂದ ನೋಡಿದೀನಿ...ಖರ್ಚು ಅಂದ್ರೆ ಜೀವ ಬಿಡ್ತಾನೆ.

ಅವನ ತಾಯಿನು ಹಾಗೆ ಅದಕ್ಕೆ ಅವ ಹಾಗಾಗಿರೋದು ಎನ್ನುತ್ತ ಅವನ ಕತೆ ಶುರು ಮಾಡಿದರು.

ಗಂಡನ್ನ ಮೂಲೆ ಗುಂಪು ಮಾಡಿ ಯಜಮಾನಿಕೆ ಪಟ್ಟ ಧರಿಸಿದ ಸಾವಿತ್ರಮ್ಮ ನ ಕೊನೆಯ ಮಗ ದಾನಪ್ಪ.

ಅವನಿಗೆ ಯಾಕಾದರೂ ಅಂತಹ ಹೆಸರು ಇಟ್ಟರೋ ...

ಅದಕ್ಕೆ ತದ್ವಿರುದ್ದ ಅವನು..

ಅವನ ರಕ್ತದಲ್ಲೇ ಜಿಪುಣತನ ಅಂಟಿಕೊಂಡು ಬಂದಿತ್ತು.

ಮೊದಲಿನಿಂದಲೂ ಯಾರಿಗಾಗಿಯೂ ನಯಾ ಪೈಸೆ ಬಿಚ್ಚದ ವಂಶ ಅದು

ಜೊತೆಗೆ ಕದಿಯುವ ಗುಣ ಇದ್ದಿದ್ದರಿಂದ ಊರಿನ ಒಡನಾಟ ಕಡಿಮೆ .

ಮನೆಗೆ ಬಂದರೆ ಹೋಗುವವರೆಗೂ ಯಾರಾದರೂ ಒಬ್ಬರು ಅವರನ್ನು ಗುಟ್ಟಾಗಿ ಕಾಯುತ್ತಲೇ ಇರಬೇಕಾದದರಿಂದ ಯಾರೂ ಅಷ್ಟಾಗಿ ಹಚ್ಚಿಕೊಳ್ಳುತ್ತಿರಲಿಲ್ಲ.

ಏನೂ ಇಲ್ಲವೆಂದರೂ ತಾಂಬೂಲದಲ್ಲಿನ ಅಡಿಕೆಯನ್ನದರೂ ಸೆರಗಲ್ಲಿ ಕಟ್ಟಿಕೊಂಡು ಹೋಗಿ ಬಿಡುತ್ತಿದ್ದ ಸಾವಿತ್ರಮ್ಮ ಮನೆಯಲ್ಲಿ ಗಂಜಿ ಮಾಡುತಿದ್ದದ್ದೇ ಹೆಚ್ಚು.

ಅನ್ನಕ್ಕೆ  ಗತಿ ಇಲ್ಲ ಎಂದಲ್ಲ .

ಇದ್ದರೂ ತಿನ್ನುವ ಯೋಗ ಅವರಿಗಿರಲಿಲ್ಲ.

ಹೀಗೆ ವಂಶ ಪಾರಂಪರ್ಯವಾಗಿ ಬಂದಿದ್ದ ಜಿಪುಣತನವನ್ನು ಸಲಹುತ್ತಿರುವವ ದಾನಪ್ಪ.

2 ದೋಸೆ ತಿಂದರೆ ಎಲ್ಲಿ ಖರ್ಚಾಗಿ ಬಿಡುತ್ತದೋ ಎಂದು ಒಂದರಲ್ಲೇ ತಿಂಡಿ ಶಾಸ್ತ್ರ ಮುಗಿಸಿ ನೀರನ್ನು ಕುಡಿದು ಎದ್ದು ಬಿಡುತ್ತಿದ್ದ.

ಖರ್ಚಿಗೆ ದಾರಿ ಎಂದು ಟೀ ಕಾಫಿ ಎಲ್ಲವನ್ನೂ ವರ್ಜಿಸಿದ್ದ ಆತ ನೀರನ್ನು ಮಾತ್ರವೇ ಯಥೇಚ್ಛವಾಗಿ ಬಳಸುತಿದ್ದ.

ಕೇಳಿದವರಿಗೆ ಆರೋಗ್ಯಕ್ಕೆ ಒಳ್ಳೆಯದು ಎಂದು ಉಪದೇಶ ನೀಡುತಿದ್ದ.

ಮಣ್ಣಿನ ಮನೆಯಾದರೂ ದೊಡ್ಡ ಮನೆ,ಮನೆ ಪಕ್ಕದಲ್ಲಿ ಕೊಟ್ಟಿಗೆ .ಮನೆ ಎದುರು ನರಪೇತಲ ನಾಯಿ...

ಆ ನಾಯಿಯೋ ಇನ್ನೂ ಮರಿಯಾಗಿಯೆ ಇದೆ ಸುಮಾರು 6 ವರ್ಷದ ಹಿಂದೆ ನಮ್ಮ ಮನೆಯಲ್ಲೇ ಮರಿ ತೆಗೆದು ಕೊಂಡು ಹೋಗಿದ್ದು .ಕೃತಿ ಆಗ ಪೋರಿ.

ಅವನಿಗೆ ಕೊಡುವುದೇ ಇಲ್ಲ ಎಂದು ಅಡ್ಡಡ್ಡ ಬಿದ್ದು ಅತ್ತು ಹಠ ಮಾಡಿದ್ದಳು.

ಆಗ ಶಾರದಾ ಹೇಗೋ ಅವಳನ್ನು ಸಮಾಧಾನಿಸಿ ಕೊಟ್ಟಿದ್ದಳು.

ಅಷ್ಟು ವರ್ಷವಾದರೂ ಅದು ಸರಿಯಾಗಿ ಈ ವರೆಗೆ 1 ಕೆಜಿ ಅನ್ನ ತಿಂದಿರುವುದೂ ಅನುಮಾನ.

.ಅದು ಬದುಕಿರುವುದು ಅನ್ನಕ್ಕಿಂತ ಹೆಚ್ಚು ಮಾತ್ರೆಯಲ್ಲೆ.

ಹೀಗಿರುವ ಮನೆಯಲ್ಲಿ  ಅವ ಉಳಿಸುವುದು ಸಂಸಾರಕ್ಕಾಗಿಯೋ... ಮಕ್ಕಳಿಗಾಗಿಯೋ ಅಲ್ಲ.

ಆ ಮನೆಯಲ್ಲಿ ಈಗ ಇರುವುದು ತಾಯಿ ಮಗ ಇಬ್ಬರೇ..

ಮದುವೆ ಎಂದರೆ ಖರ್ಚು ಎಂದು ಬ್ರಮಿಸಿದ್ದ ಆತ ಮದುವೆಯ ಗೋಜಿಗೆ ಹೋಗಲಿಲ್ಲ.

ಸಾವಿತ್ರಮ್ಮ ನಿಗೋ ವಯಸ್ಸಾಗಿದೆ.ಅಲ್ಲದೆ ಬಿದ್ದು ಕಾಲು ಮುರಿದು ಮೂಲೆಯಲ್ಲಿದ್ದಾರೆ

ಅವರ ಎಲ್ಲ ಕೆಲಸ ಮನೆ ಕೆಲಸ ಎಲ್ಲಾ ಇವನ ಮೇಲೆ ಬಿದ್ದಿದೆ.

ಮನೆ ನೋಡಿಕೊಳ್ಳಲಾದರು ಮದುವೆ ಆಗೋಣ ಎಂದರೆ

ಈಗ ತಲೆ ಕೂದಲೆಲ್ಲ ಬೆಳ್ಳಗಾಗಿದೆ.ಮದುವೆ ಆಗುವೆ ಎಂದರೂ ಹೆಣ್ಣು ಕೊಡುವವರಿಲ್ಲ.

ಅಲ್ಲದೆ ಮದುವೆ ಆಗಲು ಮನವೂ ಇಲ್ಲ.

ಮದುವೆ ಸುದ್ದಿ ಬಂದರೆ ಸಾಕು ಅವನಿಗೋ ಬರಿ ಹಣದ ಭ್ರಮೆ .

ಎಲ್ಲಿ ಮದುವೆಯಾಗಿ ಸರಿ ಬರದೆ ಡೈವರ್ಸ್ ಕೇಳಿ ತನ್ನ ಅರ್ಧ ಆಸ್ತಿ ಅಪಹರಿಸಿ ಬಿಡುತ್ತಾರೋ ಎಂಬ ಭ್ರಾಂತಿಗೆ ಸಿಲುಕಿ ಮದುವೆ ಆಗುವ ನಿರ್ಧಾರವನ್ನೆ ಅಂತ್ಯ ಗೊಳಿಸಿದ್ದಾನೆ.

ಮೂಲೆಯಲ್ಲಿರುವ ಸಾವಿತ್ರಮ್ಮನಿಗೆ ಈಗ ಮಗನ ಯೋಚನೆ ಇನ್ನಷ್ಟು ಮೂಲೆ ಸೇರಿಸಿದೆ.

ಮೊನ್ನೆ ತಾನೆ ಹಾಲು ಕೊಟ್ಟು ನೋಡಿ ಬರಲು ಹೋಗಿದ್ದಾಗ

ನನ್ನನ್ನು ಮಗ ನೋಡಿ ಕಳುಹಿಸುತ್ತಾನೆ....

ಅವನನ್ನು ನೋಡುವವರು ಯಾರು ಎಂದು ಒಂದೇ ಸಮನೆ ಕಣ್ಣೀರಿಟ್ಟರು.

ಈ ಚಿಂತೆ ಮೊದಲೇ ಇದ್ದಿದ್ದರೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ .

ತಾಯಿಯ ಮಾತು ಕೇಳಿ ಅವನು

ನಾನು ಅಮ್ಮ ಕಾಲ ಕಳೆದ ನಂತರ ಮಠಕ್ಕೆ ಹೋಗಿ ಬಿಡುವೆ ಇದೆಲ್ಲ ಮಠಕ್ಕೆ ಬರೆದು ಕೊಡುವೆ ಎಂದ.

ಅತಿ ದೊಡ್ಡ ದಾನಿ ಜಿಪುಣನೇ ಎಂಬ ಮಾತು ದಿಟ..

ಎಷ್ಟೇ ದೊಡ್ಡ ದಾನಿ ಆದರೂ ಎಷ್ಟು ಕೊಡಲು ಸಾದ್ಯ ತನ್ನ ಜೀವಿತದ ದುಡಿಮೆಯ ಕಾಲು ಭಾಗ, ಅರ್ಧ,ಮುಕ್ಕಾಲು ಭಾಗ,ಇಲ್ಲವೇ ತಾನು ಅನುಭವಿಸಿ ನಂತರ ಅಷ್ಟನ್ನೂ  ದಾನವಾಗಿ ನೀಡಬಹುದು.

ಆದರೆ ಜಿಪುಣ...

ತಾನು ಅನುಭವಿಸುವುದನ್ನೂ ತ್ಯಾಗ ಮಾಡಿ ಎಲ್ಲವನ್ನೂ ಉಳಿಸಿಕೊಟ್ಟು ಹೋಗುತ್ತಾನೆ...

ಕೊನೆಗೂ ಸತ್ಯ ಅಲ್ಲವೇ ಕೆರೆಯ ನೀರನು ಕೆರೆಗೆ ಚೆಲ್ಲಿ...

ಈ ಪ್ರಪಂಚದಲ್ಲಿ ಎಲ್ಲವೂ ಕ್ಷಣಿಕ ..

ಎಷ್ಟೇ ಇದ್ದರೂ ಒಂದು ದಿನ ಎಲ್ಲವನ್ನೂ ಬಿಟ್ಟು ಹೋಗಲೇ ಬೇಕು..

ಹಸು ತಾನು ಇದ್ದಷ್ಟು ಹೊತ್ತು ಹೊಲದಲ್ಲೀ ಮೇಯಬಹುದು ಇಳಿ ಹೊತ್ತು ಬಿದ್ದ ತಕ್ಷಣ ಮನೆ ಹಾದಿ ಹಿಡಿಯುತ್ತದೆ ಅದು ಮೆದದ್ದು ಮಾತ್ರ ಅದರದ್ದೇ ಹೊರತು ಹೊಲವನ್ನೆ ಹೊತ್ತು ಹೋಗಲು ಸಾಧ್ಯವೆ? ಪುನಃ ಯಾರು ಬೇಕಾದರೂ ಹೊಲದಲ್ಲಿ ಮೆಯ ಬಹುದಲ್ಲವೆ ಅದು ಇದ್ದಷ್ಟು ಹೊತ್ತು ಮಾತ್ರ ಅದರದ್ದು

ಹಾಗೆಯೇ ನಮ್ಮ ಜೀವನ.

ಸಮಯವೇ ನಿಜವಾದ ಜೊತೆಗಾರ.

ನಮ್ಮ ಸಮಯ ಇದ್ದಷ್ಟು ಹೊತ್ತು ಮಾತ್ರ ನಾವು ಇರುವುದು.

ಆ ಕಾಲಚಕ್ರ  ತಿರುಗಿದಂತೆ ಸರಿಯಲೆ ಬೇಕು

ಇದ್ದಷ್ಟು ದಿನ ಖುಷಿಯಾಗಿ, ನೊಂದವರಿಗೆ ನೆರವಾಗಿ,ಬಾಳಿನ ಬೆಳಕಾಗಿ ಬದುಕಬೇಕು ಎನ್ನುತ್ತ ಅಜ್ಜಿ ಕತೆ ಜೊತೆ ನೀತಿ ಪಾಠ ಹೇಳಿದರೆ ಮೊಮ್ಮಗಳು, ಸೊಸೆ ಮಗ ಎಲ್ಲರೂ ತಲೆದೂಗಿದರು.

ನಿನ್ನಂತ ನೀತಿ ಪಾಠ ಹೇಳುವ ಹಿರಿಯರು ಮನೆಯಲ್ಲಿದ್ದರೆ ಎಲ್ಲರ ಬಾಳು ಬೆಳಕಾಗುತ್ತದೆ .

ಅಂಧನ ಕಣ್ಣು ತೆರೆಯುತ್ತದೆ ಎನ್ನುತ್ತ ಕೃತಿ ಅಜ್ಜಿಯನ್ನು ಅಪ್ಪಿ ಅಜ್ಜಿ ಕೊಟ್ಟ ಕೈ ತುತ್ತು ಬಾಯಿಗೆ ಇಟ್ಟಳು.

■

## ಮಹಾರಾಜನ ಮುಖಭಂಗ



# ನೂಲಿನಂತೆ ಸೀರೆ, ತಾಯಿಯಂತಲ್ಲ ಮಗಳು

**ನಳಿನಿ ಸೂರ್ಯಪ್ರಕಾಶ್**

ಎಪ್ಪತ್ತೈದರ ಪ್ರಮೀಳಾದೇವಿಗೆ ಸುಧಾ ವಾರಪತ್ರಿಕೆಯಲ್ಲಿನ ಪದಬಂಧ ಬಿಡಿಸೋದು ನೆಚ್ಚಿನ ಹವ್ಯಾಸ. ಕನ್ನಡಕ ಹಾಕ್ಕೊಂಡು, ಮೆದುಳಿಗೆ ಕನ್ನಡದ ಕಸರತ್ತು ಕೊಟ್ಟು ಕೂತ ಆಕೆಗೆ ಟೀಪಾಯಿ ಮೇಲಿಟ್ಟಿದ್ದ ಬಾಳೇಹಣ್ಣಿನ ರಸಾಯನದ ಮೇಲೆ ಕಿಂಚಿತ್ತೂ ಗಮನವಿಲ್ಲ. ಕೊನೇ ಮೂರು ಪದಗಳು ಬಾಕಿ ಇದ್ವು. ಎಡದಿಂದ ಬಲಕ್ಕೆ, ""ಬರೀ ಬುರುಡೆ ಬಿಡುವವರಿಗೆಂದೇ ಒಂದು ಪ್ರತ್ಯೇಕ ತಾಣ – ಬಿಡಾರ"", ಮೇಲಿಂದ ಕೆಳಕ್ಕೆ, ""ಮುಸಿಕಿನೊಳಗೆ ಹೇಗೆ ಬಂತು ಇಲಿ?– ಮೂಷಿಕ"", ""ಜಾಮೂನು ತಯಾರಿಸಲು ಸಾಮಾನಿನ ಜೊತೆಗೆ ಇನ್ನೇನು ಸಲಕರಣೆ?– ಸರಂಜಾಮು"", ಇಷ್ಟು ಬರೆದ ಮೇಲೆ, ಒಟ್ಟು ಮೂವತ್ತೊಂದು ಪದಗಳ ಕಸರತ್ತನ್ನು ಹದಿಮೂರುವರೆ ನಿಮಿಷದಲ್ಲಿ ಮುಗಿಸಿ, ಪೆನ್ನಿಗೆ ಕ್ಯಾಪು ಹಾಕಿ, ಕನ್ನಡಕವನ್ನು ಕೇಸಿನಲ್ಲಿಡುತ್ತಿದ್ದ ಹಾಗೆ ಆಕೆಯ ತುಟಿಯಂಚಿನಲ್ಲಿ ವಿಜಯದ ನಗೆ ತಾನೇ ತಾನಾಗಿ ಮೂಡಿತು.

ಪಕ್ಕದಲ್ಲೇ ಸೋಫಾಸೀನಳಾಗಿ ರಸಾಯನ ಮೆಲ್ಲುತ್ತಿದ್ದ ಮಗಳು, ""ಎಲ್ಲಾ ಪದಗಳನ್ನೂ ಮುಗಿಸಿಬಿಟ್ಯಾ?""

""ಹೂಂ""

ಈ ರೀತಿ ಕ್ರಾಸ್ವರ್ಡ್ ಮಾಡ್ತಿದ್ರೆ, ಡಿಮೆನ್ಷಿಯಾದಂಥ ಮರೆವಿನ ಕಾಯಿಲೆ ಬರೋಲ್ವಂತೆ. ನಿಂಗಂತೂ ಗ್ಯಾರಂಟಿ ಬರಲ್ಲ ಬಿಡು. ನನ್ನ ಪುಣ್ಯ""

""ಅಯ್ಯೋ ಏನ್ಮಾಡಿದ್ರೇನು ಭಾಗ್ಯ? ಕಿವಿಗಳ ತಮಟೆ ಢಮಾರ್ ಆಗಿವೆ. ಕನ್ನಡಕವಿಲ್ಲದೆ ಪುಸ್ತಕ ಮುಟ್ಟಕ್ಕಾಗಲ್ಲ. ಬೆನ್ನು ಬಾಗಿದ ಬಿಲ್ಲಾಗಿದೆ. ಬಾಯಲ್ಲಿನ ಹಲ್ಲು ಸೆಟ್ಟು ಲೂಸಾಗಿದೆ. ಒಟ್ನಲ್ಲಿ ನಂಗೆ ಮಲ್ಟಿಪಲ್ ಆರ್ಗನ್ ಫೇಲ್ಯೂರ್ ಮಾಡ್ಬಿಟ್ಟ ಆ ದೇವ್ರು. ಎಷ್ಟು ಬೈದ್ರೂ ಸ್ವಲ್ಪಾನೇ!"" ತನ್ನ ಆರೋಗ್ಯದ ವಿಷಯದಲ್ಲಿ ಮಗಳು ಲೋಟ ಅರ್ಧ ತುಂಬಿದೆ ಅಂದ್ರೆ, ಪ್ರಮೀಳಾದೇವಿ ಅರ್ಧ ಖಾಲಿಯಾಗಿದೆ ಎನ್ನುವ ನಿರಾಶಾವಾದಿ.

ಸಿಹಿ ರಸಾಯನ ಮೆಲ್ಲುತ್ತಾ ಮೊನ್ನೆ ಮಗಳು ತಂದ ಹಸಿಮೆಣಸಿನಕಾಯಿಯ ಬಗ್ಗೆ ಖಾರವಾದ ಪ್ರತಿಕ್ರಿಯೆ ಕೊಡೋದನ್ನ ಪ್ರಮೀಳಾದೇವಿ ಮರೆಯೋದುಂಟೇ? ""ಇಪ್ಪತ್ತು ರೂಪಾಯಿಗೆ ನೀನು ತಂದಿರೋ ಒಂದು ಹಿಡಿ ಮೆಣಸಿನಕಾಯಿಯಲ್ಲಿ ಬರೀ ಮೂವತ್ನಾಲ್ಕು ಇದ್ವು. ಒಂದಕ್ಕೆ ಐವತ್ತೆಂಟು ಪೈಸೆ ಬಿತ್ತು! ಇನ್ನೊಂದು ನಾಲ್ಕು ಕೇಳಿ ಹಾಕಿಸ್ಕೋಬಾರದಿತ್ತೇ? ಚೌಕಾಸಿ ಮಾಡಕ್ಕೂ ಬರಲ್ಲ ನಿಂಗೆ. ಅದ್ಯಾವ ಬೃಹಸ್ಪತಿ ನಿಂಗೆ ಬ್ಯಾಂಕಲ್ಲಿ ಕೆಲಸ ಕೊಟ್ನೋ?""

""ಅಯ್ಯೋ ಟೈಮ್ ಆಗೇ ಹೋಯ್ತು ! ಇನ್ನು ಹತ್ತು ನಿಮಿಷದಲ್ಲಿ ಹೊರಟಿಲ್ಲಾಂದ್ರೆ ಮೊನ್ನೆ ಥರ ಆಟೋನೇ ಗತಿ !"" ಬ್ಯಾಂಕಿಗೆ ಹೊರಡಲು ಮಗಳು ತನ್ನ ರೂಮು ಸೇರುತ್ತಿದ್ದಂತೆಯೇ ಪ್ರಮೀಳಾದೇವಿಯ ಪ್ರತಿಕ್ರಿಯೆಯ ಬಾಣ ಅವಳನ್ನು ಹಿಂಬಾಲಿಸಿತು. ""ನಾನೂ ಫ್ಯಾಕ್ಟರೀಲಿ ಮೂವತ್ನಾಲ್ಕು ವರ್ಷ ಸರ್ವಿಸ್ ಮಾಡ್ದೆ. ಒಂದೇ ಒಂದು ದಿನಾನೂ ನಂಗೆ ಬಸ್ ಮಿಸ್ ಆಗ್ಲಿಲ್ಲ. ಒಂದೊಂದು ದಿನ ಬಸ್ ಮಿಸ್ ಆಗ್ಲೀ ಅಂದ್ಕೊಂಡು ಹೋದ್ರೂ ಹಾಳಾದ್ದು ಮಿಸ್ಸಾಗಿಯೂ ನಂಗೆ ಬಸ್ಸು ಮಿಸ್ ಆಗ್ತಿರಲಿಲ್ಲ ನೋಡು. ನನ್ನ ಟೈಮ್ ಸೆನ್ಸು ಹಾಗಿತ್ತು. ನಾಲಕ್ಕು ಬೀದಿ ಆಚೆ ಇರೋ ಬ್ಯಾಂಕಿಗೆ ಆಟೋಲಿ ಹೋಗೋದು ಅಂದ್ರೇನು?"".

ರಾತ್ರಿಯ ಊಟಕ್ಕೆ ಅನ್ನ ಸಾರು, ಪಡವಲಕಾಯಿ ಪಲ್ಯ ತಾಯಿ ಮಗಳಿಬ್ಬರಿಗೂ ಒಪ್ಪಿಗೆಯಾದ ಪ್ರಯುಕ್ತ ಪ್ರಮೀಳಾದೇವಿ ಸಂಜೆಯ ಹೊತ್ತಿಗೆ ಪಡವಲಕಾಯಿಯನ್ನು ಸಣ್ಣಗೆ ಹೆಚ್ಚಿ ಆಗಿತ್ತು. ಮಗಳು ಸಾರಿನ ತಯಾರಿ ಮಾಡ್ತಿದ್ದ ಹಾಗೆ, ಅಡುಗೆಮನೆಯಲ್ಲಿ ಹಿಂದೆ ಕುರ್ಚಿಯಲ್ಲಿ ಕೂತ ತಾಯಿಯ ರನ್ನಿಂಗ್ ಕಾಮೆಂಟ್ರಿಯೂ ಶುರುವಾಯ್ತು. ""ಅರ್ಧ ಲೀಟರ್ ಸಾರು ಮಾಡಕ್ಕೆ ಅಷ್ಟು ದೊಡ್ಡ ತಪ್ಪಲೆ ಇಟ್ಟಿದ್ದೀಯಲ್ಲ, ನಿಂಗೆ ಕಾಮನ್ ಸೆನ್ಸೇ ಇಲ್ಲ ನೋಡು. ""

""ಹೋದ ವಾರ ನಾನು ಎರಡು ದಿನ ಟ್ರೈನಿಂಗಿಗೆ ಅಂತ ಹೋಗಿದ್ದಾಗ, ಕುಂಡದಲ್ಲಿದ್ದ ಕರುಣಕುಂಡಲ ಗಿಡವನ್ನೆಲ್ಲ ನೀರು ಹಾಕದೇ ಕರುಣೆಯಿಲ್ಲದೆ ಒಣಗಿಸಿದ್ಯಲ್ಲ. ಸ್ವಲ್ಪನಾದ್ರೂ ಗಿಡಗಳ ಮೇಲೆ ಅಕ್ಕರೆ ಬೇಡ್ವೇ?""

""ಅಯ್ಯೋ ನಂಗೇನು ಗೊತ್ತು? ನೀನು ನೀರು ಹಾಕು ಅಂತ ಹೇಳಲೇ ಇಲ್ಲ?""

""ಕುಂಡದಲ್ಲಿರೋ ಗಿಡಗಳಿಗೆ ನೀರು ಹಾಕಬೇಕು ಅನ್ನೋದೂ ಕಾಮನ್ ಸೆನ್ಸು !"" ಮಗಳ ಕಡೆಯಿಂದ ತಿರುಗುಬಾಣ!. ಅಂತೂ ಮುಯ್ಯಿಗೆ ಮುಯ್ಯಿ ತೀರಿತ್ತು. ಇತ್ತ ಸಾರು ಘಮ್ಮೆಂದು ಒಂದು ಕುದಿ ಕುದಿತ್ತು. ಊಟದ ಮಧ್ಯೆ ಮಗಳೆಂದಳು, ""ನಾಳೆ ಕೆಲಸದ ಕಾಮಾಕ್ಷಿ ಬರಲ್ವಂತೆ. ಒಂದಿನ ರಜ ಅಷ್ಟೆ ಅಂದ್ಲು.""

""ಅದೇ ಅಂದ್ಕೋತಿದ್ದೆ ನೋಡು ಬೆಳಿಗ್ಗೆಯೆಲ್ಲ. ತಾರೀಖು ಹದಿನೈದಾಯ್ತು. ಇವಳು ಚಕ್ಕರ್ ಕೊಡೋ ಟೈಮು ಅಂತ. ಹೋದ ತಿಂಗಳು ನಾಲಕ್ಕು, ಐದನೇ ತಾರೀಖು ಬರಲಿಲ್ಲ. ಅದಕ್ಕೋ್ಹದ ತಿಂಗಳು ಹನ್ನೆರಡು, ಹದಿಮೂರನೇ ತಾರೀಖು ಹೇಳದೇ ಕೇಳದೇ ಕೈ ಕೊಟ್ಟಳು.""

""ಈ ಡೇಟುಗಳನ್ನೆಲ್ಲಾ ನೀನು ನೆನಪಿಟ್ಟುಕೊಂಡಿರ್‍ತೀಯಲ್ಲ!"" ರಾಗವೆಳೆದಳು ಮಗಳು. ""ಹೂಂ, ಇನ್ನೇನು ಮತ್ತೆ, ನೀನು ಅವಳ ರಜಾದಿನಗಳನ್ನ ಕ್ಯಾಲೆಂಡರಿನಲ್ಲಿ ಕಾಮಾಕ್ಷಿ ಚಕ್ಕರ್ ಅನ್ನೋದನ್ನ, ಕಾಚ, ಕಾಚ ಅಂತ ಅಸಹ್ಯವಾಗಿ ಗುರುತು ಹಾಕೋದನ್ನ ಬಿಡು."" ಅಷ್ಟರಲ್ಲಿ ಪ್ರಮೀಳಾದೇವಿಯ ಮೊಬೈಲು ಜೋರಾಗಿ ರಿಂಗಣಿಸಿತು. ಕೈಗೆತ್ತಿಕೊಂಡವಳೇ, ""ಹಲೋ, ಹೂಂ! ಹೋದ ವರ್ಷ ಏಪ್ರಿಲ್, ಹತ್ತೊಂಬತ್ತನೇ ತಾರೀಖು ನಿಮ್ಮನೇಗೆ ಬಂದಿದ್ದು. ಆಮೇಲೆ ಬರೀ ಫೋನಲ್ಲಿ ಮಾತಾಡೋದೇ ಆಯ್ತು."" ಅತ್ತ ಕಡೆ ಆಕೆಯ ಹಳೇ ಸ್ನೇಹಿತೆ, ಸಹೋದ್ಯೋಗಿಯಾಗಿದ್ದ ಸುಬ್ಬಲಕ್ಷ್ಮಿ. ಅಂತೂ ಕೆಲ ನಿಮಿಷದ ಹರಟೆ ಮುಗಿದ ಮೇಲೆ, ಮಗಳೆಂದಳು, ""ಅಲ್ಲಾ, ನಿಂದದೇನು ಮಾತಾಡೋ ವರಸೆ ಅಂತೀನಿ? ಫೋನು ಎತ್ಕೊಂಡ ಕೂಡಲೇ ಹೋದ ವರ್ಷ ಏಪ್ರಿಲ್ ಹತ್ತೊಂಭತ್ತನೇ ತಾರೀಖು ನಿಮ್ಮನೇಗೆ ಬಂದಿದ್ದೆ ಅಂದ್ರೆ ಅವ್ರೇನು ತಿಳ್ಕೋಬೇಡ?""

""ಇದ್ರಲ್ಲಿ ಅಂದ್ಕೊಳ್ಳೋದೇನಿದೆ? ನಾವು ಫ್ಯಾಕ್ಟ್ರೀಲಿದ್ದಾಗ ಎಲ್ರೂ ತಾವು ಸಿ.ಎಲ್, ಸಿಕ್ ಲೀವ್ ಹಾಕಿದ್ದು ಯಾವಾಗ ಅಂತ ಮರೆತುಹೋಗಿದ್ರೆ, ನನ್ನ ಕೇಳೋರು. ಅಂತಹ ಪ್ರಚಂಡ ನೆನಪಿನ ಶಕ್ತಿ ನಂದು. ಅದಕ್ಕೆ ಸುಬ್ಬಲಕ್ಷ್ಮಿ ಹೇಳೋರು, ನೀನು ಏನಾದ್ರೂ ಸಾಧಿಸಬಹುದಿತ್ತು ಕಣೆ ಅಂತ.ಇನ್ನೇನು ಸಾಧನೆ? ಊರು ಹೋಗು ಅನ್ನತ್ತೆ, ಕಾಡು ಬಾ ಅನ್ನತ್ತೆ. "" ಆ ದಿನದ ಕಾರ್ಯಕ್ರಮಕ್ಕೆಲ್ಲ ತೆರೆಬಿದ್ದು ಮಗಳು ಮಲಗಲು ರೂಮು ಸೇರಲು ಅಣಿಯಾದಳು.

""ಹಾಳಾದ್ದು ಯಾಕಪ್ಪಾ ರಾತ್ರಿ ಆಯ್ತು ಅನ್ಸತ್ತೆ. ನಿದ್ದೇನೇ ಬರಲ್ಲ. ಅರ್ಧರ್ಧ

ಗಂಟೆಗೂ ಗಡಿಯಾರ ನೋಡೋ ಹಾಗಾಗತ್ತೆ. ಹಾಳು ಗಡಿಯಾರದ ಮುಳ್ಳನ್ನ ನಾನೇ ತಿರುಗಿಸಿಬಿಡ್ಲಾ ಅನ್ಸತ್ತೆ !""

""ನೀನು ಹೀಗೆ ಕೆಲಸಕ್ಕೆ ಬಾರದ ಡೇಟುಗಳನ್ನೆಲ್ಲಾ ನೆನಪಿಸಿಕೊಂಡು ಯೋಚನೆ ಮಾಡ್ತಿದ್ರೆ ನಿದ್ದೆ ಹೇಗೆ ಬರತ್ತೆ?"" ನಿದ್ರಾಹೀನತೆಗೆ ಪರಿಹಾರ ಕೊಟ್ಟ ಸಮಾಧಾನದಿಂದ ಮಗಳೆಂದಳು.

""ಅಯ್ಯೋ ! ನಿದ್ದೆ ಬರದೇ ಇರೋದಕ್ಕೇ ಹಾಗೆ ಯೋಚ್ನೆ ಮಾಡೋದು! ನಂಗೊತ್ತಿಲ್ವ ?""

ಅದೇನೋ ಹೇಳ್ತಾರಲ್ಲ, ಹುಚ್ಚು ಬಿಡದೆ ಮದುವೆ ಆಗಲ್ಲ, ಮದುವೆ ಆಗದೇ ಹುಚ್ಚು ಬಿಡಲ್ಲ ! ಹಾಗಾಯ್ತು ಕತೆ ಅಂದ್ಕೋತ ಮಗಳು ತೆಪ್ಪಗೆ ತನ್ನ ರೂಮು ಸೇರಿದಳು.

ಇಷ್ಟಕ್ಕೂ ಈ ಪ್ರಮೀಳಾದೇವಿ ಯಾರು ಅಂತೀರಿ? ಒಬ್ಬಳೇ ಮಗಳಿರುವ ನನ್ನ ಪ್ರೀತಿಯ ಅಮ್ಮ !

**********************

■



# ರೋಬೋಟ್ ರಗಳೆ

✍ ಅರವಿಂದ ಜೋಶಿ

ಅಂದು ಮೂವತ್ತೊಂದನೇಯ ತಾರೀಖು, ಎಂದರೆ ಆ ಮಾಹೆಯ ಕೊನೆಯ ದಿನ. ಎಂದಿನಂತೆ ಮನೆಗೆಲಸ ಪೂರೈಸಿ ಹೊರಟು ನಿಂತ ನಿಂಗಿಯನ್ನು ಕಂಡ ಪಮ್ಮೀ

"ಏಯ್...ನಿಂಗೀ... ನಾಳೆಯಿಂದ ನೀ ಕೆಲಸಕ್ಕೆ ಬರೋದು ಬೇಡ" ಎಂದಾಗ ಶಾಕ್ ಹೊಡೆಸಿಕೊಂಡವಳ ತರಹ ನಿಂತ ನಿಂಗಿ–"ಯಾಕ್ರವ್ವಾ.. ಬೇರೆ ಕಡೆ ಎಲ್ಲಾದ್ರೂ ಹೋಗ್ತಿದ್ದೀರಾ?, ನನ್ನ ಕಡೆಯಿಂದ ಏನಾದ್ರೂ ತಪ್ಪ ಆಗೈತಾ? ನಾನು ಉಸಾರಾಗೇ ಅವ್ನೀ.., ಎರಡೂ ಡೋಸ್ ವ್ಯಾಕ್ಸಿನೇಷನ್ ಕೂಡಾ ಹಾಕ್ಸೊಂಡಿದ್ದೀನಿ.. ಮತ್ಯಾಕ್ರವ್ವಾ.?"

ಹೀಗೆ ಒಂದರ ಹಿಂದೆ ಒಂದರಂತೆ ಪ್ರಶ್ನೆ ಹರಿ ಬಿಟ್ಟಳು. ಅವಳ ಎಲ್ಲ ಪ್ರಶ್ನೆಗಳನ್ನೂ ಸಾವಧಾನದಿಂದ ಆಲಿಸಿದ ಪಮ್ಮೀ–"ನೀ ತಿಳ್ದಾಂಗೆ ಅಂಥದ್ದೇನೂ ಇಲ್ಲ, ನಿನ್ನೆ ನಮ್ಮ ಯಜಮಾನ್ರು ಒಂದು ರೋಬೋಟ್ ಖರೀದಿ ಮಾಡ್ಕೊಂಡು ಬಂದಿದ್ದಾರೆ.." ಎಂದು ಹೇಳುತ್ತಿದ್ದ ಪಮ್ಮೀ ಯನ್ನು ಅರ್ಧಕ್ಕೆ ತಡೆದ ನಿಂಗಿ "ಹಾಗೆಂದ್ರೆ ಏನ್ರವ್ವಾ.. ನನ್ನ ಕೆಲಸಕ್ಕೂ ಅದ್ಕು ಏನು ಸಂಬಂಧ..?" ಎಂಬ ಪ್ರಶ್ನೆ ಹಾಕಿದಾಗ ಪಮ್ಮೀ–"ನೋಡು ನಿಂಗೀ..ಈ ರೋಬೋಟ್ ಅಂದ್ರೆ ಅದೊಂದು ಯಂತ್ರ ಮಾನವ ಇದ್ದಾಂಗೆ, ನಾವು ಏನೇ ಕೆಲಸಾ ಹೇಳಿದ್ರೂ ಅದು ಕಡ್ಮೆ ಟೈಂ ನಲ್ಲಿ ಅಚ್ಚುಕಟ್ಟಾಗಿ ಮಾಡಿ ಮುಗಸ್ತದೆ."

ಎಂದು ಅವಳಿಗೆ ಅರ್ಥ ವಾಗುವ ಹಾಗೆ ವಿವರಿಸಿದಳು.ಪುನ: ನಿಂಗಿ–"ಅದ್ಸರಿ ಕಣ್ರವ್ವಾ.. ಅದೆಲ್ಲಾ ಕಟ್ಕೊಂಡು ನನಗೇನೂ ಆಗಬೇಕಾಗಿಲ್ಲ.. ನೀವು ಕೆಲಸಕ್ಕೆ ಬರೋದು ಬ್ಯಾಡಾ ಅನ್ನೊ ಇಚಾರಾನಾ ಮೂರು ತಿಂಗ್ಳ ಮೊದ್ಲೇ ಹೇಳಬೇಕಾಗಿತ್ತಲ್ವಾ... "ಸಣ್ಣ ಬಾಂಬ್ ಸಿಡಿಸಿದಳು. ಅದೇಕೋ ನಿಂಗಿಯ ಮಾತಿನ ಧಾಟಿಯಲ್ಲಿ ಕಾನೂನಿನ ವಾಸನೆ ಗ್ರಹಿಸಿದ ಪಮ್ಮೀ ಇನ್ನು ಇವಳೊಂದಿಗೆ ವಾದಕ್ಕೆ ಇಳಿಯೋದು ಸೂಕ್ತ ಅಲ್ಲ ಎಂದರಿತು" ಬಂದೇ ಒಂದ್ನಿಮಿಷ..ಇರು" ಎನ್ನುತ್ತ ರೂಮಿಗೆ ಹೋಗಿ ಆ ತಿಂಗಳ ಸಂಬಳದ ಜೊತೆಗೆ ಮತ್ತೆ ಮೂರು ತಿಂಗಳ ಸಂಬಳ ಸೇರಿಸಿ ತಂದು ಅವಳ ಕೈಗಿತ್ತು ಸಾಗ ಹಾಕುವಷ್ಟರಲ್ಲಿ ಹೈರಾಣಾಗಿದ್ದಳು.

ಸಂಜೆ ಸಮಯ ಕಚೇರಿಯಿಂದ ಮನೆಗೆ ಆಗಮಿಸಿದ ಪತಿ ಪರಮೇಶಿ, ಕಾಫೀ ತಿಂಡಿ ಪೂರೈಸಿ, ತಾನು ಖರೀದಿಸಿ ತಂದಿದ್ದ ರೋಬೋಟ್ ಸುತ್ತಲೂ ಭದ್ರವಾಗಿ ಬಿಗಿದಿದ್ದ ಪ್ಯಾಕ್‌ಗಳನ್ನು ನಿಧಾನವಾಗಿ ಬಿಚ್ಚಿ, ಪಮ್ಮೀಗೆ ಹೂವು–ಗಂಧದಕಡ್ಡಿ ತಂದು ಪೂಜೆ ಮಾಡುವಂತೆ ಹೇಳಿದ. ಅವಳು ಆತ ಹೇಳಿದಂತೆ ಪೂಜೆ ಮಾಡಿ ಮುಗಿಸಿದಳು.ಆರಂಭದಲ್ಲಿ ಅದಕ್ಕೆ ಕಸ ಗುಡಿಸುವ ಕೆಲಸವಹಿಸುವುದು ಶೋಭೆ ಅಲ್ಲ ಎಂದರಿತವ ಅದಕ್ಕೆ ವೆರಾಂಡಾದಲ್ಲಿನ ಟೀ ಪಾಯ್ ಮೇಲೆ ಅಸ್ತವ್ಯಸ್ತ ವಾಗಿ ಬಿದ್ದಿದ್ದ ಮ್ಯಾಗ್ಜೀನ್–ದಿನ ಪತ್ರಿಕೆ ತರುವಂತೆ ಸೂಚಿಸಿ, ರಿಮೋಟ್‌ನ ಸಂಬಂಧ ಪಟ್ಟ ಬಟನ್ ಒತ್ತಿದ. ಕ್ಷಣ ಮಾತ್ರದಲ್ಲಿ ಅದು ಹೋಗಿ ಅಲ್ಲಿದ್ದ ಎಲ್ಲಾ ಮ್ಯಾಗ್ಜಿನ್–ಪೇಪರ್ ಗಳನ್ನು ಅಂದವಾಗಿ ಜೋಡಿಸಿ ತಂದು ಆತನೆದುರು ಇಟ್ಟಿತು.ಅದನ್ನು ನೋಡುತ್ತಿದ್ದ ಪಮ್ಮೀ–"ವಾರೇವಾ..." ಎಂದು ಕಣ್ಣರಳಿಸಿ ಚಪ್ಪಾಳೆ ತಟ್ಟುತ ಸಂತೋಷ ವ್ಯಕ್ತಪಡಿಸಿದಳು. ಅವಳಿಗಂತೂ ಖುಷಿಯೋ ಖುಷಿ, ಏಕೆಂದರೆ ಆಕೆ ಮಾಡುವ ಮನೆಗೆಲಸಗಳಿಂದ ದೊಡ್ಡ ರಿಲೀಫ್ ಸಿಕ್ಕಂತಾಗಿತ್ತು.

ಹೀಗೆ ಸತತವಾಗಿ ಎರಡು ಮೂರು ದಿನಗಳಲ್ಲಿ ಆ ರೋಬೋಟ್ ಮನೆ ಸ್ವಚ್ಛಗೊಳಿಸುವುದು, ಪಾತ್ರೆ–ಪರಡೆಗಳನ್ನು ಲಕ–ಲಕ ಹೊಳೆಯುವಂತೆ ತೊಳೆದು ಅವುಗಳನ್ನು ಸ್ಟ್ಯಾಂಡ್‌ನಲ್ಲಿ ನೀಟಾಗಿ ಜೋಡಿಸುವುದು, ಒಗೆದು ಒಣ ಹಾಕಿದ ಬಟ್ಟೆಗಳನ್ನು ಮಡಿಸಿ ಆಯಾ  ಬೀರುವಿನಲ್ಲಿ ಇಡುವುದು ಮಾಡುತ್ತ ಪರಮೇಶಿಯ ಮನೆಯ ಲುಕ್ಕೇ ಬದಲಾಯಿಸಿತು. ಪಮ್ಮೀಗಂತೂ ಈ ವಿಷಯ ಆಸುಪಾಸಿನ, ಎದುರು ಮನೆಯಲ್ಲಿದ್ದ ತನ್ನ ಗೆಳತಿಯರಿಗೆ ತಿಳಿಸಿ ಸಂಭ್ರಮಿಸುವ ತುಡಿತ ಹೆಚ್ಚಾಯಿತು. ಮರುದಿನ ತನ್ನ ಪತಿರಾಯ ಕಚೇರಿಗೆ ತೆರಳಿದ ಬಳಿಕ ಹತ್ತಿರದ ಮನೆಯ ಗೆಳತಿಯರಿಗೆಲ್ಲ ಫೋನಾಯಿಸಿ ತನ್ನ ಮನೆಗೆ ಬಂದು ನೋಡಿ ಹೋಗುವಂತೆ ತಿಳಿಸಿದಳು. ಹೊಸ ವಿಚಾರ, ಹೊಸ, ಪ್ರಯೋಗ ನೋಡುವ ಕುತೂಹಲ ಹೊತ್ತು ಆಕೆಯ ಗೆಳತಿಯರು ಸರಿಯಾದ ಸಮಯಕ್ಕೆ ಬಂದಿಳಿದು ಅಡುಗೆ ಕೋಣೆಯಲ್ಲಿ ಜಮಾಯಿಸಿದರು. ಇಕ್ಕಟ್ಟಾದ ಜಾಗದಲ್ಲಿ ಒಬ್ಬರಿಗೊಬ್ಬರು ಅಂಟಿ ನಿಂತು ಬೆರಗು ಕಣ್ಣುಗಳಿಂದ ಬೇಸಿನ್ ಕಡೆಗೆ ನೋಡತೊಡಗಿದರು. ಬೇಸಿನ್ ಭರ್ತಿ ಪಾತ್ರೆ, ಪ್ಲೇಟು, ಊಟದ ತಟ್ಟೆ, ಕಾಫೀ–ಟೀ ಕುಡಿದ ಗ್ಲಾಸುಗಳಿಂದ ತುಂಬಿ ತುಳುಕಾಡುತ್ತಿತ್ತು. ಗೆಳತಿಯರಿಗೆ ಸರ್ಪ್ರೈಸ್ ಕೊಡುವ ಹುಮ್ಮಸ್ಸಿನೊಂದಿಗೆ ಪಮ್ಮೀ ರೋಬೋಟ್ ತಂದು ಬೇಸಿನ್ ಎದುರು ತಂದಿಟ್ಟಳು. ಅಮಿತಾನಂದ ಸ್ಥಿತಿಯಲ್ಲಿದ್ದಾಕೆ ರಿಮೋಟ್‌ನಲ್ಲಿ ಯಾವುದೋ ಬಟನ್ ಬದಲಿ ಇನ್ಯಾವುದೋ ಬಟನ್ ಒತ್ತಿಬಿಟ್ಟಳು. ಪರಿಣಾಮ ಆ ರೋಬೋಟ್ "ಗುಂಯ್" ಎನ್ನುವ ಶಬ್ದ ಮಾಡುತ್ತ ಬೇಸಿನ್ ಒಳಗಿದ್ದ ಪಾತ್ರೆ, ಪ್ಲೇಟು, ಗಾಜಿನ ಲೋಟ, ಊಟದ ತಟ್ಟೆ ಎಲ್ಲವನೂ ಎತ್ತಿ ಎತ್ತಿ ಕೆಳಗೆ ಬಿಸಾಕತೊಡಗಿತು. ನೀಟಾಗಿದ್ದ ಅಡುಗೆ ಮನೆ ಕ್ಷಣಾರ್ಧದಲ್ಲಿ ತಿಪ್ಪೆಗುಂಡಿ ಆದಂತಾಯಿತು. ಇದನ್ನು ಕಂಡ ಆಕೆಯ ಗೆಳತಿಯರು ಕೈಯಲ್ಲಿ ಜೀವ ಹಿಡಿದು ಓಡುವರಂತೆ ಲಗುಬಗೆಯಿಂದ ಎಲ್ಲ ಆಚೆ ಓಡೋಡಿ ಬಂದರು.ವಿಚಿತ್ರ ಎಂಬಂತೆ ಆ ಬೇಸಿನ್ ಖಾಲಿ ಯಾದರೂ ಸಹಿತ ಆ ರೋಬೋಟ್ ಎತ್ತಿ ಎತ್ತಿ ಹಾಕುವ ಆಕ್ಷನ್ ಮಾಡುತ್ತಲೇ ಇತ್ತು. ಕೆಲ ನಿಮಿಷಗಳ ಬಳಿಕ ಅದರೊಳಗಿಂದ "ಘುಡ್..ಘುರ್..ಘುರ್ ಎಂಬ ಶಬ್ದ ಬಂದು ಅದು ಸ್ಥಬ್ದವಾಯಿತು." ಥೂ.. ಇದರಿಂದ ಇನ್ನೇನು ಅನಾಹುತ ಆಗುತ್ತೋ..." ಎಂದು ಗೊಣಗುತ್ತ ಪಮ್ಮೀ ಕಷ್ಟಪಟ್ಟು ಅಡುಗೆ ಮನೆಯಿಂದ ಸರಸರನೇ ಹೊರಗಡೆ ಕಾಂಪೌಂಡ್ ಬಳಿ ಓಡಿ ಬಂದು, ಪತಿಗೆ ಫೋನಾಯಿಸಿ ವಿಷಯ ತಿಳಿಸಿ ತಕ್ಷಣವೇ ಹೊರಟು ಬರುವಂತೆ ಫರ್ಮಾನ್ ಹೋರಡಿಸಿದಳು. ಗಾಬರಿಗೊಂಡ ಪರಮೇಶಿ ಅರ್ಧ ಘಂಟೆಯೊಳಗೆಲ್ಲ ಅದಕ್ಕೆ ಸಂಬಂಧಿಸಿದ ಟೆಕ್ನೀಶಿಯನ್ ಜೊತೆ ಬಂದು, ತಿಪ್ಪೆಗುಂಡಿ ಯಾಗಿದ್ದ ಅಡುಗೆ ಮನೆಯಿಂದ ಅದನ್ನು ಎತ್ತಿಕೊಂಡು ಹೊರಗೆ ತಂದು ಚೆಕ್ ಮಾಡಿಸಿದ ಆ ನಂತರ ಆತ ಒಳಗಡೆ ಪ್ರಮುಖ ಕನೆಕ್ಟಿಂಗ್ ವೈರ್ ಹುಟ್ಟಿದೆ, ಹಾಗೂ ಒಂದು ಮೊಟಾರ್ ಕೂಡ ಹಾಳಾಗಿದೆ, ಇದನ್ನು ನಮ್ಮ ವರ್ಕ್ ಶಾಪ್‌ಗೆ ತೆಗೆದುಕೊಂಡು ಹೋಗಿ ಇನ್ನಷ್ಟು ಪರೀಕ್ಷೆ ಮಾಡಿ ತಿಳಿಸುವುದಾಗಿ ಹೇಳಿ ಬಾಡಿಗೆ ವ್ಯಾನ್‌ನಲ್ಲಿ ಹಾಕಿಕೊಂಡು ಹೊರಟು ಹೋದ.

ಅವನು ಹೋದ ಬಳಿಕ ಅಡುಗೆ ಮನೆಯಲ್ಲಿ ರೋಬೋಟ್‌ನಿಂದಾಗಿ ಆದ ರಾದ್ಧಾಂತ ಸರಿಪಡಿಸಲು ಪಮ್ಮೀ ಹಾಗೂ ಪರಮೇಶಿ ಸತತ ಮೂರು ಘಂಟೆ ಬೆವರು ಸುರಿಸಬೇಕಾಗಿ ಬಂದಿತು. ಆ ಸಂಜೆ ಟೆಕ್ನಿಷಿಯನ್ ನಿಂದ ಬಂದ ಕಾಲ್‌ನಲ್ಲಿ ಆತ ಎಲ್ಲಾ ಪರೀಕ್ಷೆ ಮಾಡಿದೆ, ಅದರಲ್ಲಿನ ಎರಡು–ಮೂರು ಪಾರ್ಟಗಳನ್ನು ಕಂಪನಿಯಿದಲೇ  ತರಿಸಿ  ಹಾಕಬೇಕು  ಅದಕ್ಕೆ ಕನಿಷ್ಠ ಮೂರು ವಾರಗಳಾದರೂ

ಬೇಕಾಗಬಹುದು ಎಂದು ತಿಳಿಸಿದ್ದ. ಈ ವಿಷಯವನ್ನು ಪಮ್ಮೀಗೆ ತಿಳಿಸದಾಗ ಸುಸ್ತಾಗಿದ್ದ ಆಕೆ ಸರಣಿ ಪಟಾಕಿ ಸಿಡಿಸಿದಂತೆ ಪರಮೇಶಿಗೆ ಕ್ಲಾಸ್ ತೆಗೆದಕೊಳ್ಳುತ್ತ ಕೊನೆಯದಾಗಿ ಏರು ಸ್ವರದಲ್ಲಿ"ನೋಡಿ.. ದಯವಿಟ್ಟು ಆ ನಿಂಗಿಯ ಮನೆಗೆ ಹೋಗಿ ಆಕೆಯನ್ನು ಹೇಗಾದರೂ ಮಾಡಿ ಒಪ್ಪಿಸಿ, ನಾಳೆಯಿಂದ ಕೆಲಸಕ್ಕೆ ಬರುವಂತೆ ಮಾಡಿ.."ಎಂದು ದುಂಬಾಲು ಬಿದ್ದಳು. ಅರ್ಧಾಂಗಿಯ ಮನಸ್ಥಿತಿ ಅರ್ಥಮಾಡಿಕೊಂಡ ಪರಮೇಶಿ ಅದೇ ಘಳಿಗೆಯಲ್ಲಿ ನಿಂಗಿಯ ಮನೆಗೆ ಸ್ಕೂಟರ್ ಏರಿ ಬಂದು ಗೋಗೆರೆಯುವ ರೀತಿಯಲ್ಲಿ ಆಕೆಗೆ ಎಲ್ಲವನ್ನೂ ವಿವರಿಸಿ, ನಾಳೆಯಿಂದಮನೆ ಕೆಲಸಕ್ಕೆ ಬರುವಂತೆ ಕೇಳಿದ. ಸ್ವಲ್ಪ ಹೊತ್ತು ಯೋಚನೆ ಮಾಡಿದ ನಿಂಗಿ, ಕೊನೆಗೆ ಗತ್ತಿನ ಸ್ವರದಲ್ಲಿ" ಆಯ್ತು ಸ್ವಾಮೀ ನೀವ್ಹೇಳಿದ್ರೀ ಅಂತ ಬರ್ತೀನಿ, ಆದ್ರೆ ಒಂದು ಕಂಡೀಷನ್ ಏನೆಂದ್ರೆ ಮೊದ್ಲಿಗಿಂತಲೂ ಎರಡು ಪಟ್ಟು ಹೆಚ್ಚು ಸಂಬಳಾ ಕೊಟ್ರೇ...."ಎನ್ನುತ್ತಿದ್ದಂತೆ, ಪರಮೇಶಿ "ಆಯ್ತು-ಆಯ್ತು.."ಎನ್ನುತ್ತ ಮನದಲ್ಲೇ "ಸಧ್ಯ ಇವಳು ಒಪ್ಪಿಕೊಂಡಳಲ್ಲ..." ಎಂದು ಸಮಾಧಾನ ಪಟ್ಟು, ನಾಳೆಯಿಂದ ನಿಂಗಿ ಕೆಲಸಕ್ಕೆ ಬರುವ ವಿಚಾರ ಸೆಲ್ ಫೋನ್ ಮೂಲಕ ಹೆಂಡ್ತಿಗೆ ಹೇಳಿ ನಿಟ್ಟುಸಿರು ಬಿಟ್ಟ. ■

## ಲಕ್ಷ್ಮಣ ಕೊರವಂಜಿ

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷ್ಮಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.

ಅವುಗಳಲ್ಲಿ ಇದೂ ಒಂದು – ನಿಮಗಾಗಿ.



ಸಿನಿಮಾ ಮ್ಯಾನೇಜರ್ :

ಈವತ್ತು ಕಲೆಕ್ಷ್ನ ವಾಶಿ.

## ತುಣಕು ಮಿಣಕು

✍ ಎ.ವಿಜಯೇಂದ್ರ ರಾವ್

" ಸಿಂಗಲ್ಲಾ.......? "

ಗುಂಡ ಒಂದು ಒಳ್ಳೆಯ ರೆಸ್ಟೋರೆಂಟ್ ನಲ್ಲಿ ಕೂತು ಏನೋ ರೊಮಾಂಟಿಕ್ಕಾಗಿ ಯೋಚಿಸುತ್ತಿದ್ದಾಗ, ಒಬ್ಬಳು ಸುಂದರ ಯುವತಿಯು ಗುಂಡನ ಹತ್ತಿರ ಬಂದು – ನೀವು ಸಿಂಗಲ್ಲಾ ಅಂತ ಕೇಳಿದಳು.ಗುಂಡ ಮನದಲ್ಲಿ ಏನೇನೋ ಕಲ್ಪಿಸಿಕೊಂಡು ಆನಂದದಿಂದ– ಹೌದು, ನಾನು ಸಿಂಗಲ್ಲೇ, ನಿಮಗೆ ಹೇಗೆ ಗೊತ್ತಾಯಿತು ಎಂದು ಆಶ್ಚರ್ಯದಿಂದ ಕೇಳಿದಾಗ, ಏನಿಲ್ಲಾ...ನಿಮ್ಮ ಮುಂದೆ ಇರುವ ಚೇರ್ ಬೇಕಿತ್ತು ಎಂದು ಅದನ್ನು ತೊಗೊಂಡು ತನ್ನ ಗೆಳತಿಯರನ್ನು ಸೇರಿದ್ದನ್ನು, ಗುಂಡ ಮನನೊಂದು ಹತಾಶೆಯಿಂದ ನೋಡಿದ...!

"ಬುದ್ದಿಗೆ ಕಸರತ್ತು.....!"

ಒಮ್ಮೆ ಕಳ್ಳನೊಬ್ಬನು ಒಂದು ಮನೆಗೆ ಕದಿಯಲು ಹೋದಾಗ, ಅಲ್ಲಿ ಆ ಮನೆ ಕಾಯಲು ಮನೆ ಮುಂದೆ ಒಂದು ನಾಯಿಯು ಇತ್ತು. ಅದು ಅವನನ್ನು ನೋಡಿ ಸುಮ್ಮನೆ ಇತ್ತು. ಏನೂ ಮಾಡಲಿಲ್ಲ. ಕಳ್ಳನಿಗೆ ಕಳ್ಳತನ ಮಾಡುವುದೋ, ಬೇಡವೋ ಎನ್ನುವ ದ್ವಂದ್ವ ವಾಯಿತು. ಒಳಗೆ ಹೋದೊಡನೆ ಬೊಗಳಿದರೆ ಏನು ಮಾಡುವುದು? ಅಕಸ್ಮಾತ್ ಈಗ

ಬೊಗಳಿದರೆ ಮುಂದಿನ ಮನೆಗಾದರೂ ಹೋಗಬಹುದು ಎಂದು ಯೋಚಿಸುತ್ತಿದ್ದನು. ಏನಾದರೂ ಆಗಲೆಂದು ಒಂದೆರಡು ಬಿಸ್ಕತ್ತನ್ನು ಅದರೆಡೆಗೆ ಎಸೆದನು. ಅದನ್ನು ನೋಡಿದೊಡನೆ ಅದುವರೆಗೂ ಸುಮ್ಮನಿದ್ದ ನಾಯಿಯು ಕಳ್ಳನನ್ನು ನೋಡಿ ಜೋರಾಗಿ ಬೊಗಳಿ, ಕಚ್ಚಲು ಅವನತ್ತ ಬಂದಾಗ........

ಕಳ್ಳನು ನಾಯಿಯ ಹತ್ತಿರ – ಅಲ್ಲಾ, ಇಷ್ಟೊತ್ತು ಸುಮ್ಮನಿದ್ದು ತಮಾಷೆ ನೋಡುತ್ತಿದ್ದ ನೀನು, ಉಚಿತವಾಗಿ ಬಿಸ್ಕತ್ತನ್ನು ಕೊಟ್ಟಾಗ ಯಾಕೆ ಬೊಗಳಿ, ಕಚ್ಚಲು ಬಂದೆ ಎಂದು ಕೇಳಿದಾಗ...

ನಾಯಿ – ನೀನು ಸುಮ್ಮನಿದ್ದಾಗ, ನೀನು ಈ ಮನೆಯವರಿಗೆ ಸ್ವಂತದವರಿರಬೇಕು, ಏನೋ ಸಹಾಯ ಕೇಳಲೋ ಅಥವಾ ಸಹಾಯ ಮಾಡಲೋ ಬಂದಿದ್ದೀಯಾ ಅಂದ್ಕೊಂಡೆ. ಆದರೆ, ಯಾವಾಗ ನೀನು ಉಚಿತವಾಗಿ ಒಂದು ವಸ್ತುವನ್ನು ಕೊಟ್ಟೆಯೋ...ಆಗಲೇ ಗೊತ್ತಾಗಿ ಹೋಯಿತು, ನೀನು ಕದಿಯಲು ಬಂದಿದ್ದೀಯಾ ಅಂತ...!

ಇದನ್ನು ಯಾರಿಗೂ ಉದ್ದೇಶಿಸಿ ಹೇಳಿಲ್ಲ, ಆದರೆ... ಇದು ಯೋಚಿಸಬೇಕಾದ ವಿಷಯವೆ ಅಲ್ಲವೇ....?

" ಇದು ಎಂಥಾ ಕಾಲವಯ್ಯಾ.....!"

ಹೆಂಡತಿಯು ನುಲಿಯುತ್ತ ಬಂದು ಗಂಡನ ಹತ್ತಿರ – ರೀ, ಆನ್ ಲೈನ್ ಬುಕ್ ಮಾಡೋಣವೇನ್ರೀ? ಎಂದು ಕೇಳಿದಾಗ, ಗಂಡನು – ಏನೇ ಅದು ಬೆಳಗಾಗೆದ್ದು ಹೊಸ ವರಾತ ಶುರು ಮಾಡಿದ್ದೀಯಾ? ಎಂದಾಗ ಹೆಂಡತಿಯು – ಅದೇನಿಲ್ರೀ, ಚದುರಡಿಗೆ ಇಪ್ಪತ್ತು ರೂಪಾಯಿಯಂತೆ, ಇಡೀ ಧನುರ್ಮಾಸದಲ್ಲಿ ಬೆಳಿಗ್ಗೆ ಐದು ಗಂಟೆಗೆ ಬಂದು, ಮನೆ ಮುಂದೆ ಸಾರಿಸಿ ದಿನಾ ಬಗೆ ಬಗೆಯ ರಂಗೋಲಿ

ಹಾಕಿಬಿಟ್ಟು ಹೋಗ್ತಾರಂತೆ....! ಅಡ್ವಾನ್ಸ್ ಅಂತ ಈಗ ಇನ್ನೂರು ರೂಪಾಯಿ ಕೊಟ್ಟರೆ ಸಾಕಂತೆ ....ಗಂಡ ತನ್ನ ತಾಯಿ ಬೆಳಿಗ್ಗೆ ಐದಕ್ಕೆ ಎದ್ದು ರಂಗೋಲಿ ಹಾಕುತ್ತಿದ್ದನ್ನು ನೆನೆಸಿಕೊಳ್ಳುತ್ತಾ....ಆಹಾ ಎಂಥಾ ಕಾಲ ಬಂತಪ್ಪ ಅಂತ ಅಂದ್ಕೊಳ್ಳುತ್ತಾ, ಸರಿ ಕಣೆ ನಿನ್ನಿಷ್ಟ ಎಂದು ಮನಸ್ಸಿನಲ್ಲೇ ಗೊಣಗಿಕೊಂಡನು...!

" ಸ್ವಲ್ಪ ತಳ್ಳಾ ಸಾರ್...! "

ಒಬ್ಬ ರಸ್ತೆ ಮಧ್ಯೆ ನಿಂತು ತನ್ನ ಕಿವಿಯೊಳಗೆ ಒಂದು ಬೀಗದ ಕೈಯನ್ನು ಹಾಕಿ ತಿರುಗಿಸಿ, ತಿರುಗಿಸಿ ಕೊಳೆ ತೆಗೆದು ಕೊಳ್ಳುತ್ತಿದ್ದನು. ಅದನ್ನು ಗಮನಿಸುತ್ತಿದ್ದ ಗುಂಡ ಅವನ ಹತ್ತಿರ ಬಂದು – ಸಾರ್, ನಾನು ನೋಡ್ತಾನೆ ಇದ್ದೀನಿ, ನಿಮ್ಮ ಗಾಡಿ ಸ್ಟಾರ್ಟ್ ಆಗ್ತಾಯಿಲ್ಲ. ಸ್ವಲ್ಪ ನಿಮ್ಮನ್ನು ತಳ್ಳಿನೋಡಲಾ, ಸ್ಟಾರ್ಟ್ ಆಗ್ತೀರಾ ಎಂದಾಗ, ಅವನು ಕಣ್ ಕಣ್ ಬಿಟ್ಟು ಅವನತ್ತ ನೋಡಿದ...!

" ಕರ್ಮಕ್ಕೆ ತಕ್ಕ ಫಲ ..! "

ರಾಮ,ಶ್ಯಾಮ,ಸೋಮ ಚಿಕ್ಕಂದಿನಿಂದಲೂ ಗಳಸ್ಯ ಕಂಠಸ್ಯ. ಒಟ್ಟಿಗೆ ಕಲಿತು, ಒಟ್ಟೊಟ್ಟಿಗೆ ಡುಂಕಿ ಹೊಡೆಯುತ್ತಾ, ಹೇಗೋ ಕಾಲೇಜು ಸಹ ಮುಗಿಸಿ, ನಂತರ ರಾಜಕೀಯಕ್ಕೆ ಸೇರಿ, ಸಮಾಜ ಸೇವೆಗಿಂತ ಮಾಡಬಾರದ ಕೆಲಸಗಳನ್ನು ಜಾಸ್ತಿ ಮಾಡಿ, ಸಾರ್ವಜನಿಕರಿಂದ ಕೆಟ್ಟ ಹೆಸರು ಪಡೆದರೂ ಚಿಂತಿಸದೆ, ಧೂಮ್ ದಾಮ್ ಜೀವನ ಮಾಡಿ, ಕೊನೆಗೆ ಒಂದು ರಾಜಕೀಯ ಸಮಾರಂಭ ಮುಗಿಸಿಕೊಂಡು ಒಟ್ಟಿಗೆ ಬರುತ್ತಿದ್ದಾಗ, ಕರ್ಮಫಲಕ್ಕನುಗುಣವಾಗಿ ಭೀಕರ ಅಪಘಾತದಲ್ಲಿ ಮೂವರು ಸಹ ಒಟ್ಟಿಗೆ ಸತ್ತು, ,ನೇರವಾಗಿ ನರಕಕ್ಕೆ ಹೋಗುತ್ತಾರೆ.

ಅಲ್ಲಿ ಆ ಮೂವರನ್ನು ಚಿತ್ರಗುಪ್ತನ ಬಳಿ ಬಿಟ್ಟು, ಅವರ ಕರ್ಮಕ್ಕನುಗುಣವಾಗಿ ಅವರಿಗೆ ಶಿಕ್ಷೆ ಕೊಡುವ ಕಾರ್ಯಕ್ರಮವಿತ್ತು. ಮೊದಲು ರಾಮನಿಗೆ– ಹಲವಾರು ವರ್ಷಗಳಿಂದ ಸ್ನಾನವನ್ನು ಸಹ ಮಾಡದೆ ಕೊಳಕಾದ ಒಬ್ಬಳು ಮಹಿಳೆಯನ್ನು ತೋರಿಸಿ, ಹೋಗು ಇವಳ ಜೊತೆಗೆ ಸಂಸಾರ ಮಾಡು ಎಂದು ಹೇಳಿದರು. ಒಲ್ಲದ ಮನಸ್ಸಿನಿಂದ ತಲೆಯಾಡಿಸಿದನು.

ನಂತರ, ಶ್ಯಾಮನಿಗೆ – ವರ್ಷಗಳಿಂದ ಹಲ್ಲನ್ನು ಸಹ ಉಜ್ಜದೆ, ದುರ್ನಾತ ಬೀರುತ್ತಿರುವ ಇನ್ನೊಂದು ಮಹಿಳೆಯನ್ನು ತೋರಿಸಿ, ಇವಳ ಜೊತೆಗೆ ಸಂಸಾರ ಮಾಡು ಎಂದು ಹೇಳಿದರು. ಅವನು ಸಹ ಮುಖ ಕಿವಿಚಿಕೊಂಡು ಹೂಂ ಗುಟ್ಟಿದನು.

ಸೋಮನನ್ನು ಕರೆದು, ಶ್ರಧ್ಧಾ ಶ್ರೀನಾಥ್ ತರಹ ಸುಂದರವಾಗಿದ್ದು, ಲಕಲಕ ಹೊಳೆಯುವ ಹೆಂಗಸನ್ನು ತೋರಿಸಿ, ಇವಳ ಜೊತೆಗೆ ಸಂಸಾರ ಮಾಡು ಎಂದಾಗ, ಸೋಮ ಆನಂದದಿಂದ ಅವಳ ಜೊತೆ ಹೋದದನ್ನು ಕಂಡು, ರಾಮ, ಶ್ಯಾಮರು, ಅವನ ಅದೃಷ್ಟವನ್ನು ಕಂಡು ಕರುಬಿ, ಕೋಪದಿಂದ ಚಿತ್ರಗುಪ್ತನ ಹತ್ತಿರ – ನಾವು ಮೂವರು ಒಟ್ಟೊಟ್ಟಿಗೆ ಇದ್ದು, ಸಮಾನವಾದ ಕೆಟ್ಟ ಕೆಲಸಗಳು ಸಹ ಒಟ್ಟಿಗೆ ಮಾಡಿದ್ದರೂ, ನಮ್ಮಿಬ್ಬರಿಗೆ ಮಾತ್ರ, ಕೊಳಕಾದ ಹೆಂಗಸಿನ ಜೊತೆಗೆ ಇರು ಎಂದಿರಿ. ಆದರೆ, ಸೋಮನಿಗೆ ಮಾತ್ರ ಸುಂದರವಾದ ಹೆಂಗಸನ್ನು ತೋರಿಸಿ ಅವಳ ಜೊತೆಗೆ ಇರು ಎಂದಿರಿ. ಈ ತಾರತಮ್ಯ ನಮ್ಮನಮ್ಮಲ್ಲೇ ಯಾಕೆ ತೋರಿಸಿದಿರಿ ? ಎಂದು ಕೇಳಿದಾಗ, ಚಿತ್ರಗುಪ್ತರು ನಕ್ಕು – ಇಲ್ಲಿ ಶಿಕ್ಷೆ ಅವನಿಗಲ್ಲಾ, ಆ ಹೆಂಗಸಿಗೆ ಶಿಕ್ಷೆ ಎಂದಾಗ, ಅವರಿಬ್ಬರೂ ನಸುನಕ್ಕು ಹೌದಾ ಎಂದು ಹೇಳಿ ಸುಮ್ಮನಾದರು.

" ವಿಪರ್ಯಾಸ..... ಆದರೂ ಕಹಿಸತ್ಯ"

ಒಂದು ಹೋಟೆಲ್ ಮುಂದೆ ಇಲ್ಲಿ ಎಲ್ಲವೂ ಉಚಿತ, ಆದರೆ... ಸ್ವಲ್ಪ ವಾಂತಿ, ಭೇದಿ ಆಗಬಹುದು ಎಂದು ಬರೆದಿತ್ತು. ಆದ್ದರಿಂದ ಯಾರೂ ತಿನ್ನುವುದಕ್ಕೆ ಅಲ್ಲಿಗೆ ಬರಲಿಲ್ಲ.

ಒಂದು ಬಸ್ಸಿನ ಮುಂದೆ ಇಲ್ಲಿ ಎಲ್ಲಿಗಾದರೂ ಪ್ರಯಾಣವು ಉಚಿತ, ಎಲ್ಲಿಗೆ ಬೇಕಾದರೂ ಹೋಗಬಹುದು, ಆದರೆ... ಆಗಾಗ್ಗೆ ಬ್ರೇಕ್ ಫೇಲ್ಯೂರ್ ಆಗ್ತಾಯಿರುತ್ತೆ ಅಷ್ಟೇ ಎಂದು ಬರೆದಿತ್ತು. ಆದ್ದರಿಂದ, ಯಾರೂ ಸಹ ಪ್ರಯಾಣಿಕರು ಆ ಬಸ್ ಏರಲಿಲ್ಲ.

ಒಂದು ಮೆಡಿಕಲ್ ಷಾಪಿನ ಮುಂದೆ ಇಲ್ಲಿ ಎಲ್ಲಾ ರೋಗಗಳಿಗೂ ಉಚಿತ ಚಿಕಿತ್ಸೆ ಇರುತ್ತೆ.ಆದರೆ... ನಿಮ್ಮ ಪ್ರಾಣಕ್ಕೆ ನಾವು ಜವಾಬ್ದಾರಿಯಲ್ಲ ಎಂದು ಬರೆದಿತ್ತು. ಆದ್ದರಿಂದ ಕಡು ಬಡವನು ಸಹ ಚಿಕಿತ್ಸೆಗೆ ಬರಲಿಲ್ಲ.


ಆ

ದ

ರೆ.

"ಸಾರಾಯಿಯ ಸಹವಾಸ – ಹೆಂಡತಿ ಮಕ್ಕಳ ಉಪವಾಸ", " ಕುಡಿತದಿಂದ ಪ್ರಾಣಕ್ಕೆ ಹಾನಿಕರ " ... ಎಂದೆಲ್ಲಾ ಬರೆದಿದ್ದರೂ ಸಹ, ಇಡೀ ದೇಶದಲ್ಲಿ ಒಂದು ದಿನಕ್ಕೆ 800 ಕೋಟಿಗೂ ಮೀರಿದಂತೆ ಸಾರಾಯಿಯ ವ್ಯಾಪಾರ ವಹಿವಾಟು ಆಗುವುದಂತೆ...!

■



## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

● ದಂನಆ

- ✓ ದೇವರ ಮೂರ್ತಿಯ ಮುಂದೆ ನಿಂತು ಕಷ್ಟಗಳು ಬಾರದಂತೆ ಮಾಡು ದೇವರೆ ಎಂದೆ. ಮೂರ್ತಿ ಮುಗುಳ್ನಗುತ್ತಾ ಹೇಳಿತು: 'ನಾ ಉಳಿಯ ಏಟು ಪಡೆಯದಿದ್ದರೆ ನೀನು ಕೈ ಮುಗಿಯತ್ತಿರಲಿಲ್ಲ.'
- ✓ ಮತ್ತೊಮ್ಮೆ ಪ್ರಾರಂಭಿಸಲು ಹಿಂಜರಿಯದಿರಿ. ಈಗ ನೀವು ಓಂಪ್ರಥಮದಿಂದ ಶುರು ಮಾಡುವುದಿಲ್ಲ. ಅನುಭವದಿಂದ ಶುರು ಮಾಡುತ್ತೀರಿ.
- ✓ ನೀವು ಬರೆಯುವುದನ್ನು ಕಲಿಯುವುದು ಬರೆಯುವದರಿಂದ.
- ✓ ಅವರ ಟೀವಿ ಪುಸ್ತಕ ಕಪಾಟಿಗಿಂತ ದೊಡ್ಡದಿದ್ದರೆ ಅವರೊಡನೆ ವಾದಕ್ಕಿಳಿಯದಿರಿ.
- ✓ ಯು ಕೆನ್ ಬಿ ಕಂಫರ್ಟಬಲಿ ಮಿಸರಬಲ್.
- ✓ ನನಗೆ ಹೊಂದಿಕೊಳ್ಳವಂತಹ ಡಯೆಟ್ ಪ್ಲಾನ್ ನನಗೆ ಸಿಕ್ಕಿದೆ. ಅದು ಪದಾರ್ಥಗಳ ಬೆಲೆ ಪಟ್ಟಿ.
- ✓ ಪ್ರತಿ ದಿನ ನಿರೀಕ್ಷೆಗಳಿಂದ ಪ್ರಾರಂಭವಾಗುತ್ತದೆ. ಆದರೆ ಅನುಭವದಿಂದ ಮುಗಿಯುತ್ತದೆ. ಅದೇ ಬದುಕು.
- ✓ ನೊ ಒನ್ ರೂಲ್ಸ್ ಇಫ್ ನೊ ಒನ್ ಒಬೇಸ್.
- ✓ ಇಂದಿನ ಸೊಗಸು ಏನು ಗೊತ್ತೆ? ಅದು ನಿನ್ನೆಯಗಿಂತ ಚೆನ್ನಾಗಿರುವಂತೆ ಮಾಡಲು ಒಂದು ಅವಕಾಶ ನಿಮಗೆ ನೀಡುತ್ತದೆ.
- ✓ ಬೋಧನೆಯನ್ನು ಸದಾ ಮಾಡುತ್ತಲೇ ಇರಿ. ಬೇಕಾದಾಗ ಮಾತ್ರ ಪದಗಳನ್ನು ಬಳಿ.
- ✓ ಈಟ್ ಡ್ರಿಂಕ್ ಅಂಡ್ ಎಂಜಾಯ್. ಬಿಕಾಸ್ ಟುಮಾರೊ ಯು ಮೆ ಹ್ಯಾವ್ ಟು ಡಯಟ್.
- ✓ ಬಾಳುವುದಾದರೆ ಸಮುದ್ರದಂತೆ ಬಾಳಿರಿ. ಬೇಕಾದವರು ಬಂದು ಸೇರಿಕೊಳ್ಳುತ್ತಾರೆ.
- ✓ ನಿನ್ನ ಹಿಂದೆ ಮಾತನಾಡುವವರು ಬಹಳ ಮಂದಿ ಇರುತ್ತಾರೆ. ಅಂತಹವರಿಗೆ ಮಾತನಾಡಲು ಒಳ್ಳೆ ಟಾಪಿಕ್ ಕೊಡು.
- ✓ ಕೊಡೆ ಹಿಡಿದರೆ ಮಳೆ ನಿಲ್ಲದು. ಆದರೆ..
- ✓ ಅಡಚಣೆಗಳು ನಿಮಗೆ ಖಂಡಿತ ಸಿಗುತ್ತವೆ, ನೀವು ಹುಡುಕಲು ಹೊರಟರೆ.

■

# ಕಳೆದೋಯ್ತ್ ಅಂತ ಕುಣಿದಾಡ್ತೀನಿ.....!

ಸುಮಾ ರಮೇಶ್, ಹಾಸನ.

ಎಲ್ಲರೂ ಜೀವನದಲ್ಲಿ ಒಮ್ಮೆಯಾದರೂ ಏನನ್ನಾದರೂ ಕಳೆದುಕೊಂಡಿರುತ್ತೇವೆ, ಇಲ್ಲವೇ ಖುದ್ದು ನಾವೇ ಕಳೆದುಹೋಗಿರುತ್ತೇವೆ. ಭೌತಿಕವಾಗಿ, ಮಾನಸಿಕವಾಗಿ, ನಶೆಯೊಳಗೆ, ನಿಶೆಯೊಳಗೆ ಹೀಗೆ.....ಶರಪಂಜರ ಚಿತ್ರದಲ್ಲಿ ನಟಿ ಕಲ್ಪನಾ ಸಮುದ್ರ ತೀರದಲ್ಲಿ ಕಳೆದುಕೊಂಡಿದ್ದರ ಬಗ್ಗೆ ಪರಿತಪಿಸುವಾಗ ಆಗಿನ್ನೂ ಬಹಳ ಚಿಕ್ಕವರಿದ್ದ ನಾವು ಅದೇನೆಂದು ತಿಳಿಯದೆ ಗೊಂದಲಕ್ಕೆ ಬಿದ್ದಿದ್ದೆವು. ಹಿರಿಯರಾರೂ ನಮ್ಮ ಡೌಟ್ ಕ್ಲಿಯರ್ ಮಾಡುವೆಡೆಗೆ ಆಸಕ್ತಿ ತೋರದಿದ್ದಾಗ ನಾವು ಓರಗೆಯವರೆಲ್ಲಾ ಕುಳಿತು ಚರ್ಚಿಸಿ ಸೋತಿದ್ದೆವು.

ಇಂದಿನ ಮಂದಿ ಕಳೆದುಕೊಂಡರೂ ಖುಷಿ ಪಡುವ ಏಕೈಕ ವಿಷಯ ಎಂದರೆ ದೇಹದ ತೂಕ. ಮೈಕೈ ತುಂಬಿಕೊಂಡಿರುವುದೇ ಸೌಂದರ್ಯ ಎಂಬ ಹಿರಿಯರ ಅಭಿರುಚಿ ಪರಿಷ್ಕರಣೆಗೊಂಡು ಜೀರೋ ಫಿಗರ್ ಎಂಬ ನಯಾ ಸೌಂದರ್ಯದ ಪರಿಕಲ್ಪನೆಗೆ ಆಧುನಿಕ ಪ್ರಪಂಚ ನಿಧಾನವಾಗಿ ತೆರೆದುಕೊಂಡಂತೆ ನೆಣ ಕಳೆದುಕೊಳ್ಳುವ ಪ್ರಕ್ರಿಯೆಗಾಗಿ ಸಾಕಷ್ಟು ಹಣ, ಶ್ರಮ, ಸಮಯ ಎಲ್ಲಾ ಮೀಸಲಾಯ್ತು. ಇಂದಿನ ಕ್ಯಾಟ್ ವಾಕ್ ಸುಂದರಿಯರನ್ನು ಕಂಡಾಗ ಕೆಲವು ವೃದ್ಧರು ಕಳೆದುಹೋದ ತಮ್ಮ ಯೌವನವನ್ನು ನೆನೆದು ನಿಟ್ಟುಸಿರಾಗುವರು. ಯಯಾತಿಯಂತೆ  ಯೌವನವನ್ನು ಹಿಂಪಡೆಯುವ ಬಯಕೆ ಅವರಿಗಿದ್ದರೂ ಎರವಲು ಕೊಡುವ ಪುರೂರವರಿಲ್ಲ !

ನಮ್ಮ ಮನೆ ನಿರ್ಮಾಣ ಹಂತದಲ್ಲಿದ್ದಾಗ ಹೀಗೇ ಒಮ್ಮೆ....ಬಿಲ್ಡಿಂಗ್ ಕಡೆ ಹೋದಾಗ ಕೆಲಸಗಾರರೆಲ್ಲಾ ಒಂದೆಡೆ ಗುಂಪು ಕಟ್ಟಿ ಬಿರುಸಿನ ಚರ್ಚೆಯಲ್ಲಿದ್ದರು. ಕಾರ್ಮಿಕರ ಮುಷ್ಕರ, ಘೇರಾವ್ ಬಗ್ಗೆ ಕೇಳಿದ್ದ ನಾನು ದಿಗಿಲುಗೊಂಡೆ. ಭೂಮಿ ಪೂಜೆ ಮುಗಿದು ಒಂದೂವರೆ ವರ್ಷವಾಗಿದ್ದರೂ ಮನೆ ಇನ್ನೂ ಪ್ಲಾಸ್ಟಿಂಗ್ ಹಂತವನ್ನೂ ತಲುಪಿರಲಿಲ್ಲ. ಬ್ಯಾಂಕ್ ಲೋನ್ ನ ಬಡ್ಡಿ ಬೇರೆ ಬೆಳೆಯುತ್ತಿತ್ತು. ಇವರದ್ದು ಮತ್ಯಾವ ಗೋಳಪ್ಪಾ ಎಂದು ಹೆದರುತ್ತಲೇ ಆ ಹಾಟ್ ಸ್ಪಾಟ್ ಏರಿಯಾಗೆ ರೀಚ್ ಆದೆ. ಹೆಣ್ಣಾಳು ಚಂದ್ರಮ್ಮ ತನ್ನ ಛತ್ರಿ ಕಳೆದುಕೊಂಡು ಬಿಲ್ಡಿಂಗ್ ಒಳಗೇ ಇರಬಹುದಾದ ಕಳ್ಳನಿಗಾಗಿ ಬೈಗುಳಗಳ ಖೆಡ್ಡಾ ತೋಡುತ್ತಿದ್ದಳು.

ಎಲ್ಲರೂ ತಾವು ತಪ್ಪಿತಸ್ಥರಲ್ಲವೆಂದು ಲಯಬದ್ಧವಾಗಿ ಕೈ ಬಾಯಿ ತಿರುವುತ್ತಾ ವಾದಿಸುತ್ತಿದ್ದರು. ಎರಡೂ ಬಣದವರು ನನ್ನ ಬಳಿ ಬಂದು ತಮ್ಮ ಆರೋಪ ಪ್ರತ್ಯಾರೋಪಗಳ ಪಟ್ಟಿಯನ್ನು ತೆರೆದಿಟ್ಟರು. ಅಲ್ಲಿದ್ದ ಏಕೈಕ ಐ ವಿಟ್ ನೆಸ್ ಎಂದರೆ ಚಂದ್ರಮ್ಮ. ಇನ್ನುಳಿದಂತೆ ಅವಳ ಛತ್ರಿಯನ್ನು ಕಂಡವರಿರಲಿಲ್ಲ. ಇಲ್ಲಿ ವಾದಿ (plaintiff) ಯನ್ನು ಸಾಕ್ಷಿಯಾಗಿ ಪರಿಗಣಿಸುವಂತಿರಲಿಲ್ಲ. ಚಂದ್ರಮ್ಮನ ಏಕವ್ಯಕ್ತಿ ಸೈನ್ಯದ ಮುಂದೆ ಉಳಿದವರು  ತತ್ತರಿಸುತ್ತಿದ್ದರು. ತೀರ್ಪು ನೀಡಲು ತಿಳಿಯದೆ ತಿಣುಕುತ್ತಿದ್ದ ನನ್ನನ್ನು ಕಂಡು ಚಂದ್ರಮ್ಮ ಅಯ್ನೋರ ಬಳಿ ಹೋಗಿ ಅಷ್ಟಮಂಗಲ ಪ್ರಶ್ನೆ ಹಾಕಿ ಕಳ್ಳನಿಗೆ ವಾಂತಿ ಬೇಧಿಯ ಬೇನೆ ಬರಿಸುವುದಾಗಿ ಶಪತಗೈಯ್ದಳು. ಈಗಾಗಲೇ ಅರ್ಧ ದಿನದ ಕೆಲಸ ವಾದದಲ್ಲೇ ವ್ಯರ್ಥವಾಗಿತ್ತು. ಇನ್ನು ಶಿಕ್ಷೆಯ ಮಂತ್ರ ಎಡವಟ್ಟಾಗಿ ಕೆಲಸಗಾರರೆಲ್ಲಾ ಕಾರಿಕೊಂಡರೆ ಬಿಲ್ಡಿಂಗ್ ಗತಿಯೇನೆಂದು ನೆನೆದು ಬೆಚ್ಚಿದೆ. ಚಂದ್ರಮ್ಮನಿಗೆ ನಾನೇ ಹೊಸ ಛತ್ರಿ ಕೊಡಿಸುವುದಾಗಿ ಭರವಸೆ ಇತ್ತ

ನಂತರ ಅವಳ ಭೋರ್ಗರೆತದ ವೇಗ ಇಳಿಯುತ್ತಾ ಸಂಜೆ ಹೊತ್ತಿಗೆ ತಂಪಾಯ್ತು.

ಹಿಂದೆ ಮಕ್ಕಳನ್ನು ಅಪಹರಿಸುವ ಒಂದು ಜಾಲದ ಬಗ್ಗೆ ಸುದ್ದಿ ಹಬ್ಬಿತ್ತು. ಈ ಸಂಬಂಧ ಅಪರಿಚಿತರು ಏನಾದರೂ ಕೊಟ್ಟರೆ ತಿನ್ನಕೂಡದೆಂದು ನಮ್ಮ ಹಿರಿಯರು ನಮಗೆ ಕಟ್ಟಪ್ಪಣೆ ಮಾಡಿದ್ದರು. ನಾವುಗಳು ಗುಂಪಾಗಿ ಶಾಲೆಗೆ ಹೋಗುವಾಗ ಪಾಸ್ ಆಗುವ ಪ್ರತೀ ವ್ಯಕ್ತಿಯನ್ನೂ ಗುಮಾನಿಯಿಂದಲೇ ನೋಡುತ್ತಾ ಸಾಗುತ್ತಿದ್ದೆವು. ಕಳೆದು ಹೋದವರ ಬಗ್ಗೆ ಪ್ರಕಟಣೆ ಎಂಬ ಒಂದು ಕಾರ್ಯಕ್ರಮವೇ ರೇಡಿಯೋದಲ್ಲಿ ಬರುತ್ತಿತ್ತು. ಕಿಡ್ ನ್ಯಾಪ್ ಆದವರ, ಅಬ್ ಸ್ಕಾಂಡ್ ಆದವರ, ಚಹರೆಗಳ ಬಗ್ಗೆ ಅದರಲ್ಲಿ ಮಾಹಿತಿ ನೀಡುತ್ತಿದ್ದರು. ಒಮ್ಮೆ ಆ ಲಿಸ್ಟ್‌ನಲ್ಲಿ ಬರಬೇಕಾಗಿದ್ದ ನನ್ನ ಹೆಸರು ಜಸ್ಟ್ ಮಿಸ್ ಆಯ್ತು ನೋಡಿ.

ನಾನಾಗ ಸುಮಾರು ನಾಲ್ಕೈದು ವರ್ಷದ ಕೂಸು. ಫೀಲ್ಡ್‌ಗೆ ಆಟಕ್ಕೆಂದು ಸೇರುತ್ತಿದ್ದ ಗುಂಪಿನಲ್ಲಿ ನಾನೇ ಜೂನಿಯರ್. ಒಮ್ಮೆ ಮನೆ ಆಟಕ್ಕೆ ಬೇಕಾದ ಪರಿಕರಗಳನ್ನು ಹುಡುಕಿ ತರುವುದಾಗಿ ಹೇಳಿ ಎಲ್ಲರೂ ನನ್ನೊಬ್ಬಳನ್ನೇ ಫೀಲ್ಡ್ ನಲ್ಲಿ ಬಿಟ್ಟು ಹೋದರು. ಅವರಿಗಾಗಿ ಕಾದು ಸುಸ್ತಾಗಿ ಕೊನೆಗೆ ಅವರನ್ನೆಲ್ಲಾ ಹುಡುಕುತ್ತಾ ಹೊರಟೆ. ಅಪರಿಚಿತ ರಸ್ತೆಯಲ್ಲಿ ಸಾಗಿದಂತೆ ಮನೆಯ ರಸ್ತೆ ತಿಳಿಯದಾಯಿತು. ಮನದಲ್ಲಿ ರೆಡ್ ಅಲರ್ಟ್ ಮೊಳಗತೊಡಗಿದಾಗ ಅಳುತ್ತಲೇ ಮುಂದೆ ಸಾಗಿದೆ. ಅದಾಗಲೇ ಮುಸ್ಸಂಜೆಯಾಗಿತ್ತು. ಯಾವುದೋ ಮನೆಯ ಮುಂದೆ ಕುಳಿತಿದ್ದ ಒಂದು ಕುಟುಂಬದವರು ಅಳುತ್ತಿದ್ದ ನನ್ನನ್ನು ಕರೆದು ನನ್ನ ಪೂರ್ವಾಪರವನ್ನೆಲ್ಲಾ ವಿಚಾರಿಸಿದರು. ನಾನು ಅಳುತ್ತಲೇ ನನಗೆ ತಿಳಿದಷ್ಟು ಮಾಹಿತಿ ನೀಡಿದೆ. ಆಗ ಹತ್ತು ಪೈಸೆ ಕಾಯಿನ್ ಶೇಪ್ ನಲ್ಲಿ ಸಾಲ್ಟ್ ಬಿಸ್ಕೆಟ್ಸ್ ಬರ್ತಾ ಇತ್ತು. ನನಗೆ ಬಹಳ ಪ್ರಿಯವಾದ ಅದನ್ನು ಒಂದು ಬಟ್ಟಲಿನಲ್ಲಿರಿಸಿ ಕೊಟ್ಟರು. ನಾನು ನೀಡಿದ್ದ ಅಪೂರ್ಣ ಬಯೋಡಾಟಾ ಹಿಡಿದು ಅವರು ನನ್ನ ಪೂರ್ವೋತ್ತರ ಪತ್ತೆ ಮಾಡಲು ತಿಣುಕುತ್ತಿದ್ದರೆ ನನ್ನ ನಾಲಿಗೆಗೆ ಸಾಲ್ಟ್ ಬಿಸ್ಕೆಟ್ಟಿನ ರುಚಿ ಹತ್ತಿ ಮನೆಯವರೆಲ್ಲಾ ಮರೆತೇ ಹೋಗಿದ್ದರು. ಈ ಹೊಸ ಮಂದಿ ತಮ್ಮತಮ್ಮಲ್ಲೇ ಏನೋ ಡಿಸ್ಕಸ್ ಮಾಡಿ ಕೊನೆಗೆ ನನ್ನನ್ನು ಅವರೊಡನೆ ಹೊರಗೆ ಕರೆದೊಯ್ದರು. ನಾನು ನನ್ನ ಮಿನಿ ಫ್ರಾಕ್ ಜೇಬಿಗೆ ಬಿಸ್ಕೆಟ್ಸ್ ತುಂಬಿಕೊಂಡು ಅವರೊಂದಿಗೆ ಖುಷಿಯಿಂದಲೇ ಹೊರಟೆ. ಮಾರ್ಗ ಮಧ್ಯದಲ್ಲಿ ನನ್ನನ್ನೇ ಹುಡುಕುತ್ತಾ ಬರುತ್ತಿದ್ದ ನಮ್ಮ ಮನೆಯವರು, ಆಟದ ಪರಿಕರ ತರಲು ಹೋಗಿದ್ದ ಪ್ಲೇ ಮೇಟ್ಸ್, ಸಾಲ್ಟ್ ಬಿಸ್ಕೆಟ್ಸ್ ನೀಡಿದ ಸ್ಟ್ರೇಂಜರ್ಸ್ ಎಲ್ಲಾ ಒಟ್ಟಿಗೇ ಮುಖಾಮುಖಿಯಾದರು. ಹೊಸಬರೊಂದಿಗೆ ಆರಾಮವಾಗಿದ್ದ ನನ್ನನ್ನು ಕಂಡು ಮನೆಯವರು ಕೆರಳಿದರು. ಮನೆಗೆ ಕರೆ ತಂದು "ಕಳೆದು ಹೋಗಿದ್ದಲ್ಲದೆ ಯಾರ್ಯಾರೋ ಕೊಡಿಸುವ ತಿಂಡಿ ಬೇರೇ ತಿನ್ತೀಯಾ...." ಎನ್ನುತ್ತಾ ಚೆನ್ನಾಗಿ ಬಿಸಿ ಕಾಯಿಸಿದರು. ಸಾಲ್ಟ್ ಬಿಸ್ಕೆಟ್ ತಿಂದು ಮುಗಿಸುವ ಮೊದಲೇ ಇವರೆಲ್ಲಾ ಸಿಕ್ಕ ಬಗ್ಗೆ ನನಗೆ ಬಹಳ ಬೇಸರವಾಗಿತ್ತು.

ಮತ್ತೊಂದು ಪ್ರಕರಣ. ಒಮ್ಮೆ ಬೇಸಿಗೆ ರಜೆಗೆಂದು ಎದುರು ಮನೆಗೆ ಅವರ ಮಗಳ ಕುಟುಂಬ ಬಂದಿಳಿಯಿತು. ಅವರ ನಾಲ್ಕು ವರ್ಷದ ಕೂಸು ರಾಹುಲ್ ಬೀದಿಯವರಿಗೆಲ್ಲಾ ಅಚ್ಚುಮೆಚ್ಚು. ಯಾರದೋ ಮನೇಲಿ ಊಟ.... ಮತ್ತಾರದೋ ಮನೇಲಿ ನಿದ್ರೆ .... ಹೀಗೆ ಎಲ್ಲರ ಕಣ್ಮಣಿಯಾಗಿತ್ತು. ಒಮ್ಮೆ ಸಂಜೆಯಾದರೂ ಆ ಬೀದಿ ಪುಟ್ಟ ಎಲ್ಲೂ ಕಾಣದಾದಾಗ ಅವರ ಮನೆಯವರು ಕಂಗಾಲಾದರು. ಗಾಬರಿಜನ್ಯ ವಾತಾವರಣ ಸೃಷ್ಟಿಯಾಯಿತು. ಮಗಳು ಕಣ್ಣೀರಾದರೆ ಆಗಷ್ಟೇ ಮಗನನ್ನು

ಕಾಣಲು ಕಾತುರನಾಗಿ ಬಂದಿದ್ದ ಅಳಿಯ ಎಲ್ಲರ ಮೇಲೂ ಹರಿಹಾಯ್ದ. ಕಂಡವ್ರ ಮನೆಗೆ ಮಗೂನ ಕಳ್ಸಿ ಇಲ್ಲೇನು ತಾರಮ್ಮಯ್ಯ ಆಡ್ತಾ ಇದ್ರಾ ಎಂದು ಕೂಗಾಡಿದ. ಅತ್ತೆ ಮಾವ ತಪ್ಪಿತಸ್ಥ ಭಾವದಿಂದ ಕುಗ್ಗಿಹೋದರು. ಹರಕೆ ಕಟ್ಟಿ ಇಟ್ಟಿದ್ದಾಯ್ತು. ತಮ್ಮದೇ ಮಗುವೆಂಬಂತೆ ಪ್ರೀತಿ ತೋರುತ್ತಿದ್ದ ನೆರೆಹೊರೆಯವರು, ಸಾಂತ್ವನ ಹೇಳಲು ಬಂದವರು ಅಳಿಯನ ಮಾರಿ ನೋಡಿ ವಾತಾವರಣ ಸರಿಯಿಲ್ಲವೆಂದು ಕಳಚಿಕೊಂಡರು. ಆದರೂ ಅವರವರ ಜಗುಲಿಯ ಮೇಲೆ ಸಾಧ್ಯತೆ ಭಾದ್ಯತೆಗಳ ಕುರಿತು ಚರ್ಚೆ ಮುಂದುವರಿಯಿತು. ಪೋಲಿಸ್ ಕಂಪ್ಲೇಂಟ್ ಕೊಡುವ ನಿರ್ಧಾರದಿಂದ ಮಾವ ಅಳಿಯ ಮಗುವಿನ ಭಾವಚಿತ್ರದೊಂದಿಗೆ ಹೊರಟರು. ಜಗುಲಿಯ ಗುಂಪು ಮತ್ತೆ ಅವರ ಮನೆಗೆ ಜಮಾಯಿಸಿತು. ಮನೆಯವರ ದುಃಖಕ್ಕೆ ಮರುಗುತ್ತಾ ಅವರ ಕಣ್ಣೀರಿಗೆ ಲೊಚಗುಡುತ್ತಾ ತಿಳಿದಂತೆ ಸಮಾಧಾನ ಹೇಳಿದರು. ಕಾಫಿ ಚಹಾಗಳು ಫ್ಲಾಸ್ಕ್‌ಗಳಲ್ಲಿ ಬಂದವು. ಮಗುವಿನ ಹೆಸರನ್ನು ಕನವರಿಸುತ್ತಲೇ ಎಲ್ಲರೂ ಕಾಫಿ ಹೀರಿದರು.

ಕಂಪ್ಲೇಂಟ್ ನೀಡಿದ ಮಾವ ಅಳಿಯ ಜೋಲು ಮೋರೆಯೊಂದಿಗೆ ವಾಪಸ್ಸಾದರು. ಗುಂಪು ಚದುರಿದರೂ ಧೈರ್ಯ ವಹಿಸಿ ನಿಂತಿದ್ದ ಒಂದಿಬ್ಬರು ಅವರಿಗೂ ಕಾಫಿ ನೀಡಿ ಸಮಾಧಾನಿಸಿದರು. ಮನೆಗೆ ಹೊರಡಲು ಫ್ಲಾಸ್ಕ್ ಜೋಡಿಸುತ್ತಿದ್ದ ರಾಧಮ್ಮ "ಹೇ.... ರಾಹುಲ್.... ಅಲ್ಲಿ.....!! " ಎನ್ನುತ್ತಾ ಬೆಡ್ ರೂಮ್ ನೆಡೆಗೆ ಅಚ್ಚರಿಯಿಂದ ಕೈತೋರಿದರು. ಮುದುರಿ ಕುಳಿತಿದ್ದವರೆಲ್ಲಾ ಧಿಗ್ಗನೆದ್ದರು. ಎಲ್ಲರ ಮೈಯಲ್ಲೂ ವಿದ್ಯುತ್ ಸಂಚಾರ! ನಾಲ್ಕು ವರ್ಷದ ಪೋರ ಆಕಳಿಸುತ್ತಾ, ಕಣ್ಣುಜ್ಜುತ್ತಾ ಹೊರ ಬಂದ. ಐ ಸ್ಪೈಸ್ ಆಡುವಾಗ ಮಂಚದಡಿ ಬಚ್ಚಿಟ್ಟುಕೊಂಡಿದ್ದ ಕೂಸು ಅಲ್ಲೇ ನಿದ್ರೆ ಹೋಗಿತ್ತು ಎಂಬ ಸತ್ಯ ತಡವಾಗಿ ಅರಿವಾಯಿತು.

ಕಳೆದದ್ದರ ಬಗ್ಗೆ ದುಃಖಿಸದೆ ಸಂತಸದ ಮನಸ್ಥಿತಿಯನ್ನು ಸೃಷ್ಟಿಸುವಂತಹ ವಿಷಯಗಳ ಪಟ್ಟಿಯಲ್ಲಿ ದೇಹದ ತೂಕದೊಂದಿಗೆ ಪತ್ನಿಯರ ಹೆಸರೂ ಸೇರಿದೆ ಎಂಬುದು ಅನೇಕರಿಗೆ ತಿಳಿದಿರದ ಸತ್ಯ. ಹೆಂಡತಿಯ ಕಾಟ ಕಳೆದುಕೊಳ್ಳಲು ಉತ್ಸುಕರಾದವರ ಪಟ್ಟಿಯಲ್ಲಿ ನಮ್ಮ ಹೆಸರಾಂತ ಕವಿ ಜಿ ಪಿ ರಾಜರತ್ನಂ ಅವರೂ ಸೇರಿದ್ದರು ಎಂದು ಈ ಪದ್ಯದಿಂದ ತಿಳಿಯುವುದು ನೋಡಿ.

'ಯೆಂಡ ಬುಟ್ಟೆ, ಯೆಡ್ತೀನ್ ಬುಟ್ ಬುಡ್!' ಅಂತ್ ಔನ್ ಏನಾರ್ ಅಂದ್ರೆ–
–ಕಳದೋಯ್ತ್ ಅಂತ ಕುಣದಾಡ್ತೇನಿ ದೊಡ್ಡ್ ಒಂದ್ ಕಾಟ ! ತೊಂದ್ರೆ !

ಕಳೆದುಹೋದ ಪತ್ನಿಗಾಗಿ ವೈದೇಹಿ ಏನಾದಳೂ .... ಎಂದು ವರ್ಷಗಟ್ಟಲೆ ಹುಡುಕುವ ರಾಮನಂತಹ ಪತಿಯಂದಿರು ವಿರಳ ಬಿಡಿ. ಕಳೆದಿದ್ದರ ಬಗ್ಗೆ ಚಿಂತಿಸದೆ ಉಳಿದಿದ್ದರೊಂದಿಗೆ ವರ್ತಮಾನದಲ್ಲಿ ಬದುಕುವುದೇ ನೆಮ್ಮದಿಯ ಮೂಲಮಂತ್ರ ಎಂಬ ನಿಲುವು ಹೆಚ್ಚಿನ ಮಂದಿಯದು.

■

## ಕಾಫಿ ಎಂಬ ಸಖನ ಕುರಿತು !

ಜೋಗಿ

ಹತ್ತಾರು ವರ್ಷಗಳ ಹಿಂದೆ, ಒಂದು ಅಪರಾತ್ರಿಯಲ್ಲಿ ಪೂರ್ಣಚಂದ್ರ ತೇಜಸ್ವಿಯವರ ಮನೆಗೆ ನುಗ್ಗಿದ್ದೆ . ಮಳೆಯಲ್ಲಿ ಒದ್ದೆಮುದ್ದೆಯಾಗಿ ಥೇಟ್ ಕರಡಿಮರಿಯಂತೆ ನಿಂತಿದ್ದ ನನಗೆ ರಾಜೇಶ್ವರಿ ತೇಜಸ್ವಿಯವರು ಮೈ ಒರೆಸಲು ಬೆಚ್ಚಗಿನ ಟವಲ್ ಕೊಟ್ಟು, ನಾನು ಮೈ ಒರೆಸಿಕೊಂಡು ಚಳಿಮುಕ್ತನಾಗುವ ಹೊತ್ತಿಗೆ ಒಂದು ಗ್ಲಾಸು ಬಿಸಿಬಿಸಿ ಕಾಫಿಯನ್ನು ತಂದುಕೊಟ್ಟಿದ್ದರು. ದಪ್ಪವಾದ ಸ್ಟೀಲ್ ಗ್ಲಾಸಿನಲ್ಲಿ ನೊರೆಯುಕ್ಕಿಸುತ್ತಿದ್ದ ಬಿಸಿಬಿಸಿ ಕಾಫಿ. ನೀನು ಕುಡಿದ ಅತ್ಯುತ್ತಮ ಕಾಫಿ ಯಾವುದು ಎಂದು ಕೇಳಿದರೆ ನನಗೆ ಥಟ್ಟನೆ ನೆನಪಾಗುವುದು ರಾಜೇಶ್ವರಿ ಅಮ್ಮ ಮಾಡಿಕೊಟ್ಟ ಕಾಫಿ.

ನಮಗೆ, ದಕ್ಷಿಣ ಕನ್ನಡದ ಮಂದಿಗೆ ಕಾಫಿಯ ಕುರಿತು ಅಂತ ಮೋಹವೇನಿಲ್ಲ. ನಾವೇನಿದ್ದರೂ ಚಹಾ ಪ್ರಿಯರು . ನಮ್ಮಲ್ಲಿ ಅಷ್ಟು ಸೊಗಸಾಗಿ ಕಾಫಿ ಮಾಡುವವರೂ ಇಲ್ಲ. ನಾವು ಚಿಕ್ಕವರಿದ್ದ ಕಾಲಕ್ಕೆ ಮನೆಗಳಲ್ಲಿ ಬೆಲ್ಲದ ಕಾಫಿ ಮಾಡುತ್ತಿದ್ದರು. ಬಿಸಿನೀರಿಗೆ ಬೆಲ್ಲ ಹಾಕಿ ಚೆನ್ನಾಗಿ ಕುದಿಸಿ, ನಂತರ ಕಾಫಿ ಪುಡಿ ಒಂದೆರಡು ಚಮಚ ಹಾಕಿ, ಚೆನ್ನಾಗಿ ಕಲಕಿ ಸೋಸಿದರೆ, ಕಾಫಿ ರೆಡಿ.

ಆ ಕಾಫಿ ಪುಡಿಯೂ ಅತ್ಯುತ್ತಮ ಗುಣಮಟ್ಟದ್ದು ಅಂತ ಹೇಳಲಿಕ್ಕಾಗದು. ಅದನ್ನು ನಾವು ಅಂಗಡಿಯಿಂದ ಪೇಪರಿನಲ್ಲಿ ಕಟ್ಟಿಸಿಕೊಂಡು ಬರುತ್ತಿದ್ದೆವು. ಎಂಟಾಣೆ ಕಾಫಿಪುಡಿ ಕೊಡಿ ಅಂದರೆ ಒಂದು ಡಬ್ಬದ ಮುಚ್ಚಳ ತೆಗೆದು ಸ್ಟೀಲಿನ ದೊಡ್ಡ ಚಮಚದಲ್ಲಿ ಒಂದಷ್ಟು ಕಾಫಿಪುಡಿಯನ್ನು ಎತ್ತಿಕೊಂಡು ಅದನ್ನು ಹಳೇ ಪೇಪರಿನಲ್ಲಿ ಕಟ್ಟಿಕೊಡುತ್ತಿದ್ದರು. ನಾವು ತರುತ್ತಿದ್ದ ಕಸ್ತೂರಿ ಬಾರ್‌ಸೋಪು, ಹಮಾಮ್ ಸೋಪು, ಚಹಾಪುಡಿ, ಸಕ್ಕರೆ, ಸೀಮೆಎಣ್ಣೆ– ಇವೆಲ್ಲ ತುಂಬಿದ್ದ ಬ್ಯಾಗಲ್ಲೇ ಕಾಫಿಪುಡಿಯ ಪೊಟ್ಟಣವೂ ಇರುತ್ತಿತ್ತು. ಮನೆಗೆ ಬರುವ ಹೊತ್ತಿಗೆ ಈ ಎಲ್ಲಾ ದಿನಸಿಗಳು ತಮ್ಮ ತಮ್ಮ ಪರಿಮಳವನ್ನು ಪರಸ್ಪರ ಹಂಚಿಕೊಂಡು, ಕಾಫಿ ಪುಡಿಯ ವಿಶಿಷ್ಟ ಪರಿಮಳ ನಮಗೆ ದಕ್ಕುತ್ತಲೇ ಇರಲಿಲ್ಲ.

ಕಾಫಿಯೆಂಬುದು ಕಾಫಿಯೂ ಆಗಿರುತ್ತಿರಲಿಲ್ಲ. ಕಾಫಿಯ ರುಚಿ ಕಂಡಿದ್ದರಲ್ಲವೇ ಅದು ಕಾಫಿಯಲ್ಲ ಎಂದು ಹೇಳುವುದಕ್ಕೆ. ಆ ಕಾಲಕ್ಕೆ ಅದ್ಯಾವುದೋ ಕಂಪೆನಿಯವರು ಮನೆಯಲ್ಲಿ ನಿಮ್ಮ ಅಮ್ಮ ಮಾಡಿದ ಕಾಫಿಯಷ್ಟೇ ರುಚಿಯಾದ ಕಾಫಿ ಎಂದು ಜಾಹೀರಾತು ನೀಡುತ್ತಿದ್ದರು. ಅದನ್ನು ನಂಬಿಕೊಂಡ ನಾವು ಅಮ್ಮ ಮಾಡುತ್ತಿದ್ದ ಕಾಫಿಯೇ ಸರ್ವಶ್ರೇಷ್ಠ ಮತ್ತು ರುಚಿಕರ ಎಂದು ನಂಬಿಕೊಂಡಿದ್ದೆವು.

ನಮ್ಮೂರಿನಲ್ಲಿ ಕೆಲಸವಿಲ್ಲದೇ ಅಡ್ಡಾಡಿಕೊಂಡಿದ್ದವರನ್ನೆಲ್ಲ ಚಿಕ್ಕಮಗಳೂರು ಆಸುಪಾಸಿನ ಮಂದಿ ಬಂದು ಕೆಲಸ ಕೊಡುವುದಾಗಿ ಹೇಳಿ ಕರೆದುಕೊಂಡು ಹೋಗುತ್ತಿದ್ದ ದಿನಗಳು ಅವು. ಘಟ್ಟದ ಕೆಳಗಿನಿಂದ ಹೀಗೆ ಆಳುಗಳನ್ನು ಕರೆಸುವವರನ್ನು ರೈಟರ್ ಎಂದು ಕರೆಯುತ್ತಿದ್ದರು. ಅವರು ಕಾಫಿ ತೋಟದಲ್ಲಿ ಕಾಫಿ ಹಣ್ಣು ಕೊಯ್ಯುವುದೇ ಮುಂತಾದ ಕೆಲಸಗಳನ್ನು ಮಾಡುತ್ತಿದ್ದು, ಆ ಕೆಲಸ ಮುಗಿದ ನಂತರ ಊರಿಗೆ ಮರಳುತ್ತಿದ್ದರು. ಹಾಗೆ ಘಟ್ಟದ ಮೇಲೆ ಹೋಗಿ ಬಂದ ಅನೇಕರು ಅಲ್ಲೇ ಮದುವೆ ಕೂಡ ಮಾಡಿಕೊಂಡು ಮರಳುತ್ತಿದ್ದದ್ದೂ ಉಂಟು. ಹೆಣ್ಮಕ್ಕಳಾದರೆ ಮದುವೆ ಮಾಡಿಕೊಂಡು ತಾವು ಹೋದ ಊರಲ್ಲೇ ತಳವೂರುತ್ತಿದ್ದದ್ದೂ

ಸರ್ವೇಸಾಮಾನ್ಯ. ಅವರ ಪಾಲಿಗೆ ಕಾಫಿ ಕೊಯ್ಯುವ ಕೆಲಸ , ಬಿಡುಗಡೆಯ ದಾರಿಯೂ ಆಗಿತ್ತು. ನಮ್ಮೂರಲ್ಲಿ ಮದುವೆ ಆಗುತ್ತದೆ ಯಾವ ಭರವಸೆಯೂ ಇಲ್ಲದ , ಬೀಡಿ ಕಟ್ಟಿಕೊಂಡೋ , ಬೇರೆಯವರ ತೋಟಗಳಲ್ಲಿ , ಕೃಷಿ ಭೂಮಿಗಳಲ್ಲಿ ಕಷ್ಟಕರ ಕೆಲಸಗಳನ್ನು ಮಾಡಿಕೊಂಡೋ ಅತೀವ ನಿರಾಸೆಯಲ್ಲಿ ಬದುಕುತ್ತಿದ್ದ ಹೆಣ್ಮಕ್ಕಳಿಗೆ ಸಿಕ್ಕ ಮೊದಲ ಬಿಡುಗಡೆಯ ದಾರಿ ಅಂದರೆ ಕಾಫಿ ತೋಟದ ಕೆಲಸ. ಅಂಥ ಕಷ್ಟದ ಕೆಲಸವೇನೂ ಆಗಿರಲಿಲ್ಲ ಮತ್ತು ಚಿಕ್ಕಮಗಳೂರು , ಕೊಡಗು ಪ್ರದೇಶದ ಬಿಸಿಲು ದಕ್ಷಿಣ ಕನ್ನಡದ ಬಿಸಿಲಿನಷ್ಟು ಪ್ರಖರವಾಗಿಯೂ ಇರುತ್ತಿರಲಿಲ್ಲ. ಹೀಗಾಗಿ ಇಲ್ಲಿಂದ ಹೋದವರಿಗೆ ಆ ಊರು ಸ್ವರ್ಗಸಮಾನ ಅನ್ನಿಸುತ್ತಿತ್ತು. ಹಾಗೆ ಅಲ್ಲಿಗೆ ಹೋದವರು ಮರಳಿ ಬರುವಾಗ ಐದೋ ಹತ್ತೋ ಕೇಜಿ ಕಾಫಿ ಬೀಜ ತರುತ್ತಿದ್ದರು. ಅದನ್ನು ಕಾಫಿ ಕುಡಿಯುವ ಅಭ್ಯಾಸ ಇರುವ ಮನೆಯವರಿಗೆ ಮಾರುತ್ತಿದ್ದರು. ನಾವು ಅದನ್ನು ಕೊಂಡುಕೊಂಡು ಬಾಣಲೆಯಲ್ಲಿ ಕಪ್ಪಾಗುವಂತೆ ಹುರಿದು, ನಂತರ ಒರಳುಕಲ್ಲಲ್ಲಿ ಕುಟ್ಟಿ ಪುಡಿ ಮಾಡುತ್ತಿದ್ದೆವು. ಆಗಲೇ ನಾವು ಕಾಫಿ ಪುಡಿಗೆ ಎಂಥ ಪರಿಮಳವಿದೆ ಅನ್ನುವುದನ್ನು ಮೊದಲ ಸಲ ಕಂಡುಕೊಂಡದ್ದು ಅಂಥ ಪರಿಮಳದ ಕಾಫಿಪುಡಿಯನ್ನೂ ಅಲ್ಯುಮಿನಿಯಂ ಪಾತ್ರೆಗೆ ಹಾಕಿ, ಅದಕ್ಕೆ ಬೆಲ್ಲ ಮತ್ತು ಹಾಲು ಸುರಿದು, ಆ ಘಮ್ಮನೆ ಕಂಪನ್ನೇ ಜಲಮಾಧಿ ಮಾಡುವ ಕಲೆಯನ್ನು ಬಹುತೇಕ ಎಲ್ಲ ತಾಯಂದಿರೂ ಕಲಿತುಕೊಂಡಿದ್ದರು.

ಕಾಫಿಗೊಂದು ವಿಶಿಷ್ಟ ರುಚಿಯಿದೆ, ಕಾಫಿ ಮಾಡುವುದಕ್ಕೂ ಅದರದ್ದೇ ಆದ ಕ್ರಮವಿದೆ ಮತ್ತು ಕಾಫಿ ಮಾಡುವುದು ಕೂಡ ಒಂದು ಕಲೆ ಅನ್ನುವುದು ನಮಗೆ ಗೊತ್ತಾದದ್ದು ಮೈಸೂರಿಗೆ ಬಂದ ನಂತರವೇ. ಸರಿಯಾಗಿ ಮಾಡಿದ ಫಿಲ್ಟರ್ ಕಾಫಿಯ ಮುಂದೆ ಮಿಕ್ಕೆಲ್ಲ ಪೇಯಗಳೂ ಸಪ್ಪೆಯೇ. ಅಂಥ ಕಾಫಿಯೆಂಬುದು ಮಳೆಗಾಲಕ್ಕೆ ಬಂಧು, ಚಳಿಗಾಲಕ್ಕೆ ಸಂಗಾತಿ, ಬೇಸಗೆಗೆ ಮಿತ್ರ.

ಕಾಫಿ ಮಾಡುವುದು ಕೂಡ ಒಂದು ಕಲೆ ಅನ್ನುವುದನ್ನು ಮೊದಲು ಕಲಿಸಿಕೊಟ್ಟವರು ವೈಯನ್ಕೆ. ಅವರು ಪ್ರತಿದಿನ ಆಫೀಸಿನಿಂದ ಬರುವಾಗ ಐವತ್ತು ಗ್ರಾಮ್ ಕಾಫಿ ಪುಡಿ ಮನೆಗೆ ಒಯ್ಯುತ್ತಿದ್ದರು. ಅದನ್ನು ಅವರೇ ಮುಂದೆ ನಿಂತು ಶೇಕಡಾ 80 ಕಾಫಿ , ಶೇಕಡಾ 20 ಚಿಕೋರಿ ಬೆರೆಸಿ ಪುಡಿ ಮಾಡಿಸುತ್ತಿದ್ದರು. ಆ ಅಂಗಡಿಯ ಮುಂದೆ 'ನಿಮ್ಮ ಬೀಜಗಳನ್ನು ನಿಮ್ಮ ಕಣ್ಣೆದುರೇ ಹುರಿದು ಪುಡಿ ಮಾಡಿ ಕೊಡಲಾಗುತ್ತದೆ' ಎಂಬ ಬೋರ್ಡ್ ಇತ್ತು ಅನ್ನುವುದು ಮಾತ್ರ ಶುದ್ಧ ಸುಳ್ಳು.

ಮನೆಗೆ ಹೋದ ನಂತರ ಅದನ್ನು ಬಿಸಿನೀರಿನ ಜೊತೆ ಫಿಲ್ಟರಿಗೆ ಹಾಕಿಡುತ್ತಿದ್ದರು. ಬೆಳಗ್ಗೆ ಅದಕ್ಕೆ ಕೆನೆಭರಿತ ಸಕ್ಕರೆ ಹಾಕಿದ, ನೀರು ಹಾಕದ ಹಾಲು ಬೆರೆಸಿ ಕುಡಿಯುತ್ತಿದ್ದರು. ಕಾಫಿಯನ್ನೆಂದೂ ಒಂದು ಲೋಟದಿಂದ ಮತ್ತೊಂದು ಲೋಟಕ್ಕೆ ನಾಲ್ಕೈದು ಸಲ ಹಾಕಬಾರದು ಎನ್ನುತ್ತಿದ್ದರು. ಅವರ ಮನೆಯಲ್ಲಿ ಅವರು ಕಟ್ಟೆಚ್ಚರದಿಂದ ಕಾಯುತ್ತಿದ್ದ ಮೂರು ವಸ್ತುಗಳೆಂದರೆ ಸ್ಕಾಚ್ ವಿಸ್ಕಿ, ಫಿಲ್ಟರ್ ಕಾಫಿ ಮತ್ತು ಪುಸ್ತಕ.

ಕಾಫಿ ಹೇಗಿರಬೇಕು ಅನ್ನುವುದನ್ನು ಪೂರ್ಣಚಂದ್ರ ತೇಜಸ್ವಿ ಕೂಡ ಹೇಳಿಕೊಟ್ಟಿದ್ದರು. ಅವರ ಪ್ರಕಾರ ಕಾಫಿ ಬೀಜಗಳ ಶತ್ರುಗಳೆಂದರೆ ಗಾಳಿ – ಬೆಳಕು, ಗಾಳಿಗೆ ತೆರೆದಿಟ್ಟರೆ, ಜಾಸ್ತಿ ಬೆಳಕು ಬೀಳುವಲ್ಲಿಟ್ಟರೆ ಕಾಫಿಯ ಘಮ ಹೊರಟು ಹೋಗುತ್ತದೆ. ಹೀಗಾಗಿ ಕತ್ತಲು ಕತ್ತಲಿರುವ ಅಂಗಡಿಯಿಂದ ಕಾಫಿ ಪುಡಿ ತರುವುದೇ ಒಳ್ಳೆಯದು.

ಕಾಫಿಯ ಬಗ್ಗೆ ನಾನು ನೂರೆಂಟು ಸಲಹೆಗಳನ್ನು ಕೇಳಿದ್ದೇನೆ. ಅರೇಬಿಕಾ ಮತ್ತು ರೋಬಸ್ಟಾ ಎಂಬ ಎರಡು ತಳಿಯ ಕಾಫಿಗಳನ್ನು ಎಲ್ಲ ಕಡೆಯೂ ಬೆಳೆಯುತ್ತಾರೆ. ಅವುಗಳ ಪೈಕಿ ಅರೇಬಿಕಾ ಉತ್ತಮ . ರೋಬಸ್ಟಾ ಮಧ್ಯಮ. ರೋಬಸ್ಟಾಕ್ಕೆ ಘಾಟು ಜಾಸ್ತಿ, ಅರೇಬಿಕಾದಿಂದ ಮಾಡುವಷ್ಟು ಸೊಗಸಾದ ಕಾಫಿಯನ್ನು ರೋಬಸ್ಟಾದಿಂದ ಮಾಡಲು ಸಾಧ್ಯವಿಲ್ಲ. ಹಾಗೆಯೇ ಕಾಫಿ ಮಾಡುವುದಕ್ಕೆ ಬಳಸುವ ನೀರು ಕೂಡ ಕಾಫಿಯ ರುಚಿಯ ಮೇಲೆ ನೇರವಾದ ಪರಿಣಾಮ ಮಾಡುತ್ತದೆ. ಯಾವ ರಾಸಾಯನಿಕವೂ ಕರಗಿರದ ನೀರಲ್ಲೇ ಕಾಫಿ ಮಾಡಬೇಕು. ಕ್ಲೋರಿನ್ ಬೆರೆಸಿದ ಗಡುಸು ನೀರೇನಾದರೂ ಬಿದ್ದರೆ ಕಾಫಿ ಖತಂ.

ಒಳ್ಳೆಯ ಕಾಫಿ ಕುಡಿಯುವುದಕ್ಕೆ ಚಂದದ ಕಪ್ ಕೂಡ ಬೇಕು. ಆ ಮೇಲೆ ಚಿಟ್ಟೆಯದ್ದೋ, ಚಂದ್ರನದ್ದೋ ನವಿಲಿನದೋ ಚಿತ್ರವಿದ್ದರೆ ಆ ರುಚಿಯೇ ಬೇರೆ. ಅಂದಹಾಗೆ, ನೀವು ಕೊಳ್ಳುವ ಫಿಲ್ಟರ್ ತಾಮ್ರದ್ದೇ ಆಗಿದ್ದರೆ ಒಳ್ಳೆಯದು . ಯಾವತ್ತೂ ಕಾಫಿಯನ್ನು ಎರಡನೇ ಸಲ ಬಿಸಿ ಮಾಡಬಾರದು. ಒಂದು ಕಪ್ ಕಾಫಿಗೆ ಎರಡು ಚಮಚ ಕಾಫಿ ಪುಡಿ ಹಾಕಲೇಬೇಕು ‘ ಇವೆಲ್ಲ ನಿಯಮಗಳನ್ನೂ ಧಿಕ್ಕರಿಸಿ ಕಾಫಿ ಮಾಡುವವರನ್ನು ನೋಡಿದ್ದೇನೆ . ಹಿರಿಯ ಲೇಖಕರೊಬ್ಬರು ಕಾಫಿಗೆ ಬಳೆಯ ಸದ್ದು ಕೇಳಿಸಿದರೆ ರುಚಿಯಾಗಿರುತ್ತೆ ಅಂತ ತಮಾಷೆಯಾಗಿ ಹೇಳುತ್ತಿದ್ದರು. ಹಾಗಂತ ಅವರು ನಂಬಿದ್ದರು ಕೂಡ. ಈಗಲೂ ಅನೇಕ ಮನೆಗಳಿಗೆ ಹೋದಾಗ ಕಾಫಿ ಬೆರೆಸಿ ಕೊಡುತ್ತೇವೆ ಎನ್ನುತ್ತಾರೆ. ಟಿಎನ್ ಸೀತಾರಾಮ್ ಮನೆಯಲ್ಲಿ ಒಳ್ಳೆಯ ಕಾಫಿ ಖಾತ್ರಿ. ಕೆ.ಎಸ್.ನ ಪತ್ನಿ ವೆಂಕಮ್ಮ ಕೂಡ ಇಡೀ ದಿನ ನಾಲಗೆಯಲ್ಲಿ ಉಳಿಯುವಂಥ ಕಾಫಿ ಮಾಡಿಕೊಡುತ್ತಿದ್ದರು. ಅದನ್ನು ನೆನೆದೇ ವೈಯನ್ಕೆ

ನರಸಿಂಹರಾಯರು ಹೆಸರಾಂತ ಕವಿಗಳು

ಅವರಿಗೆ ಬೇಕು ಎರಡು ಜೊತೆ ಕಿವಿಗಳು

ಕೊಟ್ಟರೆ ಕಾಫಿ , ಎಂಥಾ ಕಾವ್ಯಕೂ ಮಾಫಿ

ಎಂಬ ಪದ್ಯ ಬರೆದಿದ್ದರು ಅಂತ ನಾವೆಲ್ಲ ಊಹಿಸಿಕೊಂಡು ಸಂತೋಷಪಡುತ್ತಿದ್ದೆವು.

ಕಾಫಿ ಮಾಡುವುದು ಕಲೆ , ವಿಜ್ಞಾನ ಅಂತೆಲ್ಲ ಹೇಳುವವರನ್ನು ಕಂಗೆಡಿಸುವಂತೆ ಗಾಂಧೀಬಜಾರಿನ ಹೋಟೆಲುಗಳಲ್ಲಿ ಗಂಟೆಗೆ ನೂರು ಕಾಫಿ ಮಾಡಿ ಕೊಡುವ ಚಾಣಾಕ್ಷರಿದ್ದಾರೆ. ಹಾಗಿದ್ದರೂ ಕಾಫಿ ಬಗ್ಗೆ ಬರೆಯುವುದು ಕೊರೆಯುವುದು ಇಷ್ಟವೇ . ಈಗಂತೂ ಹಾಲಿನ ಸತ್ವವನ್ನೆಲ್ಲ ಹೀರಿ ಬಿಳಿಯ ದ್ರವವೊಂದು ಪ್ಯಾಕೇಟುಗಳಲ್ಲಿ ಮನೆ ಮನೆ ತಲುಪುತ್ತಿರುವಾಗ, ಕಾಫಿಗೆ ಒಳ್ಳೆಯ ಕಾಲವೇನಲ್ಲ. ಆದರೆ ಅಬ್ಸೆಸಿವ್ ಕಾಫಿ ಡಿಸಾರ್ಡರ್ ಇದ್ದ ಎಲಿಯಟ್ ಹೇಳಿದ್ದು – I have measured out my life with coffee spoons . ಬದುಕನ್ನು ಕಾಫಿ ಚಮಚಾದಲ್ಲಿ ಅಳೆಯೋದೇ ಒಂದು ಸುಖವಲ್ಲವೇ !

ನಾನು ಕುಡಿದ ರುಚಿಯಾದ ಕಾಫಿಯ ಪೈಕಿ ರವಿ ಬೆಳಗೆರೆಯ ಆಫೀಸಿನ ಕಾಫಿಯೂ ಒಂದು. ನಿವೇದಿತಾ ಇದ್ದಾಗ ಅಲ್ಲಿಗೆ ಹೋದಾಗೆಲ್ಲ ಸೊಗಸಾದ ಕಾಫಿ ಮಾಡಿಕೊಡುತ್ತಿದ್ದರು. ಆ ಕಾಫಿ ಕಡುವಾಗಿ, ಎಷ್ಟು ಬೇಕೋ ಅಷ್ಟೇ ಸಕ್ಕರೆ ಹೊತ್ತುಕೊಂಡಿರುತ್ತಿತ್ತು. ಆ ಕಾಫಿಯ ತಲೆಯ ಮೇಲೆ ಒಂಚೂರು ಡಿಕಾಕ್ಷನ್ ಹಾಕಿ ಕೊಡುತ್ತಿದ್ದರು. ಹೀಗಾಗಿ ಪರಿಮಳ, ರುಚಿ ಮತ್ತು ಬಣ್ಣ ಸಮಾನವಾಗಿ ಬೆರೆತು ರವಿ

ಬೆಳಗೆರೆಯ ಮಾತೂ ಸೇರಿಕೊಂಡು ಕಾಫಿ ದೈವತ್ವಕ್ಕೇರುತ್ತಿತ್ತು.

ಬೆಂಗಳೂರಿನಲ್ಲಿ ಶಂಕರಪುರಂನ ಬ್ರಾಹ್ಮಣರ ಕಾಫಿ ಬಾರ್ ಇಡ್ಲಿಗೆ ಹೆಸರುವಾಸಿ. ವಡೆಯೂ ಗರಿಗರಿಯಾಗಿರುತ್ತದೆ. ಆದರೆ ಅಲ್ಲಿಯ ಕಾಫಿ ನನಗಷ್ಟೇನೂ ಇಷ್ಟವಿಲ್ಲ. ಅದಕ್ಕಿಂತ ಗಾಂಧೀಬಜಾರ್ ಸರ್ಕಲ್ಲಿನ ಎಸ್ ಎಲ್ ವಿಯ ಕಾಫಿ ಸೊಗಸು, ತಾಜಾ ತಿಂಡಿ, ಬೈಟೂ ಕಾಫಿ, ಸೌತ್ ಕಿಚನ್, ಚಾಮರಾಜಪೇಟೆಯಲ್ಲಿ ಐತಾಳರು ನಡೆಸುತ್ತಿದ್ದ ಎಸ್ ಎಲ್ ವಿ ಕೂಡ ಒಳ್ಳೆಯ ಕಾಫಿ ಪಾಯಿಂಟುಗಳು. ನನ್ನ ಗೆಳೆಯ ಕಟ್ಟೆ ಗುರುರಾಜ್ ಆಫೀಸಿಗೆ ಹೋಗುವಾಗೆಲ್ಲ ಎಸ್ ಎಲ್ ವಿಗೆ ಹೋಗಿ ಅಲ್ಲಿ ಕಾಫಿ ಮಾಡುವವನು ತನಗೆ ಬೇಕಾದವನಾ ಅಂತ ನೋಡಿ, ಆತ ಇದ್ದರೆ ಮಾತ್ರ ಕಾಫಿ ಕುಡಿಯುವುದು ವಿಶ್ವಪ್ರಸಿದ್ಧ ಸ್ವಾರಸ್ಯಕರ ಪ್ರಸಂಗ. ಆ ಬಗ್ಗೆ ಇನ್ನೊಮ್ಮೆ ಹೇಳುವೆ.

ಕೆಲವು ವರ್ಷಗಳ ಹಿಂದೆ ಧಾರವಾಡದಲ್ಲಿ ಜಿ ಎಸ್ ಆಮೂರರ ಮನೆಗೆ ಹೋಗಿದ್ದೆ. ಆಗಲೇ ಅವರಿಗೆ ತೊಂಬತ್ತು ತುಂಬಿತ್ತೆಂದು ಕಾಣುತ್ತದೆ. ಅವರ ಪತ್ನಿಗೆ 86 ಇದ್ದಿರಬೇಕು. ನಾವು ಹೋದ ಸಂತೋಷಕ್ಕೆ ಅವರು ಪತ್ನಿಯತ್ತ ತಿರುಗಿ ಕಾಫಿ ಮಾಡಲ್ವಾ ಅಂತ ಕೇಳಿದರು. ನಡೆಯುವುದಕ್ಕೂ ಕಷ್ಟಪಡುತ್ತಿದ್ದ ಅವರ ಪತ್ನಿಯವರ ಕೈ ನಡುಗುತ್ತಿತ್ತು. ಅವರು ಒಳಗೆ ಹೋಗಿ ಒಂದು ಸ್ಟೀಲು ತಟ್ಟೆಯಲ್ಲಿ ನಾಲ್ಕು ಗ್ಲಾಸುಗಳನ್ನಿಟ್ಟುಕೊಂಡು ಕಾಫಿ ತಂದರು. ಅವರ ನಡುಗುತ್ತಿದ್ದ ಕೈಯಲ್ಲಿ ಕಾಫಿ ಗ್ಲಾಸು ಕಟಕಟಿಸುತ್ತಿತ್ತು. ಆ ದೃಶ್ಯ, ಆ ಕಾಫಿ, ಆ ಅಕ್ಕರೆ ಮನಸ್ಸಿನಲ್ಲಿ ಹಾಗೇ ಕೂತುಬಿಟ್ಟಿದೆ.

ಒಂದು ಎಚ್ಚರಿಕೆ. ದಕ್ಷಿಣ ಕನ್ನಡಕ್ಕೆ ಹೋದಾಗ, ಉತ್ತರ ಕರ್ನಾಟಕಕ್ಕೆ ಹೋದಾಗ ಕಾಫಿ ಕುಡಿಯಬಾರದು. ಫೈವ್ ಸ್ಟಾರ್ ಹೊಟೇಲುಗಳಲ್ಲಿ ಕಾಫಿ ಕುಡಿಯಬಾರದು. ಹೈವೇಯ ರಸ್ತೆ ಬದಿ ಹೋಟೆಲುಗಳಲ್ಲಿ ಕಾಫಿ ಮುಟ್ಟಬಾರದು. ಟೀ ಎಂಬುದು ರಮ್ ಇದ್ದಂತೆ. ಉಲ್ಲಾಸ ತುಂಬುತ್ತದೆ. ಕಾಫಿ ಸ್ಕಾಚ್ ವಿಸ್ಕಿಯಂತೆ, ಘನತೆ ಉಳ್ಳದ್ದು ಆಗಿರುತ್ತದೆ. ಯಾವುದು ತುಂಬ ಘನತೆಯುಳ್ಳದ್ದಾಗಿರುತ್ತದೋ ಅದನ್ನು ಕೆಡಿಸುವುದು ಸುಲಭ.

ಅಂದಹಾಗೆ, ಕಾಫಿಯನ್ನು ಸಖ ಅಂದಿರುವುದು ಯಾಕೆ ಗೊತ್ತೇ? ಕಾಫಿ ಗಂಡಿಗಾಗಲೀ ಹೆಣ್ಣಿಗಾಗಲೀ ಒಳ್ಳೆಯ ಸಖ. ಸಖಿ ಅಲ್ಲ!

(ಕೃಪೆ–ಅವಧಿ)

■



ಅಯ್ಯೋ ದೇವರೇ !
ನಾನು ರಾತ್ರಿ ಕೆಲಸ ಮಾಡೋ ಕಂಪನಿಯ ಓನರ್
ನನ್ನ day job boss ಸೇ ಆಗ್ಬೇಕೇ?

# ಘಮಘಮ ಮಸಾಲೆ ದೋಸೆ

ಸಂಪಾದಕರು: **ವೈ. ಎನ್. ಗುಂಡೂರಾವ್**

ಅಂಕಿತ ಪುಸ್ತಕ, ಗಾಂಧಿ ಬಜಾರ್

ಪ್ರತಿಗಳಿಗೆ 080 – 26617100 – 9019190502

ಮಸಾಲೆ ದೋಸೆ ಎಂದರೆ ಕಿರಿಯರಿಂದ ಹಿರಿಯರವರೆಗೆ ಬಾಯಲ್ಲಿ ನೀರೂರುವುದು ಸಹಜ. ಅದರಲ್ಲೂ ಅವರಿಷ್ಟದ ಹೋಟೆಲಿನ ದೋಸೆ ಎಂದರೆ ಇನ್ನೂ ಒಂದು ಹೆಜ್ಜೆ ಮುಂದೆ. ಮಸಾಲೆ ದೋಸೆ ಕುರಿತಾದ ಅನೇಕ ಹಿರಿಯ ಕಿರಿಯರ ಬರಹಗಳನ್ನು ಆಯ್ದು ಸಂಕಲಿಸಿರುವ ವೈ.ಎನ್.ಗುಂಡೂರಾವ್ ಅವರು ಸ್ವತ: ಮಸಾಲೆ ದೋಸೆ ಪ್ರಿಯರು. ಇಲ್ಲದಿದ್ದರೆ ಇಂಥಾದ್ದೊಂದು ಸಾಹಸಕ್ಕೆ ಕೈ ಹಾಕುವುದು ಕಷ್ಟ. ಸಂಕಲನ ಬಹಳ ಮನೋಹರವಾಗಿದೆ. ಒಂದು ತಿಂಡಿಯ ಬಗೆಗೆ ಒಬ್ಬ ಲೇಖಕನ ವಿಭಿನ್ನ ಒಳನೋಟಗಳನ್ನು ಈ ಲೇಖನಗಳಲ್ಲಿ ಕಾಣಬಹುದು. ಈ ಕಾಲದಲ್ಲಿ 25 ರೂಪಾಯಿಗೆ ಒಂದು ಮಸಾಲೆ ದೋಸೆ ಸಿಗುವ ಹೋಟೆಲುಗಳು ಕಡಿಮೆ. ಆದರೆ ಈ ಸಂಕಲದಲ್ಲಿ ವೈವಿಧ್ಯಮಯವಾದ ರುಚಿ ಹತ್ತಿಸುವ 25 ಲೇಖನಗಳಿವೆ. ಹೇಗೆ ದೋಸೆಯನ್ನು ಅವರವರೇ ತಿಂದು ಆಸ್ವಾದಿಸಿ ಆನಂದಿಸಬೇಕೋ ಹಾಗೆ ಈ ಸಂಕಲದಲ್ಲಿರುವ ಲೇಖನಗಳನ್ನು ಅವರವರೇ ಓದಿ ಆಸ್ವಾದಿಸಬೇಕು. ಇಂಥಾ ಒಂದು ಅಪರೂಪದ ಸಂಕಲವನ್ನು ಸಾರಸ್ವತ ಲೋಕಕ್ಕೆ ನೀಡಿದ ವೈ.ಎನ್.ಗುಂಡೂರಾವ್ ಅವರು ಅಭನಂದನೀಯರು.

